
ಜನಶಕ್ತಿ
ವಿಶೇಷ ಸಂಚಿಕೆ
2009
ಸ್ವಾತಂತ್ರ್ಯ
ನಿರಾತಂಕವೇ?

ಶುಭಾಶಯಗಳೊಂದಿಗೆ

ಕೋಟೆಕಾರು ವ್ಯವಸಾಯ ಸೇವಾ ಸಹಕಾರಿ ಬ್ಯಾಂಕು (ರಿ)

ನಂ. ಡಿ.ಆರ್.ಜಿ.ಎಸ್. : 2551 : 76-77

ಅಂಚೆ : ಕೋಟೆಕಾರು, ದಕ್ಷಿಣ ಕನ್ನಡ - 575022

ದೂರವಾಣಿ : ಮುಖ್ಯ : ಕಚೇರಿ ಕೋಟೆಕಾರು : 280824, ಶಾಖೆ ಉಳ್ಳಾಲ - ಪೆರಮನ್ನೂರು : 466410,
ದೇವಳಕಟ್ಟೆ : 203547

ಸ್ಥಾಪನೆ : 1956

→ ನಮ್ಮ ಬ್ಯಾಂಕು 2008-09ನೇ ಸಾಲಿನಲ್ಲಿ 81 ಕೋಟಿ ರೂ.ಗಳ ವ್ಯವಹಾರ ನಡೆಸಿ ದಾಖಲೆ ಗರಿಷ್ಠ 44 ಲಕ್ಷ ರೂ.ಗಳ ಲಾಭ ಗಳಿಸಿರುತ್ತದೆ.

→ ನಮ್ಮ ಬ್ಯಾಂಕಿನಲ್ಲಿ ಚಿನ್ನಾಭರಣ ಈಡಿನ ಸಾಲ, ಗೃಹೋಪಯೋಗಿ ವಸ್ತು ಖರೀದಿ ಸಾಲ, ಇತರೆ ಉದ್ದೇಶ ಸಾಲ, ಕೃಷಿ ಸಾಲ ಮತ್ತು ಗೃಹ ಸಾಲಗಳನ್ನು ನೀಡಲಾಗುತ್ತಿದೆ.

→ ನಮ್ಮ ಬ್ಯಾಂಕಿನಲ್ಲಿ ನಿರಖು ಠೇವಣಾತಿಗೆ (ಫಿಕ್ಸೆಡ್ ಡೆಪೋಸಿಟ್) ಗರಿಷ್ಠ ಬಡ್ಡಿಯನ್ನು ನೀಡುತ್ತೇವೆ.

ನಿರಖು ಠೇವಣಾತಿಯ ಬಡ್ಡಿಯ ವಿವರಗಳು

46 ದಿವಸಗಳಿಂದ	6 ತಿಂಗಳಿಗೆ	- ಶೇಕಡಾ 6
7 ತಿಂಗಳಿಂದ	1 ವರ್ಷದವರೆಗೆ	- ಶೇಕಡಾ 8
13 ತಿಂಗಳಿಂದ	2 ವರ್ಷದವರೆಗೆ	- ಶೇಕಡಾ 10.50
25 ತಿಂಗಳಿಂದ	3 ವರ್ಷದವರೆಗೆ	- ಶೇಕಡಾ 11
3 ವರ್ಷಕ್ಕಿಂತ	ಮೇಲ್ಪಟ್ಟು	- ಶೇಕಡಾ 11.50

60 ವರ್ಷಕ್ಕಿಂತ ಮೇಲಿನ ಹಿರಿಯ ನಾಗರಿಕರಿಗೆ ಶೇಕಡಾ 1 ಹೆಚ್ಚು ಬಡ್ಡಿ ನೀಡಲಾಗುವುದು.
ಆವರ್ತನ ನಿಧಿ(ಆರ್.ಡಿ) ಗೆ ಶೇಕಡಾ 10 ಬಡ್ಡಿ ನೀಡಲಾಗುತ್ತಿದೆ.
ಸಾಲ ವಸೂಲಾತಿಯಲ್ಲಿಯೂ 96 ಸಾಧನೆ ಮಾಡಿರುತ್ತೇವೆ.

ವಂದನೆಗಳೊಂದಿಗೆ,

ಶ್ರೀ ಎಂ.ಎ. ಮಹಮ್ಮದ್ ಬಶೀರ್.	ಶ್ರೀ ದಾಮೋದರ.ಪಿ.	ಶ್ರೀ ಕೆ. ಕೃಷ್ಣಪ್ಪ ಸಾಲ್ಯಾನ್
ಅಧ್ಯಕ್ಷರು	ಪ್ರಧಾನ ವ್ಯವಸ್ಥಾಪಕರು	ಉಪಾಧ್ಯಾಕ್ಷರು

ನಿರ್ದೇಶಕರು


ಶ್ರೀ ಗಂಗಾಧರ ಉಳ್ಳಾಲ. ಶ್ರೀ ಕೃಷ್ಣ ಶೆಟ್ಟಿ ಕೋಟೆಕಾರು, ಶ್ರೀ ಅಬಗದಲ್ ಅಜೀಜ್ ಪಿ. ಇ.,
ಶ್ರೀಮತಿ ನಳಿನಾಕ್ಷಿ ಜಿ.ಎಸ್, ಶ್ರೀ ನಾರಾಯಣ ನಲಿಕೆ.

ಸ್ವಾತಂತ್ರ್ಯೋತ್ಸವ

ವಿಶೇಷ ಸಂಚಿಕೆ

2009

ಜನಶಕ್ತಿ
ಕನ್ನಡ ವಾರಪತ್ರಿಕೆ
ನಂ.12 18ನೇ ಅಡ್ಡ ರಸ್ತೆ, ಸಂಪಂಗಿರಾಮ ನಗರ,
ಬೆಂಗಳೂರು-560027, ದೂರವಾಣಿ : 080-22236462
js_weekly @ yahoo.com
Blog : www.janashakthi.wordpress.com



ಒಳಪುಟಗಳಲ್ಲಿ ....

ಪುಟ

ಕೃತಜ್ಞತೆಗಳು

- ಲೇಖಕರಿಗೆ
- ಜಾಹಿರಾತುದಾರರಿಗೆ
- ಕ್ರಿಯಾ ಪ್ರಕಾಶನದ ಚಂದ್ರು, ರಾಮು ಎಲ್ಲಾ ಸಂಗಾತಿಗಳಿಗೆ,
- ಮುಖಪುಟ ರಚಿಸಿ ಅಕ್ಷರ ಜೋಡಿಸಿ ವಿನ್ಯಾಸಗೊಳಿಸಿದ ವೀರಣ್ಣ ಕಲ್ಮನಿ, ಮುದ್ರಣದ ಘಟಕದ ಕೆಲಸಗಾರರು ಹಾಗೂ ಸಹಕರಿಸಿದ ಎಲ್ಲರಿಗೂ

ಬೆಲೆ ; ರೂ 20 /-

JANASHAKTHI kannada vara patrike :
Printed and Published by G.N. NAGARAJA.
On behalf of / Woned by Communist Party Of India(Marxist)
and Printed by : Kriya Prakashana,
Editor S. Y. GURUSHANTH.
No 12, 18th Cross, S.R.Nagar, BANGALORE -560027

ಬೆಳಕನ್ನರಸಿ

ದೇಶ 63ನೇ 'ಸ್ವಾತಂತ್ರ್ಯೋತ್ಸ'ವನ್ನು ಆಚರಿಸಿ ಆಗಿದೆ. ಇಷ್ಟು ವರ್ಷಗಳ ನಂತರವು ನಾವುಗಳಿಸಿದ 'ಸ್ವಾತಂತ್ರ್ಯ'ದ ಸ್ವರೂಪದ ಕುರಿತು ಮತ್ತಷ್ಟು, ಮತ್ತಷ್ಟು ಚಿಂತಿಸಬೇಕಾದ ಸನ್ನಿವೇಶ ಇದೆ.

ದೇಶಕ್ಕೆ 'ಸ್ವಾತಂತ್ರ್ಯ' ಬಂತು. ಆದರೆ ಅದು ಜನರ ಬದುಕಿನಲ್ಲಿ ಏನು ಬದಲಾವಣೆ ತಂತು ಎಂಬ ಅಥವಾ ನಿರೀಕ್ಷಿಸಿದ ಬದಲಾವಣೆಯನ್ನು ತರಲಿಲ್ಲ ಯಾಕೆ ತರಲಿಲ್ಲ ಎಂಬ ಪ್ರಶ್ನೆಯನ್ನು ಇಂದು ಮತ್ತೆ ಮತ್ತೆ ಕೇಳಿ ಕೊಳ್ಳಬೇಕಾದಂತಹ ಅಗತ್ಯ ಬಂದೊದಗುತ್ತಿದೆ.

ತಮ್ಮ ವೈಯಕ್ತಿಕ ಜೀವನದ ಸುಖ – ಸಂತೋಷಗಳನ್ನು, ತಮ್ಮ ಜೀವನದ ಸರ್ವಸ್ವವನ್ನು, ತಮ್ಮ ಅಮೂಲ್ಯ ಪ್ರಾಣಗಳನ್ನು ತ್ಯಾಗ ಮಾಡಿದ ಅಸಂಖ್ಯಾತ ಸ್ವಾತಂತ್ರ್ಯ ಹೋರಾಟಗಾರರ ಮಹಾನ್ ಆಶೋತ್ತರಗಳು ಇಂದು ಏನಾಗಿವೆ ? ದೇಶ 'ಸ್ವಾತಂತ್ರ್ಯ' ಪಡೆದ 63 ವರ್ಷಗಳ ನಂತರವೂ ಸಹ ಮಹಿಳೆಯರು ಅಪೌಷ್ಠಿಕತೆಯಿಂದ ನರಳುತ್ತಿದ್ದಾರೆ. ಸರ್ಕಾರಿ ಅಂಕಿ ಅಂಶಗಳ ಪ್ರಕಾರವೇ ಭಾರತದಲ್ಲಿ ಬಡತನ ರೇಖೆಯು ಕೆಳಗಿರುವ ಸಂಖ್ಯೆ ಶೇ 37. ಆದರೆ ವಾಸ್ತವ ಇನ್ನೂ ಭೀಕರವಾಗಿದೆ. ಇಂತಹ ಸ್ಥಿತಿ ನಾವು ಗಳಿಸಿದ 'ಸ್ವಾತಂತ್ರ್ಯ'ದ ಸ್ವರೂಪವೆನೆಂದು ಸಾರುತ್ತಿದೆ. ಹಸಿವು, ಬಡತನ, ಅಸಕ್ಷರತೆ, ಜಾತೀಯತೆ, ಕೋಮುವಾದ, ಭಯೋತ್ಪದನೆ, ನೋವು ನರಳಾಟಗಳಿಂದ ಜನತೆಗೆ ಮುಕ್ತಿ ಎಂದು ಎಂಬ ಪ್ರಶ್ನೆಯ ಹಿನ್ನೆಲೆಯಲ್ಲಿ ನಾವು ಗಳಿಸಿರುವ ಸ್ವಾತಂತ್ರ್ಯದ ಸ್ವರೂಪವೇನು? ಅದಕ್ಕೆ ಕಾರಣವಾದ ಚಾರಿತ್ರಿಕ ಹಿನ್ನೆಲೆ ಏನು ಎಂಬುದನ್ನು ಅರ್ಥೈಸಿಕೊಳ್ಳಬೇಕಾದ ಅಗತ್ಯವಿದೆ.

ಸುಧೀರ್ಘ ಸ್ವಾತಂತ್ರ್ಯ ಚಳುವಳಿಯ ವಿವಿಧ ಕಾಲಘಟ್ಟಗಳಲ್ಲಿ ವಿವಿಧ ರಾಜಕೀಯ ಶಕ್ತಿಗಳು, ವಿವಿಧ ರಾಜಕೀಯ ಪಕ್ಷಗಳು, ವಿವಿಧ ವರ್ಗಗಳು ವಹಿಸಿದ ಐತಿಹಾಸಿಕ ಪಾತ್ರವೇನು ಎಂಬುದು ತುಂಬಾ ಆಸಕ್ತಿದಾಯಕವಾದ ವಿಚಾರವೇ.

ಇದು ಕೇವಲ ಇತಿಹಾಸವನ್ನು ಕೆದಕುವ 'ಕುತೂಹಲ'ದ ಪ್ರಶ್ನೆಯಲ್ಲ. ಬದಲಿಗೆ ದೇಶ ಮುಂದೆ ಸಾಗಬೇಕಾದ ಹಾದಿಗೆ ಬೆಳಕನ್ನು ಅರಸುವ ಒಂದು ಶೋಧವೂ ಹೌದು.

'ಜನಶಕ್ತಿ' ಕನ್ನಡ ವಾರಪತ್ರಿಕೆಯು ಹೊರತರುತ್ತಿರುವ ಈ 'ಸ್ವಾತಂತ್ರ್ಯ'ದ ಕುರಿತ ವಿಶೇಷ ಸಂಚಿಕೆಯಲ್ಲಿ ಈ ಮೇಲೆ ಪ್ರಸ್ತಾಪಿಸಲಾದ ವಿವಿಧ ಆಯಾಮಗಳಿಗೆ ಸಂಬಂಧಪಟ್ಟ ವಿಚಾರಪೂರ್ಣ, ಸಂಗ್ರಹಯೋಗ್ಯ ಲೇಖನಗಳಿವೆ.

ಎಂದಿನಂತೆ 'ಜನಶಕ್ತಿ'ಯ ಓದುಗರು, ಹಿತೈಷಿಗಳು ವಿಶೇಷ ಸಂಚಿಕೆಯ ಪ್ರಯೋಜನ ಪಡೆಯುವರೆಂಬ ನಿರೀಕ್ಷೆ ನಮ್ಮದು.

ಎಲ್ಲರಿಗೂ ಶುಭಾಶಯಗಳು,

ಎಸ್. ವೈ. ಗುರುಶಾಂತ್.
ಸಂಪಾದಕ


ಸ್ವಾತಂತ್ರ್ಯ ಆಂದೋಲನ ಮತ್ತು ಕಾಂಗ್ರೆಸ್ ಪಕ್ಷ

ರಾಜಿ-ಹೋರಾಟ-ರಾಜಿಯ ಕಾರ್ಯತಂತ್ರ


ಇ.ಎಂ.ಎಸ್

- ಇ.ಎಂ.ಎಸ್. ನಂಬೂದುರಿಪಾಡ್ ಬರಹ ಆಧರಿಸಿ
ಎನ್.ಕೆ. ವೇದರಾಜ್

1857ರ ನಂತರ ನೇರ ಬ್ರಿಟಿಶ್ ಆಳ್ವಿಕೆಯಲ್ಲಿ ಭಾರತದಲ್ಲಿ ಸಂಭವಿಸಿದ ಹೊಸ ವರ್ಗಗಳ ಉದಯದ ಹಿನ್ನೆಲೆಯಲ್ಲಿ ಒಂದೆಡೆ ಕಲ್ಕತ್ತಾ, ಮುಂಬೈ, ಮದ್ರಾಸ್ ಮತ್ತಿತರ ಪಟ್ಟಣಗಳಲ್ಲಿ ವಿದ್ಯಾವಂತ ಮಧ್ಯಮ ವರ್ಗದ ರಾಜಕೀಯ ಚಳುವಳಿಗಳು ಬೆಳೆಯಲಾರಂಭಿಸಿದವು. ಇನ್ನೊಂದೆಡೆ ಬ್ರಿಟಿಶ್ ಆಳ್ವಿಕೆಗೆ ಅನುಕೂಲಕರವಾದ ಒಂದು ಸಾಮಾಜಿಕ ಬುನಾದಿಯನ್ನು ಕಟ್ಟಬೇಕು, ಅದಕ್ಕಾಗಿ ವಿದ್ಯಾವಂತ ವರ್ಗದಲ್ಲಿ ಬಂಡವಾಳಶಾಹಿ ಉದಾರವಾದವನ್ನು ಪ್ರೋತ್ಸಾಹಿಸಲು ಬೆಂಬಲ ನೀಡಬೇಕು ಎಂದು ಕೆಲವು ಬ್ರಿಟಿಶ್ ಆಡಳಿತಗಾರರು ಪ್ರತಿಪಾದಿಸುತ್ತಿದ್ದರು. ಇದರ ಫಲವಾಗಿ ಮನವಿ, ಬೇಡಿಕೆಗಳ ಒಂದು ಸಂಘಟನೆಯಾಗಿ ಹುಟ್ಟಿಕೊಂಡ "ಭಾರತೀಯ ರಾಷ್ಟ್ರೀಯ ಕಾಂಗ್ರೆಸ್" ಎರಡು ದಶಕಗಳ ಅನುಭವದ ನಂತರ ಜನಸಾಮಾನ್ಯರನ್ನು ಅಣಿನೆರೆಸುವ ಸಂಘಟನೆಯಾಗಿ ಪರಿವರ್ತನೆಗೊಳ್ಳ ಬೇಕಾಯಿತು. ಮುಂದೆ ಗಾಂಧೀಜಿ ಕಾಂಗ್ರೆಸ್‌ನ್ನು ಒಂದು ಬ್ರಿಟಿಶ್-ವಿರೋಧಿ ಸಂಯುಕ್ತ ರಂಗವಾಗಿ ಬೆಳೆಸಲು ಯತ್ನಿಸಿದರು. ಆದರೆ ವಾಸ್ತವವಾಗಿ ಅದು ಬಂಡವಾಳಶಾಹಿ-ಭೂಮಾಲಕ ವರ್ಗಗಳ ಪಕ್ಷವಾಗಿಯೇ ಸ್ವಾತಂತ್ರ್ಯ ಹೋರಾಟದ ನೇತೃತ್ವದಲ್ಲಿತ್ತು. ಸ್ವಾತಂತ್ರ್ಯದ ಉದಯದ ಸಂದರ್ಭದಲ್ಲಿ ಅಧಿಕಾರದ ನಿರೀಕ್ಷೆಯಲ್ಲಿದ್ದ ಕಾಂಗ್ರೆಸಿಗರ ವರ್ತನೆಗಳಿಂದ ಖಿನ್ನರಾದ "ಗಾಂಧೀಜಿ ಕಾಂಗ್ರೆಸನ್ನು ವಿಸರ್ಜಿಸಿ 'ಲೋಕ ಸೇವಕ ಸಂಘ' ವನ್ನಾಗಿ ಮಾಡಿ, ಕಾಂಗ್ರೆಸಿಗರು ತಮಗೆ ಸೂಕ್ತವೆನಿಸಿದ ಪಕ್ಷಗಳನ್ನು ಸೇರಿಕೊಳ್ಳಲಿ ಅಥವಾ ರಚಿಸಿಕೊಳ್ಳಲಿ" ಎಂದರು. ನೆಹರೂ ಸೇರಿದಂತೆ ಬಹುಪಾಲು ಕಾಂಗ್ರೆಸಿಗರು ಅದಕ್ಕೆ ಕಿವಿಗೊಡಲಿಲ್ಲ.


ನೆಹರು - ಗಾಂಧೀಜಿ ಸಮಲೋಚನೆ

"ಸ್ವಾತಂತ್ರ್ಯ ಮತ್ತು ತಮ್ಮ ಶ್ರಮದ ಫಲಗಳನ್ನು ಅನುಭವಿಸುವುದು ಹಾಗೂ ಬದುಕಿನ ಅಗತ್ಯಗಳನ್ನು ಹೊಂದುವುದು, ಆ ಮೂಲಕ ಬೆಳವಣಿಗೆಯ ಪೂರ್ಣ ಅವಕಾಶಗಳನ್ನು ಪಡೆಯುವುದು ಇತರ ಎಲ್ಲಾ ಜನತೆಯಂತೆ ಭಾರತದ ಜನತೆಯ ಅವಿಭಾಜ್ಯ ಹಕ್ಕು ಎಂದು ನಾವು ನಂಬುತ್ತೇವೆ. ಯಾವುದೇ ಒಂದು ಸರಕಾರ ಜನತೆಗೆ ಈ ಹಕ್ಕುಗಳನ್ನು ವಂಚಿಸಿದರೆ ಮತ್ತು ಅವರನ್ನು ದಮನ ಮಾಡಿದರೆ ಅದನ್ನು ಬದಲಿಸುವ ಅಥವಾ ನಿರ್ಮೂಲ ಮಾಡುವ ಹಕ್ಕು ಕೂಡಾ ಜನತೆಗಿದೆ ಎಂದು ನಾವು ನಂಬುತ್ತೇವೆ.........."

ಹೀಗೆ ಆರಂಭವಾಗಿತ್ತು ಜನವರಿ 26, 1930 ರಂದು ದೇಶಾದ್ಯಂತ ಕೋಟ್ಯಂತರ ಭಾರತೀಯರು ಕೈಗೊಂಡ ಪ್ರತಿಜ್ಞೆ. ಇದು ಭಾರತೀಯ ಸ್ವಾತಂತ್ರ್ಯ ಆಂದೋಲನದ ಮತ್ತು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಇತಿಹಾಸದಲ್ಲಿಯೂ ಒಂದು ಮೈಲಿಗಲ್ಲು ಎಂದು ಪರಿಗಣಿಸಲಾಗುತ್ತದೆ. ಅದಕ್ಕೆ ನಾಲ್ಕು ವಾರಗಳ ಹಿಂದೆ ಲಾಹೋರಿನಲ್ಲಿ ಜವಾಹರಲಾಲ ನೆಹರೂರವರ ಅಧ್ಯಕ್ಷತೆಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನ ಕೈಗೊಂಡ ನಿರ್ಣಯದಂತೆ ಈ ಪ್ರತಿಜ್ಞೆಯೊಂದಿಗೆ ಮೊದಲ ಸ್ವಾತಂತ್ರ್ಯ ದಿನವನ್ನು ಆಚರಿಸಲಾಗಿತ್ತು.



1857 ಪ್ರಥಮ ಸ್ವಾತಂತ್ರ್ಯ ಚಳುವಳಿಯ ಚಿತ್ರ

ನಮ್ಮ ಸ್ವಾತಂತ್ರ್ಯ ಆಂದೋಲನದ ಆರಂಭದ ಘಟ್ಟ 1857ರ ಬಂಡಾಯದ ಸೋಲಿನೊಂದಿಗೆ ಮುಕ್ತಾಯವಾಗಿತ್ತು. ಅದನ್ನು ಅತ್ಯಂತ ಕ್ರೂರವಾಗಿ ದಮನ ಮಾಡಲಾಯಿತು. 1885ರ ಸುಮಾರಿಗೆ ಮೂಡಿಬಂದ ಹೊಸ ರಾಷ್ಟ್ರೀಯ ಸ್ವಾತಂತ್ರ್ಯ ಆಂದೋಲನ ಮೇಲ್ನೋಟಕ್ಕೆ ಅಗಸ್ಟ್ 15, 1947ರಂದು ಜಯಶಾಲಿಯಾಯಿತು, ಆದರೆ 1930ರ ಪ್ರತಿಜ್ಞೆ ಈಡೇರಿತೇ? ಅದು ಜನಗಳ ಮುಂದಿಟ್ಟ ಧ್ಯೇಯೋದ್ದೇಶಗಳನ್ನು ಈಡೇರಿಸುವ ಬದಲು ಹಲವು ಹೊಸ ಸಮಸ್ಯೆಗಳನ್ನು ಉಂಟು ಮಾಡಿತು. "ಈ ದಿನಾಚರಣೆ ನಾವು ಕಾಣದ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದಾಗ ಸೂಕ್ತವಾಗಿತ್ತು. ಈಗ! ನಾವು ಅದನ್ನು ಸ್ಪರ್ಶಿಸಿದ್ದೇವೆ. ಭ್ರಮನಿರಸನವಾದಂತಿದೆ"–ಹೀಗೆಂದು ಜನವರಿ 26, 1948ರಂದು ಗಾಂಧೀಜಿ ಉದ್ಗರಿಸಿದರು. ಏಕೆ ಹೀಗಾಯಿತು?

1857ರ ಬಂಡಾಯವನ್ನು ಬ್ರಿಟಿಶರು ಸಂಪೂರ್ಣ ದಮನ ಮಾಡಿದ 26 ವರ್ಷಗಳ ನಂತರ ಮೂಡಿಬಂದ ಮತ್ತೊಂದು ಸಂಘಟಿತ ರಾಷ್ಟ್ರೀಯ ಆಂದೋಲನವೇ ಈ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್. ಆದರೆ ಮೇಲೆ ಹೇಳಿದ ಪೂರ್ಣ ಸ್ವಾತಂತ್ರ್ಯದ ನಿರ್ಣಯವನ್ನು ಕೈಗೊಳ್ಳಲು ಅದಕ್ಕೆ 44 ವರ್ಷಗಳೇ ಹಿಡಿದವು. ಅದಾಗಿ 79ವರ್ಷಗಳ ನಂತರವೂ ಅದು ಪೂರ್ಣಗೊಂಡಿಲ್ಲ.


ಹೊಸ ವರ್ಗಗಳ ಉದಯ

1857–59ರ ಬಂಡಾಯಗಳು ರೈತಾಪಿ ಜನಸಮೂಹಗಳು ಮತ್ತು ಅವರನ್ನು ಶೋಷಿಸುತ್ತಿದ್ದ ಪಾಳೆಯಗಾರೀ ಪ್ರಭುಗಳು ಒಟ್ಟಾಗಿ ನಡೆಸಿದ ಹೋರಾಟಗಳು, ಆದರೆ ಒಂದು ಜಡ್ಡುಗಟ್ಟಿದ ಸಾಮಾಜಿಕ ವ್ಯವಸ್ಥೆಯನ್ನು, ವರ್ಣ–ಜಾತಿ ವ್ಯವಸ್ಥೆಯನ್ನು ಉಳಿಸಿಕೊಳ್ಳಲು ನಡೆಸಿದ ಹೋರಾಟಗಳು. ಅದು ಸ್ವಾಭಾವಿಕವಾಗಿಯೇ ವಿಫಲವಾಯಿತು. ಆದರೆ ನಂತರ ಮೂಡಿ ಬಂದ 'ಆಂದೋಲನ'ದ ಪಾತ್ರಧಾರಿಗಳು ಬ್ರಿಟಿಶ್ ಆಳ್ವಿಕೆಯ ಸ್ವರೂಪದಲ್ಲಿ ಮತ್ತು ಅವರ ಸಂಸ್ಕೃತಿಯಲ್ಲಿ "ಪ್ರಗತಿಶೀಲತೆ" ಯನ್ನು ಕಂಡು ಅದನ್ನು ಭಾರತದಲ್ಲಿಯೂ ತರಬೇಕೆಂದು ಬಯಸಿದವರು, ಆದ್ದರಿಂದಾಗಿ 1857–59ರ ಅವಧಿಯಲ್ಲಿ ಬ್ರಿಟಿಶರ ಪರವಾಗಿ ನಿಂತವರು; ಆದರೆ ತಮ್ಮ ದೇಶದಲ್ಲಿ 'ಪ್ರಗತಿಪರ' ಬದಲಾವಣೆ ತಂದ ಅದೇ ಬ್ರಿಟಿಶರು ಅದನ್ನು ಇಲ್ಲಿ ತರಲು ಅಡ್ಡಿ ಪಡಿಸಿದ್ದನ್ನು ಕಂಡು ಅವರೂ ಎದುರಾಗಿ ನಿಲ್ಲಬೇಕಾಯಿತು.

ವಾಸ್ತವವಾಗಿ ಈ ಹೊಸ ಸ್ವಾತಂತ್ರ್ಯ ಆಂದೋಲನಕ್ಕೆ ಭೌತಿಕ ಸನ್ನಿವೇಶ 1857–59ರ ಮೊದಲೇ ರೂಪುಗೊಂಡಿತ್ತು. ಇದು ಮೊದಲು ಕಂಡು ಬಂದದ್ದು ಬಂಗಾಳದಲ್ಲಿ. ಅದು ಬ್ರಿಟಿಶರು ಮೊದಲು ಬೇರೂರಿದ ಪ್ರದೇಶ. ವ್ಯಾಪಾರಿಗಳ ಸಂಘಟನೆಯಾಗಿ ಬ್ರಿಟಿಶ್ ಬಂಡವಾಳಶಾಹಿಗಳನ್ನು ಪ್ರತಿನಿಧಿಸಿದ ಈಸ್ಟ್ ಇಂಡಿಯಾ ಕಂಪನಿ ತನ್ನ ಹಿತಾಸಕ್ತಿಗಳನ್ನು

ಈಡೇರಿಸಿಕೊಳ್ಳಲು, ಅದರಲ್ಲೂ ಭೂ ಒಡೆತನಕ್ಕೆ ಸಂಬಂಧಪಟ್ಟಂತೆ ತಂದ ಕ್ರಮಗಳು ಹಳೆಯ ಪಾಳೇಗಾರಿ ಭೂಮಾಲಕರ ಸ್ಥಾನದಲ್ಲಿ ಹೊಸ (ಬಂಡವಾಳಶಾಹಿ) ಸ್ವರೂಪದ ಭೂಮಾಲಕರನ್ನು ಸೃಷ್ಟಿಸಿದವು. ಇವರು ವ್ಯಾಪಾರ ಮತ್ತು ಕೈಗಾರಿಕೆಗಳಲ್ಲಿ ಇದ್ದ ಬಂಡವಾಳಶಾಹಿಗಳಂತೆ ಭಾರತದಲ್ಲಿ ಬ್ರಿಟಿಶರು ಬಿತ್ತಿದ ಬಂಡವಾಳಶಾಹಿ ಬೀಜಗಳು ಮೊಳಕೆಯೊಡೆದು ಫಲ ನೀಡಬೇಕು ಎಂದು ಬಯಸುತ್ತಿದ್ದರು, ಆಧುನಿಕ ಶಿಕ್ಷಣ ಮತ್ತು ಕಾರ್ಯವಿಧಾನಗಳನ್ನು ಕಲಿತುಕೊಳ್ಳಲು ಆತುರದಿಂದಿದ್ದರು.


ಆದರೆ ಭಾರತದಲ್ಲಿ ಬಂಡವಾಳಶಾಹಿ ಬೆಳವಣಿಗೆ ಇಂಗ್ಲೆಂಡಿನಲ್ಲಿ ಅಥವಾ ಜಪಾನಿನಲ್ಲಿ ಆದಂತೆ ಆಗಲಿಲ್ಲ. ಏಕೆಂದರೆ ಇದನ್ನು ಆರಂಭಿಸಿದವರು ವಿದೇಶಿ ಆಳರಸರು. ಭಾರತದ ಕಚ್ಚಾ ವಸ್ತುಗಳನ್ನು ಕಡಿಮೆ ಬೆಲೆಗಳಲ್ಲಿ ಪಡೆದು ತಮ್ಮ ದೇಶದಲ್ಲಿ ಕೈಗಾರಿಕೆಗಳನ್ನು ಬೆಳೆಸಿ ಆ ಉತ್ಪನ್ನಗಳಿಗೆ ಇಲ್ಲಿ ಮಾರುಕಟ್ಟೆ ಸೃಷ್ಟಿಸುವುದಷ್ಟೇ ಅವರಿಗೆ ಬೇಕಾಗಿತ್ತು. ಆದರೆ ಅದಕ್ಕೆ ಅವರು ಒಂದು ಕೇಂದ್ರೀಕೃತ ಆಡಳಿತವ, ರೈಲು-ರಸ್ತೆ ಮತ್ತಿತರ ಸಂಪರ್ಕ ವ್ಯವಸ್ಥೆಗಳನ್ನು ಸೃಷ್ಟಿಸಲೇ ಬೇಕಾಗಿತ್ತು. ಕಾರ್ಲ್ ಮಾರ್ಕ್ಸ್ ವಿಶ್ಲೇಷಿಸಿದಂತೆ ತನ್ನ ಪ್ರಯೋಜನಕ್ಕಾಗಿ ಹಳೆಯ ಸಾಂಪ್ರದಾಯಿಕ ಸಮಾಜವನ್ನು ನಾಶಮಾಡುವ ಕೆಲಸ ಪೂರೈಸಿದ ವಿದೇಶಿ ಶಕ್ತಿ ಅದು ಬಯಸದಿದ್ದರೂ ಒಂದು ಸಾಮಾಜಿಕ ಕ್ರಾಂತಿಯ ಭೌತಿಕ ಬುನಾದಿಯನ್ನೂ ನಿರ್ಮಿಸಬೇಕಾಗಿ ಬಂತು. ಅದರೊಂದಿಗೇ ವಸಾಹತುಶಾಹೀ ಶೋಷಣೆ, ಪಕ್ಷಪಾತ ಮುಂತಾದವು ಹಾಗೂ ಅದನ್ನು ವಿಶ್ಲೇಷಿಸಬಲ್ಲ ಬುದ್ಧಿಜೀವಿ ವಿಭಾಗಗಳು ಹುಟ್ಟಿ ಬಂದವು. ಇದರ ಪರಿಣಾಮವಾಗಿ ರಾಜಕೀಯ ಚಳುವಳಿಗಳು, ಸಂಘಟನೆಗಳೂ ರಚನೆಗೊಳ್ಳಲಾರಂಭಿಸಿದವು. ಅವುಗಳನ್ನು ಸಂಯೋಜಿಸುವ ಸಂಘಟನೆಗಳೂ ಸ್ಥಾಪನೆಗೊಳ್ಳಲಾರಂಭಿಸಿದವು.


ಕಾರ್ಲ್ ಮಾರ್ಕ್ಸ್

ಈ ಸಂದರ್ಭದ ಒಂದು ಘಟನೆ ಇಡೀ ದೇಶದಲ್ಲಿ ವಿದ್ಯಾವಂತ ಭಾರತೀಯರ ನಡುವೆ ಕೋಲಾಹಲವನ್ನು ಎಬ್ಬಿಸಿತು. ಒಬ್ಬ ಬಂಗಾಳಿ ಯುವಕ, ಸುರೇಂದ್ರನಾಥ ಬ್ಯಾನರ್ಜಿ ಐ.ಸಿ.ಎಸ್‌ನಲ್ಲಿ ಉನ್ನತ ದರ್ಜೆ ಗಳಿಸಿದ. ಆದರೆ ಬ್ರಿಟಿಶ್ ಆಳರಸರು ಅವನಿಗೆ ಆಡಳಿತ ಸೇವೆಯಲ್ಲಿ ಸರಿಯಾದ ಸ್ಥಾನ ಕೊಡಲು ನಿರಾಕರಿಸಿದರು. ಆತನಿಗೆ ಹಲವು ರೀತಿಗಳಲ್ಲಿ ಕಿರುಕುಳ ನೀಡಿ, ಕೊನೆಗೆ ಕ್ಷುಲ್ಲಕ ಕಾರಣಗಳಿಗಾಗಿ ಆತನನ್ನು ಕೆಲಸದಿಂದ ವಜಾ ಮಾಡಲಾಯಿತು. ಇದರ ವಿರುದ್ಧ ದೇಶಾದ್ಯಂತ ಪ್ರತಿಭಟನೆ ವ್ಯಕ್ತವಾಯಿತು. ಈ ಹಿನ್ನೆಲೆಯಲ್ಲಿ ಕಲ್ಕತ್ತೆಯಲ್ಲಿ ಡಿಸೆಂಬರ್ 1883 ರಲ್ಲಿ ಒಂದು ರಾಷ್ಟ್ರ ಮಟ್ಟದ ಸಮ್ಮೇಳನ ನಡೆಯಿತು. ನಂತರ 1885ರಲ್ಲಿ ಎರಡನೇ ಸಮ್ಮೇಳನದ ಸಿದ್ಧತೆಗಳೂ ಆರಂಭವಾಗಿದ್ದವು.

ಕಾಂಗ್ರೆಸ್ ಸ್ಥಾಪನೆ


ಇದಕ್ಕೆ ಸಮಾಂತರವಾಗಿ ಇನ್ನೊಂದು ಪ್ರಯತ್ನವೂ ನಡೆಯುತ್ತಿತ್ತು. ಇದು ಬ್ರಿಟಿಶ್ ಉದಾರವಾದಿಗಳ ಪ್ರೋತ್ಸಾಹದಿಂದ ನಡೆಯುತ್ತಿದ್ದ ಪ್ರಯತ್ನ. ಕಲ್ಕತ್ತಾ, ಮುಂಬೈ, ಮದ್ರಾಸ್ ಮತ್ತಿತರ ಪಟ್ಟಣಗಳಲ್ಲಿ ವಿದ್ಯಾವಂತ ಮಧ್ಯಮ ವರ್ಗದ ರಾಜಕೀಯ ಚಳುವಳಿಗೆ ಕೆಲವು ಬ್ರಿಟಿಶರ ಬೆಂಬಲವೂ ಇತ್ತು. 1859ರಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಆಡಳಿತದಿಂದ ಇಡೀ ಭಾರತ ಬ್ರಿಟಿಶರ ನೇರ ಆಡಳಿತಕ್ಕೆ ಒಳಗಾದಂದಿನಿಂದ ಈ ಹೊಸ ಆಳರಸರಲ್ಲಿ ಎರಡು ಮುಖ್ಯ ಪ್ರವೃತ್ತಿಗಳು ಕಾಣುತ್ತಿದ್ದವು. ಬ್ರಿಟನ್ನಿನಲ್ಲೇ ಆಗ ಇದ್ದ ಕನ್ಸರ್ವೇಟಿವ್ ಪಕ್ಷ ಮತ್ತು ಲಿಬರಲ್ ಪಕ್ಷ(ಆಗಿನ್ನೂ ಲೇಬರ್ ಪಕ್ಷ ಹುಟ್ಟಿರಲಿಲ್ಲ)ಕ್ಕೆ ಅನುಗುಣವಾದ ಪ್ರವೃತ್ತಿಗಳು ಇವು. ಸಾಮಾನ್ಯವಾಗಿ ಕನ್ಸರ್ವೇಟಿವ್ ಪಕ್ಷದ ರಾಜಕಾರಣಿಗಳು, ಅದರ ಹಿತೈಷಿ ಅಧಿಕಾರಿಗಳು ಯಾವುದೇ ಚಳುವಳಿಯ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕಾನೂನು-ವ್ಯವಸ್ಥೆಯ ಬಲವನ್ನು ಪ್ರಯೋಗಿಸಬೇಕು ಎಂದು ಪ್ರತಿಪಾದಿಸಿದರೆ, ಲಿಬರಲ್ ಪಕ್ಷದ ರಾಜಕಾರಣಿಗಳು, ಅದರ ಹಿತೈಷಿ ಅಧಿಕಾರಿಗಳು ಬ್ರಿಟಿಶ್ ಆಳ್ವಿಕೆಗೆ ಅನುಕೂಲಕರವಾದ ಒಂದು ಸಾಮಾಜಿಕ ಬುನಾದಿಯನ್ನು ಕಟ್ಟಬೇಕು, ಅದಕ್ಕಾಗಿ ವಿದ್ಯಾವಂತ ವರ್ಗದಲ್ಲಿ ಬಂಡವಾಳಶಾಹಿ ಉದಾರವಾದವನ್ನು ಪ್ರೋತ್ಸಾಹಿಸಲು ಬೆಂಬಲ ನೀಡಬೇಕು ಎಂದು ಪ್ರತಿಪಾದಿಸುತ್ತಿದ್ದರು.


ಎ. ಓ. ಹ್ಯೂಮ್

ಆಗ ಉನ್ನತ ಬ್ರಿಟಿಶ್ ಅಧಿಕಾರಿಯಾಗಿದ್ದ ಅಲನ್

ಒಕ್ಟೇವಿಯನ್ ಹ್ಯೂಮ್(ಎ.ಓ.ಹ್ಯೂಮ್) ಇಂತಹ ಒಂದು ಪ್ರಯತ್ನದಲ್ಲಿ ತೊಡಗಿದ್ದರು. ಈತನಿಗೆ ಆಗ ಭಾರತದ ವೈಸರಾಯಿಯಾಗಿದ್ದ ಲಾರ್ಡ್ ಡಫರಿನ್ 'ಆಶೀರ್ವಾದ'ವೂ ಇತ್ತು ಎನ್ನಲಾಗುತ್ತದೆ. ಇದರ ಫಲವಾಗಿಯೇ 1885ರಲ್ಲಿ ಮುಂಬೈಯಲ್ಲಿ 'ಭಾರತ ರಾಷ್ಟ್ರೀಯ ಕಾಂಗ್ರೆಸ್'ನ ಸ್ಥಾಪನೆಯಾಯಿತು. ಇದರಲ್ಲಿ ಆಗ ಭಾರತದ ವಿದ್ಯಾವಂತ ಮಧ್ಯಮ ವರ್ಗಗಳ ನಾಯಕನಾಗಿ ಮೂಡಿಬಂದಿದ್ದ ಸುರೇಂದ್ರನಾಥ ಬ್ಯಾನರ್ಜಿ ಭಾಗವಹಿಸಿರಲಿಲ್ಲ, ಬದಲಾಗಿ ಆತ ಸಂಘಟಿಸಿದ್ದ ಕಲ್ಕತ್ತಾ ಸಮ್ಮೇಳನದಿಂದ ದೂರವುಳಿದಿದ್ದ ಡಬ್ಲ್ಯು.ಸಿ. ಬ್ಯಾನರ್ಜಿಯವರು ಅಧ್ಯಕ್ಷತೆ ವಹಿಸಿದ್ದರು ಎಂಬುದು ಗಮನಾರ್ಹ.

ಇದಕ್ಕೆ ಎರಡು ವಿಭಿನ್ನ ವಾದಗಳನ್ನು ಮುಂದಿಡಲಾಗುತ್ತದೆ. ಒಂದು, ಸುರೇಂದ್ರನಾಥ ಬ್ಯಾನರ್ಜಿ ಸರಕಾರದ ಸೇವೆಯಿಂದ ವಜಾಗೊಂಡು, ಆಗ ನಡೆಯುತ್ತಿದ್ದ ಚಳುವಳಿಯ ಮುಖಂಡನಾಗಿದ್ದುದರಿಂದ ಆತ ಹ್ಯೂಮ್ ಮತ್ತು ಡಫರಿನ್ ತಮ್ಮ ಆಶಯ ನೆರವೇರಿಸಬಹುದಾದ ಸಂಘಟನೆಯ ಮುಖಂಡತ್ವಕ್ಕೆ ಸೂಕ್ತ ವ್ಯಕ್ತಿಯಲ್ಲವೆಂದು ಪರಿಗಣಿಸಿದರು ಎಂಬ ವಾದ. ಆಗ ಸಂಪರ್ಕ ಸಾಧನಗಳ ಅಭಾವದಿಂದಾಗಿ ಸುಮಾರಾಗಿ ಒಂದೇ ವೇಳೆಗೆ ಈ ಎರಡೂ ಸಮ್ಮೇಳನಗಳು ನಡೆದುದ್ದರಿಂದ ಹೀಗಾಯಿತಷ್ಟೇ ಎಂಬುದು ಇನ್ನೊಂದು ವಾದ. ಅದೇನೇ ಇರಲಿ. ಸುರೇಂದ್ರನಾಥ ಬ್ಯಾನರ್ಜಿ ಮತ್ತು ಆತನ ಸಂಗಡಿಗರು ನಂತರ ಕಾಂಗ್ರೆಸಿನಲ್ಲಿ 1917ರಲ್ಲಿ ಅವರು ಹೊರಗೋಗುವವರೆಗೂ ಪ್ರಮುಖ ಪಾತ್ರ ವಹಿಸಿದರು ಎಂಬುದು ವಿವಾದಾತೀತ. ಅಲ್ಲದೆ ಕಾಂಗ್ರೆಸ್ ಆರಂಭದ ದಿನಗಳಲ್ಲಿ ವರ್ಷಕ್ಕೊಮ್ಮೆ ಸಭೆ ಸೇರಿ ಬ್ರಿಟಿಶ್ ಆಳರಸರಿಗೆ ಮನವಿಗಳನ್ನು ಅರ್ಪಿಸುವ ಕೃಪಾಪೋಷಿತ ಸಂಘಟನೆಯಾಗಿತ್ತು ಎಂಬುದು ಕೂಡ ನಿಜ. ಮೊದಲ ಪೀಳಿಗೆಯ ಮುಖಂಡರಿಗೆ ಅದನ್ನೊಂದು ಸಾಮೂಹಿಕ ಸಂಘಟನೆಯಾಗಿ ಬೆಳೆಸುವ ವಿಚಾರವೂ ಇರಲಿಲ್ಲ.



ಬ್ರಿಟೀಷ್ ಕಾಲದಲ್ಲಿ ಜನರ ಸ್ಥಿತಿ

ತೀವ್ರಗಾಮಿತ್ವದ ಬೆಳವಣಿಗೆ

ಆದರೆ ಇದು ಬಹಳ ದಿನ ನಡೆಯುವುದು ಸಾಧ್ಯವಿರಲಿಲ್ಲ. ಭಾರತೀಯರಿಗೆ ದೇಶದ ಆಡಳಿತದಲ್ಲಿ ಹೆಚ್ಚಿನ ಪಾತ್ರವಿರಬೇಕು ಎಂಬುದು ಆಗಿನ ಕಾಂಗ್ರೆಸ್ಸಿನ ಪ್ರಮುಖ ಬೇಡಿಕೆಯಾಗಿತ್ತು. ಆದರೆ ಇದಕ್ಕೆ ಬ್ರಿಟಿಶರದ್ದು ಸಂಪೂರ್ಣ ನಕಾರಾತ್ಮಕ ನಿಲುವು. ಸಹಜವಾಗಿಯೇ ಇದುವರೆಗಿನ ಮನವಿಗಳ ವಿಧಾನವನ್ನು ಕೈಬಿಟ್ಟು ಹೋರಾಟದ ಬೇರೆ ದಾರಿಗಳನ್ನು ಅನುಸರಿಸಬಾರದೇಕೆ ಎಂಬ ವಿಚಾರ ಕೆಲವು ಕಾಂಗ್ರೆಸಿಗರಲ್ಲಿ ಎದ್ದಿತು. ಇದು ಕಾಂಗ್ರೆಸಿನಲ್ಲಿ ಒಂದು ಹೊಸ, ತೀವ್ರಗಾಮಿ ಮುಖಂಡತ್ವ ಮೂಡಿ ಬರುವುದರ ಮುನ್ಸೂಚನೆಯಾಗಿತ್ತು. 'ಇದು ಕಾಂಗ್ರೆಸಿಗೆ ಜನ್ಮ ನೀಡಿದ ಹೊಸ ಭೂಮಾಲಕ- ಬಂಡವಾಳಶಾಹಿ ವರ್ಗಗಳು ಮತ್ತು ಬ್ರಿಟಿಶ್ ಆಳರಸರ ನಡುವಿನ ಸಂಬಂಧಗಳಲ್ಲಿ ಆಗುತ್ತಿದ್ದ ಬದಲಾವಣೆಗಳ ಪ್ರತಿಬಿಂಬವೂ ಆಗಿತ್ತು' ಎನ್ನುತ್ತಾರೆ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ದೇಶದ ಖ್ಯಾತ ಮಾರ್ಕ್ಸ್‌ವಾದಿ ಚಿಂತಕರೂ ಆದ ಇಎಂಎಸ್ ನಂಬೂದರಿಪಾಡ್.

ಹಿಂದೆ ಹೇಳಿದಂತೆ ವ್ಯಾಪಾರಿಗಳಾಗಿ ಭಾರತಕ್ಕೆ ಬಂದ ಬ್ರಿಟಿಶ್ ಬಂಡವಾಳಶಾಹಿಗಳು ಭಾರತದಲ್ಲಿ ಭೂಸಂಬಂಧಗಳಲ್ಲಿ ಬದಲಾವಣೆ ತರುವುದರೊಂದಿಗೆ ಸೀಮಿತ ಪ್ರಮಾಣದಲ್ಲಿ ಕೈಗಾರಿಕಾ ಉತ್ಪಾದನಾ ರಂಗವನ್ನೂ ಪ್ರವೇಶಿಸಿದರು. ಇದನ್ನು ಅನುಸರಿಸಿ ಭಾರತದ ವ್ಯಾಪಾರೀ ವರ್ಗವೂ ಕ್ರಮೇಣ ಕೈಗಾರಿಕಾ ಬಂಡವಾಳಶಾಹಿಯಾಗಿ ಪರಿವರ್ತನೆಗೊಳ್ಳಲಾರಂಭಿಸಿತ್ತು. ಈ ಎರಡು ಶಕ್ತಿಗಳ ನಡುವಿನ ಸಂಘರ್ಷವೇ ದಾದಾಭಾಯಿ ನವರೋಜಿ, ಮಹದೇವ ಗೋವಿಂದ ರಾನಡೆ ಮತ್ತು ರಮೇಶ ಚಂದ್ರ ದತ್ತ ಮುಂತಾದವರ ರಾಜಕೀಯ-ಆರ್ಥಿಕ ವಿಮರ್ಶೆಯಾಗಿ ಹೊಮ್ಮಿತ್ತು. ಈ ವರ್ಗದ ನಿರೀಕ್ಷೆ-ಆಕಾಂಕ್ಷೆಗಳನ್ನು ಈಡೇರಿಸಲು ದೇಶದ ಆಡಳಿತದಲ್ಲಿ ಹೆಚ್ಚಿನ ಪಾಲಿನ ಅಗತ್ಯವಿತ್ತು. ಕಾಂಗ್ರೆಸ್, ಒಂದೆಡೆ ಬ್ರಿಟಿಶರ ವಿರುದ್ಧ ಹೆಚ್ಚೆಚ್ಚು ಅತೃಪ್ತಗೊಳ್ಳುತ್ತಿದ್ದ, ಇನ್ನೊಂದೆಡೆ ಸಂಘಟಿತ ಚಳುವಳಿಯಿಂದ ಒತ್ತಡ ಹಾಕಲು ಸಾಧ್ಯ ಎಂದು ಹೆಚ್ಚೆಚ್ಚು

ಆತ್ಮವಿಶ್ವಾಸ ಗಳಿಸಿಕೊಳ್ಳುತ್ತಿದ್ದ ಈ ವರ್ಗದ ಅಗತ್ಯಗಳನ್ನು ಪೂರೈಸುವ ಸಮರದ ಸಾಧನವಾಗಿತ್ತು. ಇದು ಆಗ ಜಾಗತಿಕ ರಂಗದಲ್ಲಿ ಸಾಮ್ರಾಜ್ಯಶಾಹಿಯ ಉದಯ, ಉದಯಗೊಳ್ಳುತ್ತಿದ್ದ ಗುತ್ತೇದಾರಿ ಬಂಡವಾಳಶಾಹಿ ಮತ್ತು ಅಧಿಕಾರದ ಆಶಯ ಹೊಂದಿದ್ದ ಭಾರತೀಯ ಬಂಡವಾಳಶಾಹಿಗಳ ನಡುವಿನ ವೈರುಧ್ಯ ಬೆಳೆಯುತ್ತಿದ್ದುದರ ಪರಿಣಾಮವೂ ಆಗಿತ್ತು.

"ತಿಲಕ್ ಯುಗ"

ಭಾರತದಲ್ಲಿ ನೇರ ಬ್ರಿಟಿಶ್ ಆಳ್ವಿಕೆ ಆರಂಭವಾದ ಸುಮಾರು 50 ವರ್ಷಗಳಲ್ಲಿ 20 ವರ್ಷಗಳು ಬರದ ವರ್ಷಗಳಾಗಿದ್ದು ಅವು ಒಂದು ಕೋಟಿಗೂ ಹೆಚ್ಚು ಭಾರತೀಯರನ್ನು ಬಲಿ ತೆಗೆದುಕೊಂಡವು. ಇದಕ್ಕೆ ಬ್ರಿಟಿಶ್ ವಸಾಹತುಶಾಹಿ ನೀತಿಗಳು ಕಾರಣವಾಗಿದ್ದು ಕಾಂಗ್ರೆಸ್ ಅವುಗಳನ್ನು ತೀವ್ರವಾಗಿ ಖಂಡಿಸಿತು. ಈ ಮೂಲಕ ಮನವಿ, ಬೇಡಿಕೆಗಳ ಒಂದು ಸಂಘಟನೆ ಜನಸಾಮಾನ್ಯರನ್ನು ಅಣಿನೆರೆಸುವ ಸಂಘಟನೆಯಾಗಿ ಪರಿವರ್ತನೆಗೊಳ್ಳುತ್ತಿತ್ತು. ಹೀಗೆ ಕಾಂಗ್ರೆಸ್ ಮೊದಲು ಬಡ ಮಧ್ಯಮ ವರ್ಗವನ್ನು, ಕ್ರಮೇಣ ಕಾರ್ಮಿಕರು ಮತ್ತು ರೈತರನ್ನು ಬ್ರಿಟಿಶ್ ಬಂಡವಾಳಶಾಹಿಗಳಿಗೆದುರಾಗಿ ತಮ್ಮ ವರ್ಗ ಹಿತಾಸಕ್ತಿಗಳನ್ನು ಈಡೇರಿಸಲು ಹೋರಾಡುತ್ತಿದ್ದ ಭಾರತೀಯ ಬಂಡವಾಳಶಾಹಿಗಳ ಹಿಂದೆ ಅಣಿನೆರೆಸಲಾರಂಭಿಸಿತು.

ಮನವಿ, ಬೇಡಿಕೆಗಳ ಮೂಲಕ ಸೀಮಿತ ಆಡಳಿತ ಸುಧಾರಣೆ ತರುವ ಗುರಿಯಿಂದ ಹುಟ್ಟಿಕೊಂಡ ಸಂಘಟನೆಯ ಹಳೆಯ ಮಾದರಿಯನ್ನು ಉಳಿಸಿಕೊಳ್ಳಬೇಕೆಂಬ (ಮಂದಗಾಮಿ) ಮುಖಂಡರು ಮತ್ತು ತೀವ್ರ ಹೋರಾಟದ ವಿಧಾನಗಳನ್ನು ಅನುಸರಿಸುವ ಸಂಘಟನೆಯಾಗಿ ಅದನ್ನು ಪರಿವರ್ತಿಸಬೇಕು ಎನ್ನುವ (ತೀವ್ರಗಾಮಿ) ಮುಖಂಡರ ನಡುವೆ ಕಾಂಗ್ರೆಸಿನಲ್ಲಿ ತೀವ್ರ ಸಂಘರ್ಷವೇ ನಡೆಯಿತು. ಈ ಪ್ರಕ್ರಿಯೆಯಲ್ಲಿಯೇ ಮೂಡಿ ಬಂದದ್ದು 'ಲಾಲ್-ಬಾಲ್-ಪಾಲ್' ಎಂದು ಹೆಸರಾದ (ಲಾಲಾ ಲಜಪತ್ ರಾಯ್, ಬಾಲ ಗಂಗಾಧರ ತಿಲಕ ಮತ್ತು ಬಿಪಿನ್ ಚಂದ್ರ ಪಾಲ್)ಹೊಸ ತೀವ್ರಗಾಮಿ ಮುಖಂಡತ್ವ ಹಾಗೂ ಅವರ ಸ್ವದೇಶಿ, ಸ್ವರಾಜ್ಯ ಮತ್ತು ವಿದೇಶೀ ಸರಕುಗಳ ಬಹಿಷ್ಕಾರದ ಘೋಷಣೆಗಳು. ಇದು ಭಾರತದ ಸ್ವಾತಂತ್ರ್ಯ ಆಂದೋಲನದಲ್ಲಿ ಮತ್ತು ಕಾಂಗ್ರೆಸಿನ ಇತಿಹಾಸದಲ್ಲೂ ಒಂದು ಹೊಸ ಮಜಲಿನ ಆರಂಭವಾಗಿತ್ತು. ಇಎಂಎಸ್ ಇದನ್ನು 'ತಿಲಕ್ ಯುಗ' ಎಂದಿದ್ದಾರೆ.

ಲಾಲಾ ಲಜಪತ್ ರಾಯ್, ಬಾಲ ಗಂಗಾಧರ ತಿಲಕ ಮತ್ತು ಬಿಪಿನ್ ಚಂದ್ರ ಪಾಲ್



ಈ ಬೆಳವಣಿಗೆಗಳಿಂದ ಕುಪಿತಗೊಂಡ ಬ್ರಿಟಿಶ್ ಸರಕಾರ ತನ್ನ ಕುಖ್ಯಾತ "ಒಡೆದು ಆಳುವ ನೀತಿ"ಯನ್ನು ಪ್ರಯೋಗಿಸಲಾರಂಭಿಸಿತು. 1905ರಲ್ಲಿ ಬಂಗಾಳದ ವಿಭಜನೆ ಇದರ ಮೊದಲ ಪ್ರಯೋಗ. ಇದರಿಂದ ಕಾಂಗ್ರೆಸಿನಲ್ಲಿ 1907ರಲ್ಲಿ ಕಾಂಗ್ರೆಸಿನ ಸೂರತ್ ಅಧಿವೇಶನದಲ್ಲಿ ಮಂದಗಾಮಿ ಮತ್ತು ತೀವ್ರಗಾಮಿ ಮುಖಂಡರ ನಡುವೆ ವಿಭಜನೆ ತರಲು ಅದಕ್ಕೆ ಸಾಧ್ಯವಾದರೂ ಅದರ ಮುಖ್ಯ ಉದ್ದೇಶ ಈಡೇರುವ ಬದಲು ಇದರಿಂದ ಜನಗಳ ಪ್ರತಿಭಟನೆ ಇನ್ನೂ ಉಗ್ರ ರೂಪ ತಳೆಯಿತು. ಜನಗಳ ಪ್ರತಿಭಟನೆ ಎಷ್ಟು ತೀವ್ರಗೊಂಡಿತೆಂದರೆ ಇತ್ಯರ್ಥವಾಗಿ ಬಿಟ್ಟ ಸಂಗತಿಯೆಂದು ಸಾರಿದ್ದ ಬಂಗಾಳದ ವಿಭಜನೆಯನ್ನು ಸರಕಾರ 1911ರಲ್ಲಿ ರದ್ದು ಮಾಡಬೇಕಾಗಿ ಬಂತು. ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಮೊತ್ತ ಮೊದಲ ಬಾರಿಗೆ ಜನತಾ ಚಳುವಳಿಯ ಶಕ್ತಿಯೆದುರು ತಲೆ ಬಾಗುವಂತಾಯಿತು.

ಸ್ವದೇಶಿ ಚಳುವಳಿ ಮತ್ತು ವಿದೇಶಿ ಸರಕುಗಳ ಬಹಿಷ್ಕಾರದ ಘೋಷಣೆಗಳು ಭಾರತದ ಬಂಡವಾಳಶಾಹಿಗಳಿಗೆ ಆಗಿನ ಸರಕಾರದ ಬೆಂಬಲ ಪಡೆದಿದ್ದ ಬ್ರಿಟಿಶ್ ಬಂಡವಾಳಶಾಹಿಯನ್ನು ಎದುರಿಸಲು ಭಾರತೀಯ ಜನಸಾಮಾನ್ಯರ ಬೆಂಬಲವನ್ನು ಅಣಿನೆರೆಸಿದವು ಎಂಬುದನ್ನು ಇಲ್ಲಿ ಗಮನಿಸಬೇಕು. ಈ ಚಳುವಳಿಗಳು ಒಂದೆಡೆ ಸ್ವಾತಂತ್ರ್ಯ ಆಂದೋಲನವನ್ನು ಬಲಪಡಿಸಿದರೆ, ಇನ್ನೊಂದೆಡೆ ಭಾರತೀಯ ಬೂರ್ಜ್ವಾ ವರ್ಗದ ಆರ್ಥಿಕ ಮತ್ತು ರಾಜಕೀಯ ಶಕ್ತಿಯನ್ನು ಹೆಚ್ಚಿಸಿ ಬ್ರಿಟಿಶ್ ಬಂಡವಾಳಶಾಹಿಯೊಂದಿಗೆ ಅದರ ಸಂಘರ್ಷದಲ್ಲಿ ಹೆಚ್ಚಿನ ಚೌಕಾಶಿ ಸಾಮರ್ಥ್ಯವನ್ನು ಒದಗಿಸಿದವು. ನಿಜ, ಈ ಅವಧಿಯಲ್ಲಿ ಕಾರ್ಮಿಕರು, ರೈತರು ಮತ್ತು ಇತರ ಜನಸಮೂಹಗಳ ಸಂಘಟನಾ ಪ್ರಜ್ಞೆಯೂ ಬೆಳೆಯಲಾರಂಭಿಸಿತ್ತು. ಬಂಡವಾಳಶಾಹಿ ಮತ್ತು ಕಾರ್ಮಿಕ ವರ್ಗಗಳು ಹಾಗೂ



ಬಾಂಬೆ ಕಾರ್ಮಿಕ ಚಳುವಳಿ ಮುಖಂಡರು

ರೈತರು ಮತ್ತು ಭೂಮಾಲಕರ ನಡುವಿನ ವೈರುಧ್ಯಗಳು ಕೂಡಾ ಚಳುವಳಿಗಳು, ಹೋರಾಟಗಳ ರೂಪದಲ್ಲಿ ಕಾಣಬಂದವು. ಇಂತಹ ಸಂದರ್ಭಗಳಲ್ಲಿ ತಿಲಕರು ಮತ್ತು ಇತರ ರಾಷ್ಟ್ರೀಯ ಮುಖಂಡರು ಕಾರ್ಮಿಕರ ಪರವಾಗಿ ನಿಂತರು. ಆಗಿನ್ನೂ ಜನತೆಯ ಸಾಮೂಹಿಕ ಚಳುವಳಿಗಳು ಬಂಡವಾಳಶಾಹಿಗಳು ಮತ್ತು ಭೂಮಾಲಕರ ವರ್ಗ ಹಿತಾಸಕ್ತಿಗಳಿಗೆ ಅಪಾಯಕಾರಿಯೆನಿಸುವಷ್ಟು ಬೆಳೆದಿರಲಿಲ್ಲ. ಆದರೆ ಮುಂದೆ ಬಂದ "ಗಾಂಧಿ ಯುಗ"ದಲ್ಲಿ ಪರಿಸ್ಥಿತಿಗಳು ಬದಲಾಗಲಾರಂಭಿಸಿದ್ದವು. ಇದರಿಂದಾಗಿ ಅ ಅವಧಿಯಲ್ಲಿ ಜನಸಮೂಹಗಳ ಹೋರಾಟಗಳನ್ನು ಕುರಿತಂತೆ ಕಾಂಗ್ರೆಸ್ ಮುಖಂಡರ ನಿಲುವುಗಳೂ ಬದಲಾದವು. ತಮ್ಮ ಜೀವನದ ಕೊನೆಯ ವರ್ಷಗಳಲ್ಲಿ, ಅಂದರೆ ಮೊದಲ ಮಹಾಯುದ್ಧದ ಸಂದರ್ಭದಲ್ಲಿ ತಿಲಕರು ಕೂಡಾ ಬ್ರಿಟಿಶರೊಂದಿಗೆ "ಶರತ್ತಿನ ಸಹಕಾರ"ದ ಮಾತಾಡಿದ್ದರು ಎಂಬುದು ಗಮನಾರ್ಹ.

"ಗಾಂಧಿ ಯುಗ"

ತಿಲಕರ ಮರಣದ ವೇಳೆಗೆ ಮೋಹನದಾಸ ಕರಮಚಂದ ಗಾಂಧಿ ದಕ್ಷಿಣ ಆಫ್ರಿಕಾದಲ್ಲಿ "ಸತ್ಯಾಗ್ರಹ" ಎಂಬ ಹೊಸ 'ಅಸ್ತ್ರ'ದಿಂದ ಪ್ರಖ್ಯಾತಿಗೆ ಬಂದಿದ್ದರು. ಅಲ್ಲಿಂದ ಮರಳಿದ ನಂತರ ಭಾರತದಲ್ಲೂ ಅವರ ಸ್ವಂತ ರಾಜ್ಯವಾದ ಗುಜರಾತಿನ ಖೇಡಾ ಜಿಲ್ಲೆಯಲ್ಲಿ ಭೂಕಂದಾಯದ ವಿರುದ್ಧ ಹೋರಾಟದಲ್ಲಿ ಹಾಗೂ ಅಹಮದಾಬಾದಿನಲ್ಲಿ ಜವಳಿ ಕಾರ್ಮಿಕರ ಮುಷ್ಕರದಲ್ಲಿ ಈ "ಅಸ್ತ್ರ"ವನ್ನು ಬಳಸಿ ಪೂರ್ಣ ಯಶಸ್ಸು ಪಡೆಯದಿದ್ದರೂ ಪ್ರಸಿದ್ಧಿಗೆ ಬಂದಿದ್ದರು.

ಮೊದಲ ಮಹಾಯುದ್ಧದ ನಂತರ ಬ್ರಿಟಿಶ್ ಸರಕಾರ ಆಡಳಿತ ಸುಧಾರಣೆಗಳ ಪ್ರಸ್ತಾವಗಳನ್ನು ಮುಂದಿಡುವ ಬದಲು ದಮನದ ಅಸ್ತ್ರಗಳನ್ನು ಇನ್ನಷ್ಟು ಹರಿತಗೊಳಿಸಲು ಮಾರ್ಚ್ 1919 ರಲ್ಲಿ ರೌಲಟ್ ಕಾಯ್ದೆಯನ್ನು ಬಲವಾದ ಪ್ರತಿಭಟನೆಗಳ ನಡುವೆಯೂ ಜಾರಿಗೆ ತಂದಿತು. ಆಗಷ್ಟೇ ಅಖಿಲ ಭಾರತ ರಾಜಕೀಯ ರಂಗವನ್ನು ಪ್ರವೇಶಿಸಿದ್ದ ಗಾಂಧೀಜಿ ಮೊದಲ ಬಾರಿಗೆ ತಮ್ಮ 'ಸತ್ಯಾಗ್ರಹ'ದ ಪ್ರಯೋಗ ನಡೆಸಿದರು. ಮೊದಲು ಈ ಕಾಯ್ದೆಯನ್ನು ಹಿಂತೆಗೆದುಕೊಳ್ಳಬೇಕು ಎಂದು ವೈಸರಾಯಿಗೆ ಪತ್ರ ಬರೆದರು. ಅದಕ್ಕೆ ಪುರಸ್ಕಾರ ದೊರೆಯದಿದ್ದಾಗ ಆ ಕಾನೂನನ್ನು ಶಾಂತಿಯುತವಾಗಿ ಭಂಗ ಮಾಡುವ ಒಂದು ಪ್ರತಿಜ್ಞೆಯನ್ನು ಸಿದ್ಧಪಡಿಸಿ ಅದಕ್ಕೆ ಸಿದ್ಧರಿರುವವರು ಸಹಿ ಹಾಕಬೇಕೆಂದು ಕರೆ ನೀಡಿದರು. ಈ ಚಳುವಳಿ 1919ರ ಮಾರ್ಚ್ 30 ರಂದು ದೇಶವ್ಯಾಪಿ ಹರತಾಳದೊಂದಿಗೆ ಆರಂಭವಾಗುವುದೆಂದು ನಿರ್ಧರಿಸಲಾಯಿತು. ನಂತರ ಇದನ್ನು ಎಪ್ರಿಲ್ 6 ಎಂದು ಬದಲಾಯಿಸಲಾಯಿತು.


ಆದರೆ ಕೆಲವೆಡೆ ಮಾರ್ಚ್ 30ರಂದೇ ಹರತಾಳ ನಡೆಯಿತು. ಬ್ರಿಟಿಶರು ಅದರ ದಮನಕ್ಕೆ ಮುಂದಾದರು. ದಿಲ್ಲಿ, ಅಮೃತಸರದಲ್ಲಿ ಗೋಲೀಬಾರು ನಡೆಯಿತು. ಗಾಂಧೀಜಿಯನ್ನು ಬಂಧಿಸಲಾಯಿತು. ಇದನ್ನು ವಿರೋಧಿಸಿ ಮುಂಬೈಯಲ್ಲಿಯೂ ಪ್ರತಿಭಟನೆ ನಡೆಯಿತು. ಎಪ್ರಿಲ್ 6ರವರೆಗೆ ಇತರೆಡೆಗಳಲ್ಲೂ ಒಂದಿಲ್ಲೊಂದು ರೀತಿಯಲ್ಲಿ ಪ್ರತಿಭಟನೆಗಳು ನಡೆದವು. ಕೆಲವೆಡೆ ಅವು ಹಿಂಸಾರೂಪವನ್ನೂ ಪಡೆದವು. ಈ ಹಿನ್ನೆಲೆಯಲ್ಲೇ ಜಾಲಿಯನ್‌ವಾಲಾ ಬಾಗ್ ಹತ್ಯಾಕಾಂಡವೆಂದು ಕುಖ್ಯಾತವಾದ ಘಟನೆ ಎಪ್ರಿಲ್ 13ರಂದು ಅಮೃತಸರದಲ್ಲಿ ನಡೆಯಿತು.



ರೈಲಿನಿಂದ ಇಳಿಯಲಿರುವ ಗಾಂಧೀಜಿ

ಇದು ಜನಸಮೂಹಗಳು ಅತ್ಯುತ್ಸಾಹದಿಂದ ಭಾಗವಹಿಸಿದ್ದ ಒಂದು ಅಭೂತಪೂರ್ವ ಪ್ರತಿಭಟನೆಯಾಗಿತ್ತು. ಆದರೆ ಎಪ್ರಿಲ್ 14ರಂದು ಗಾಂಧೀಜಿ ಅಹಮದಾಬಾದಿನಲ್ಲಿ ಮಾತನಾಡುತ್ತಾ "ಜನಗಳು ಹಿಂಸಾಚಾರ ನಡೆಸಿದ್ದನ್ನು" ಖಂಡಿಸಿದರು, ತಾನು ಹೀಗೆ ಬೇಜವಾಬ್ದಾರಿಯಿಂದ ವರ್ತಿಸಿದ ಜನಗಳನ್ನು ನಂಬಿ ಹೋರಾಟದ ಕರೆ ನೀಡಿದ್ದು ಒಂದು "ಹಿಮಾಲಯ ಗಾತ್ರದ ಪ್ರಮಾದ" ಎಂದರು. ಅಷ್ಟೇ ಅಲ್ಲ,

ಏಪ್ರಿಲ್ 18ರಂದು ಕಾನೂನು ಭಂಗ ಚಳುವಳಿಯನ್ನು ಅಮಾನತುಗೊಳಿಸಿ ಜನ ಇನ್ನೆಂದೂ ಹಿಂಸಾ ಕೃತ್ಯಗಳಿಗೆ ಇಳಿಯದಂತೆ ನೋಡಿಕೊಳ್ಳಲು ಕೆಲವೇ ಆರಿಸಿದ ಸ್ವಯಂಸೇವಕರು ಮಾತ್ರ ಭಾಗವಹಿಸುವ "ವೈಯಕ್ತಿಕ ಸತ್ಯಾಗ್ರಹ"ವನ್ನು ಸಂಘಟಿಸುವುದಾಗಿ ಪ್ರಕಟಿಸಿದರು.



ಜಲಿಯನ್‌ವಾಲಾ ಬಾಗ್ ಘೋರ ಹತ್ಯಾಕಾಂಡದ ಚಿತ್ರ

ಈ ವಿಷಯದಲ್ಲಿ ಅವರೊಂದಿಗೆ 'ಸಹಕರಿಸಿದರು' ! ಇದು 1942–47ರ ಅವಧಿಯಲ್ಲಿ ಅಂದರೆ ಸ್ವಾತಂತ್ರ್ಯ ಹೋರಾಟದ ಕೊನೆಯ ಘಟ್ಟದಲ್ಲಿ ಸ್ಪಷ್ಟವಾಗಿ ಕಂಡು ಬಂತು.

ಇದರಿಂದ ಒಂದು ಅಂಶ ಸ್ಪಷ್ಟವಾಯಿತು. ಗಾಂಧೀಜಿ ಜನಗಳನ್ನು ಹಿಂದೆಂದೂ ಯಾವ ರಾಜಕೀಯ ಮುಖಂಡರಿಗೂ, ತಿಲಕರಿಗೂ ಕೂಡಾ ಸಾಧ್ಯವಾಗಿರದ ರೀತಿಯಲ್ಲಿ ಜನಗಳನ್ನು ಅಣಿನೆರೆಸಬಲ್ಲ, ಅದೇ ವೇಳೆಗೆ "ಜನಗಳ ಹಿಂಸಾಚಾರ"ದ ಹೆಸರಿನಲ್ಲಿ, ಬೇರೆ ಯಾವ ಮುಖಂಡರೂ ಧೈರ್ಯ ಮಾಡದ ರೀತಿಯಲ್ಲಿ ಹೋರಾಟವನ್ನು ಸ್ಥಗಿತಗೊಳಿಸುವ ಒಬ್ಬ ಮುಖಂಡರಾಗಿದ್ದರು. ಗಾಂಧೀವಾದಿ ಹೋರಾಟದ ವಿಧಾನದ ಈ ಎರಡು ಅಂಶಗಳು ಸ್ವಾಂತಂತ್ರ್ಯ ಹೋರಾಟದ ಮುಂದಿನ ಪ್ರತಿಯೊಂದು ಘಟ್ಟದಲ್ಲೂ ಕಾಣಬಂದವು. ಜನಸಮೂಹಗಳ ಹೋರಾಟಗಳನ್ನು ಬಳಸಿ ಬ್ರಿಟಿಶರಿಂದ ರಿಯಾಯ್ತಿಗಳನ್ನು ಪಡೆಯುವ, ಆದರೆ ಜನಗಳು ತಮ್ಮ ಹತೋಟಿಯೊಳಗೇ ಇರುವಂತೆ ನೋಡಿಕೊಳ್ಳುವ ಈ ವಿಧಾನ ಯಾವ ವರ್ಗಕ್ಕೆ ಅಪ್ಯಾಯಮಾನವಾದ ವಿಧಾನ ಎಂದು ಬೇರೆ ಹೇಳಬೇಕಾಗಿಲ್ಲ.

ಮುಂದೆ 1920–21ರಲ್ಲಿ ಅಸಹಕಾರ ಆಂದೋಲನದಲ್ಲಿ ಅವರು ಮುಂದಿಟ್ಟ ಕಾರ್ಯಕ್ರಮದಲ್ಲಿ ಬಂಡವಾಳಶಾಹಿ–ಭೂಮಾಲಕ ವರ್ಗಗಳ ಹಿತಾಸಕ್ತಿಗಳಿಗೆ ಧಕ್ಕೆ ತರುವ ಯಾವ ಅಂಶಗಳೂ ಇರಲಿಲ್ಲ. ಆದರೆ ಆಗಲೂ ಚೌರಿಚೌರಾದಲ್ಲಿ ಪೋಲೀಸರು ಉದ್ರೇಕಕಾರಿ ಕೃತ್ಯಗಳನ್ನು ನಡೆಸಿದರೂ ರೈತರು ಹಿಂಸಾಚಾರಕ್ಕೆ ಇಳಿಯಬಾರದಾಗಿತ್ತು ಎಂದು ಚಳುವಳಿಯನ್ನು ಹಿಂತೆಗೆದುಕೊಂಡರು. ಸಹಜವಾಗಿಯೇ ಬಂಡವಾಳಶಾಹಿ–ಭೂಮಾಲಕ ವರ್ಗಗಳ ನೇತೃತ್ವದ ಕಾಂಗ್ರೆಸ್ ಅವರನ್ನು ತನ್ನ "ಸೇನಾಧಿಪತಿ" ಎಂದು ಸ್ವೀಕರಿಸಿ, ಇದರ ಪೂರ್ಣ ಪ್ರಯೋಜನ ಪಡೆಯಿತು. ಅದೇ ವೇಳೆಗೆ, ತನಗೆ ಪ್ರಯೋಜನಕಾರಿಯಲ್ಲದ ಗಾಂಧೀವಾದದ ಅಂಶಗಳನ್ನು "ಕಾರ್ಯಸಾಧ್ಯವಲ್ಲದ ಆದರ್ಶವಾದ" ಎಂದು ಉಪೇಕ್ಷಿಸಿತು. ಗಾಂಧೀಜಿಯವರೂ

ಸ್ವಯಮಾಡಳಿತವೋ, ಸ್ವಾತಂತ್ರ್ಯವೋ?

ಈ ಮೊದಲು ಹೇಳಿದಂತೆ ಕಾಂಗ್ರೆಸ್‌ನ ಮೊದಲ ಪೀಳಿಗೆಯ ಮುಖಂಡರಿಗೆ ಬ್ರಿಟಿಶ್ ಆಳರಸರ ಬಗ್ಗೆ ಬಹಳ ವಿಶ್ವಾಸವಿತ್ತು. ಆದ್ದರಿಂದ ಅವರು ಕೇಳುತ್ತಿದುದು ಆಡಳಿತದಲ್ಲಿ ಹೆಚ್ಚೆಚ್ಚು ಪಾತ್ರ ಮಾತ್ರ. ಬ್ರಿಟಿಶರ ಆಡಳಿತದಿಂದ ಹುಟ್ಟಿಕೊಂಡ ಹೊಸ ವರ್ಗಗಳು ಪ್ರಬಲವಾದಂತೆಲ್ಲಾ, ಬ್ರಿಟಿಶರೊಂದಿಗೆ ಅವರ ವೈರುಧ್ಯಗಳು ಹೆಚ್ಚಾದಂತೆಲ್ಲ 'ಸ್ವರಾಜ್ಯ'ದ ಅಗತ್ಯ ಅವರಿಗೆ ಕಂಡಿತು. ತಿಲಕರು ಮತ್ತು ಇತರ ತೀವ್ರಗಾಮಿ ಮುಖಂಡರು ಎತ್ತಿದ ಈ ಬೇಡಿಕೆಯನ್ನು ಕಾಂಗ್ರೆಸಿನ 'ಮಂದಗಾಮಿ' ಮುಖಂಡರೂ ಕ್ರಮೇಣ ಸ್ವೀಕರಿಸಿದರು. ಆದರೆ ಆಗಲೂ ಇದರ ಅರ್ಥ ಆಸ್ಟ್ರೇಲಿಯ ಅಥವಾ ಕೆನಡಾದಂತೆ ಬ್ರಿಟಿಶ್ ಸಾಮ್ರಾಜ್ಯದೊಳಗೇ ಡೊಮಿನಿಯನ್ ಸ್ಥಾನಮಾನ, ಅಂದರೆ ಸ್ವಯಮಾಡಳಿತವಷ್ಟೇ. ಬ್ರಿಟಿಶ್ ಆಳ್ವಿಕೆಯಿಂದ ಸಂಪೂರ್ಣ ಸ್ವಾತಂತ್ರ್ಯದ ಪರಿಕಲ್ಪನೆ ಇನ್ನೂ ಕಾಂಗ್ರೆಸಿನಲ್ಲಿ ಹುಟ್ಟಿರಲಿಲ್ಲ. ಅದನ್ನು ಮೊತ್ತಮೊದಲ ಬಾರಿಗೆ ಎತ್ತಿದ್ದು 1921ರ ಅಹಮದಾಬಾದ್ ಅಧಿವೇಶನದಲ್ಲಿ; ಮೌಲಾನಾ ಹಸ್ರತ್ ಮೊಹಾನಿ ಈ ಬಗ್ಗೆ ಒಂದು ಠರಾವನ್ನು ಮಂಡಿಸಿದರು. ಅದೇ ಅಧಿವೇಶನದ ವೇಳೆಗೆ ಕಾಂಗ್ರೆಸ್ ಅಧಿವೇಶನದ ಪ್ರತಿನಿಧಿಗಳ ಕೈಗಳಲ್ಲಿ "ಅಹಮದಾಬಾದ್ ಕಾಂಗ್ರೆಸಿಗೆ ಕಮ್ಯುನಿಸ್ಟ್ ಪ್ರಣಾಳಿಕೆ" ಎಂಬ ಕರಪತ್ರ ಈ ಬಗ್ಗೆ ಕಾರ್ಮಿಕ ವರ್ಗದ ಕಣ್ಣೋಟವನ್ನು ಮುಂದಿಟ್ಟಿತು. ಸಾಮಾನ್ಯ ಕಾಂಗ್ರೆಸಿಗರಲ್ಲಿ ಇದು ಬಹಳಷ್ಟು ಪ್ರಭಾವ ಬೀರಿತು. ಆದರೆ ಗಾಂಧೀಜಿ ಇದರ ಪರವಾಗಿರಲಿಲ್ಲ. ಅಧಿವೇಶನ ಅವರ ಅಸಹಕಾರ ಆಂದೋಲನದ ನಿರ್ಣಯವನ್ನಷ್ಟೇ ಅಂಗೀಕರಿಸುವಂತಾಯಿತು.

ಆದರೆ ಕಾಂಗ್ರೆಸಿನ ಒಳಗೂ, ಹೊರಗೂ ಆಂತರಿಕ ಮತ್ತು ಅಂತರ್‍ರಾಷ್ಟ್ರೀಯ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಎಡಪಂಥದ ಪ್ರಭಾವ ಹೆಚ್ಚಾಗಲಾರಂಭಿಸಿದಂತೆ ಪೂರ್ಣ ಸ್ವಾತಂತ್ರ್ಯದ ಪರಿಕಲ್ಪನೆಗೆ ಬೆಂಬಲ ವ್ಯಾಪಕವಾಗಲಾರಂಭಿಸಿತು.

ಬ್ರಿಟನ್ ಕಾಂಗ್ರೆಸಿನ ಮಂದಗಾಮಿಗಳ ಬೇಡಿಕೆಯಾದ ಡೊಮಿನಿಯನ್ ಸ್ಥಾನ ಮಾನವನ್ನು ಕೊಡಲೂ ಸಿದ್ಧವಾಗಿಲ್ಲ ಎಂದು ಅದು ನವಂಬರ್ 1927ರಲ್ಲಿ ಸೈಮನ್ ಆಯೋಗ ನೇಮಿಸಿದಾಗ ಖಚಿತವಾಯಿತು. ಈ ಹಿನ್ನೆಲೆಯಲ್ಲಿ ಡಿಸೆಂಬರ್ ಅಂತ್ಯದಲ್ಲಿ ನಡೆದ ಕಾಂಗ್ರೆಸಿನ ಮದ್ರಾಸ್ ಅಧಿವೇಶನದಲ್ಲಿ ಪೂರ್ಣ ಸ್ವಾತಂತ್ರ್ಯವೇ ಕಾಂಗ್ರೆಸಿನ ಗುರಿ ಎಂಬ ನಿರ್ಣಯ ಕೊನೆಗೂ ಅಂಗೀಕಾರವಾಯಿತು. ಆದರೆ ಇದೂ ಕಾಗದದಲ್ಲಿಯೇ ಉಳಿಯಿತು. ಕೇವಲ ಕಾಂಗ್ರೆಸಿನೊಳಗಿನ ಯುವ ಎಡಪಂಥೀಯರನ್ನು ಸುಮ್ಮನಾಗಿಸಲಷ್ಟೇ ಇದನ್ನು ಅಂಗೀಕರಿಸಲಾಗಿತ್ತು. ಗಾಂಧೀಜಿ "ಆ ನಿರ್ಣಯದ ಮೇಲಿನ ಚರ್ಚೆಗೆ ಶಾಲಾ ಮಕ್ಕಳ ಚರ್ಚಾಕೂಟಕ್ಕಿಂತ ಹೆಚ್ಚಿನ ಬೆಲೆಯಿಲ್ಲ" ಎಂದರು! ಕಾಂಗ್ರೆಸಿನ ಮಂದಗಾಮಿ ಮುಖಂಡತ್ವ ಈ ನಿರ್ಣಯವನ್ನು ಬದಿಗೊತ್ತುವ ಪ್ರಯತ್ನ ನಡೆಸಿತೆಂದು ಸ್ವತಃ ಜವಹರಲಾಲ್ ನೆಹರೂ ಬೇಸರ ವ್ಯಕ್ತ ಮಾಡಿದರು.

1928ರಲ್ಲಿ ಕಲ್ಕತ್ತೆಯಲ್ಲಿ ನಡೆದ ಅಧಿವೇಶನದಲ್ಲಿ ಇದು ಮತ್ತೆ ಚರ್ಚೆಗೆ ಬಂತು. ಹಿಂದಿನಂತೆ ಅದನ್ನು ತಳ್ಳಿ ಹಾಕುವುದು ಈಗ ಅಸಾಧ್ಯವಾಗಿದ್ದರಿಂದ ಗಾಂಧೀಜಿ ಒಂದು ರಾಜಿ ಸೂತ್ರ ಮಂಡಿಸಿದರು. ಡಿಸೆಂಬರ್ 31, 1929ರ ಒಳಗೆ ಬ್ರಿಟಿಶ್ ಸರಕಾರ ಡೊಮಿನಿಯನ್ ಸ್ಥಾನಮಾನ ನೀಡದಿದ್ದರೆ ಪೂರ್ಣ ಸ್ವಾತಂತ್ರ್ಯದ ಗುರಿಯನ್ನು ಅಂಗೀಕರಿಸುವುದು ಎಂಬುದು ಇದರ ಅರ್ಥವಾಗಿತ್ತು. ಸುಭಾಷ್ ಚಂದ್ರ ಬೋಸ್ ಇದಕ್ಕೆ ಸೂಚಿಸಿದ ತಿದ್ದುಪಡಿಗೆ 973 ಮತಗಳು ಬಂದವು, ವಿರುದ್ಧವಾಗಿ 1350 ಮತಗಳು ಬಂದವು. ತಿದ್ದುಪಡಿ ಬಿದ್ದು ಹೋದರೂ ಪೂರ್ಣ ಸ್ವಾತಂತ್ರ್ಯದ ಬೇಡಿಕೆಗೆ ಬಹಳಷ್ಟು ಬೆಂಬಲ ಇತ್ತು ಎಂಬುದನ್ನು ಇದು ತೋರಿಸಿತು. ಅಲ್ಲದೆ ಈ ಸಮ್ಮೇಳನದಲ್ಲಿ ಒಂದು ವಿಶೇಷ ಘಟನೆ ನಡೆಯಿತು. 50,000 ಕಾರ್ಮಿಕರು ಅಧಿವೇಶನದ ಸ್ಥಳದೊಳಗೇ ಮೆರವಣಿಗೆಯಲ್ಲಿ ಬಂದು ಪೂರ್ಣ ಸ್ವಾತಂತ್ರ್ಯದ ಗುರಿಯನ್ನು ಅಂಗೀಕರಿಸಬೇಕು ಎಂದು ಆಗ್ರಹಿಸಿದರು.



ಗಾಂಧೀಜಿ – ನೇತಾಜಿ ಸಮಾಲೋಚನೆ

ಡಿಸೆಂಬರ್ 31, 1929 ಬಂತು. ಆದರೆ ಬ್ರಿಟನ್ ಸರಕಾರ ಕಾಂಗ್ರೆಸ್‌ನ 'ಮಂದಗಾಮಿ' ಮುಖಂಡರ ಮನವಿಯನ್ನು ಮನ್ನಿಸಲಿಲ್ಲ. ಆಗ ಲಾಹೋರಿನಲ್ಲಿ ಸಭೆ ಸೇರಿದ್ದ ಕಾಂಗ್ರೆಸ್ ಅಧಿವೇಶನದಲ್ಲಿ 'ಪೂರ್ಣ ಸ್ವಾತಂತ್ರ್ಯ ನಮ್ಮ ರಾಷ್ಟ್ರೀಯ ಗುರಿ' ಎಂದು ಮತ್ತೆ ದೃಢಪಡಿಸಲಾಯಿತು. ಜನವರಿ 26, 1930ರಂದು ದೇಶಾದ್ಯಂತ ಸ್ವಾತಂತ್ರ್ಯ ದಿನವನ್ನು ಆಚರಿಸಿ ಸ್ವಾತಂತ್ರ್ಯ ಪ್ರತಿಜ್ಞೆಯನ್ನು ಕೈಗೊಳ್ಳಬೇಕು ಎಂದು ಅಧಿವೇಶನ ಕರೆ ನೀಡಿತು. ಕೊನೆಗೂ ಕಾಂಗ್ರೆಸಿನ ಮುಖಂಡತ್ವ ಅರೆ-ಮನಸ್ಸಿನಿಂದಲೇ ಈ ಗುರಿಯನ್ನು ಅಂಗೀಕರಿಸಿತು! ಆದರೆ ಜನತೆ ಇಂತಹ ಒಂದು ಕರೆಯನ್ನು ಬಹಳ ದಿನಗಳಿಂದ ಕಾಯುತ್ತಿತ್ತು ಎಂಬುದು ಜನವರಿ 26, 1930 ರಂದು ದೇಶಾದ್ಯಂತ ನಡೆದ ಮೊದಲ ಸ್ವಾತಂತ್ರ್ಯ ದಿನಾಚರಣೆಯಿಂದ ಸ್ಪಷ್ಟವಾಯಿತು. ಕಾಂಗ್ರೆಸ್ ಆಗಲೂ ನಿಜವಾಗಿ ಯಾರ ಹಿತಾಸಕ್ತಿಗಳನ್ನು ಪ್ರತಿನಿಧಿಸುತ್ತಿತ್ತು ಎಂಬುದೂ ಇದರಲ್ಲಿ ಮತ್ತೊಮ್ಮೆ ಕಾಣ ಸಿಕ್ಕಿತು.

ಅಂತಿಮ ಘಟ್ಟದಲ್ಲಿ

1942ರ 'ಕ್ವಿಟ್ ಇಂಡಿಯಾ' ಅಥವಾ 'ಚಲೇಜಾವ್' ಚಳುವಳಿ ಕಾಂಗ್ರೆಸ್ ಮುಖಂಡರ ಪ್ರಕಾರ ಸ್ವಾತಂತ್ರ್ಯ ಹೋರಾಟದ ಅಂತಿಮ ಹೋರಾಟವಾಗಬೇಕಿತ್ತು. ಆದ್ದರಿಂದಲೇ ಗಾಂಧೀಜಿ 'ಡೂ ಆರ್ ಡೈ' ಅಂದರೆ 'ಮಾಡು ಇಲ್ಲವೆ ಮಡಿ' ಎಂದು ಕರೆ ನೀಡಿದರು. ದೇಶದ ಜನಸಾಮಾನ್ಯರು ಅದಕ್ಕೆ ಅತ್ಯಂತ ಹುರುಪಿನಿಂದ ಸ್ಪಂದಿಸಿದರು. ಬ್ರಿಟಿಶರು ಗಾಂಧೀಜಿ ಸೇರಿದಂತೆ ಹಿರಿಯ ಕಾಂಗ್ರೆಸ್ ಮುಖಂಡರನ್ನೆಲ್ಲಾ ಬಂಧಿಸಿ ಹೋರಾಟಕ್ಕಿಳಿದ ಜನಸಾಮಾನ್ಯರ ಮೇಲೆ ಅಮಾನುಷ ದಮನಕ್ಕಿಳಿದರು. ಚಳುವಳಿಯನ್ನು ರಕ್ತದ ಮಡುವಿನಲ್ಲಿ ತೇಲಿಸಿದರು. ಜನ ತಮ್ಮದೇ ರೀತಿಯಲ್ಲಿ ಪ್ರತ್ಯುತ್ತರ ನೀಡಿದರು. ಕಾಂಗ್ರೆಸ್ ಸಮಾಜವಾದಿ ಪಕ್ಷದ ಯುವ ಮುಖಂಡರ ನೇತೃತ್ವದಲ್ಲಿ ದೇಶಾದ್ಯಂತ ಬ್ರಿಟಿಶ್ ಸರಕಾರದ ವಿರುದ್ಧ ಬುಡಮೇಲು ಕೃತ್ಯಗಳು ನಡೆದವು. ಮೊತ್ತ ಮೊದಲ ಬಾರಿಗೆ ಗಾಂಧೀಜಿ ಜನಗಳ ಈ 'ಹಿಂಸಾಚಾರ'ವನ್ನು ಖಂಡಿಸಲಿಲ್ಲ! ಅದನ್ನು 'ಹಿಮಾಲಯ ಗಾತ್ರದ ಪ್ರಮಾದ' ಎನ್ನಲಿಲ್ಲ!

ವಾಸ್ತವವಾಗಿ ಕಾಂಗ್ರೆಸ್ ಇದು ಅಲ್ಪಾವಧಿಯ ತ್ವರಿತ ಕಾರ್ಯಾಚರಣೆಯಾಗುತ್ತದೆ, ಮಹಾಯುದ್ಧದ ಹಿನ್ನೆಲೆಯಲ್ಲಿ ತೀವ್ರ ಜನಾಂದೋಲನದ ಒತ್ತಡವು ಬ್ರಿಟಿಶ್ ಸರಕಾರ ಬೇಗನೇ ಸಂಧಾನಕ್ಕೆ ಬರುವಂತೆ ಮಾಡುತ್ತದೆ, ತಮಗೆ ಚೌಕಾಶಿಗೆ

ಅವಕಾಶವಾಗುತ್ತದೆ ಎಂದು ನಿರೀಕ್ಷಿಸಿತ್ತು. ಆದರೆ ಹಾಗಾಗಲಿಲ್ಲ. ಬ್ರಿಟಿಶ್ ಸರಕಾರ ಚಳುವಳಿಯನ್ನು ಹತ್ತಿಕ್ಕುವಲ್ಲಿ ಯಶಸ್ವಿಯಾಯಿತು. ಆದರೆ ಕಾಂಗ್ರೆಸ್ ಮುಖಂಡರು ಸಂಧಾನಕ್ಕೆ ದಾರಿ ಹುಡುಕಲಾರಂಭಿಸಿದರು.



ಕ್ವಿಟ್ ಇಂಡಿಯಾ (ಚಲೇಜಾವ್) ಚಳುವಳಿಯ ಚಿತ್ರ

ರೈತರು, ಕಾರ್ಮಿಕರು ಮತ್ತು ಬ್ರಿಟಿಶರ ಅಧೀನವಿದ್ದ ಸೇನಾಪಡೆಗಳ ಸೈನಿಕರೂ ಕೂಡಾ ಹೀಗೆ ಬೀದಿಗಿಳಿದಿದ್ದಾಗ ಕಾಂಗ್ರೆಸ್ ಮುಖಂಡರು ಬ್ರಿಟಿಶರೊಡನೆ, ಮುಸ್ಲಿಂ ಲೀಗಿನ ಮುಖಂಡರೊಂದಿಗೆ ಅಧಿಕಾರ ಪಡೆಯುವ ಸಂಧಾನದಲ್ಲಿದ್ದರು. ಕಾಂಗ್ರೆಸ್ ಪಕ್ಷದ ವೆಬ್ ಸೈಟ್‌ನ 'ಚರಿತ್ರೆ'ವಿಭಾಗ 'ಕ್ವಿಟ್ ಇಂಡಿಯಾ' ಚಳುವಳಿಯ ನಂತರ ಐಎನ್‌ಎ ಯೋಧರ ಬಿಡುಗಡೆಯ ಚಳುವಳಿಯ ಬಗ್ಗೆ ಪ್ರಸ್ತಾಪ ಮಾಡುತ್ತದೆ. ನಂತರ ಅಧಿಕಾರ ಹಸ್ತಾಂತರದ ಸಂಧಾನಗಳ ಬಗ್ಗೆ ಮಾತ್ರ ಹೇಳುತ್ತದೆ. ಮೇಲೆ ಹೇಳಿದ, ಬ್ರಿಟಿಶರನ್ನು ನಿಜವಾಗಿಯೂ ನಡುಗಿಸಿದ ಚಳುವಳಿಗಳ ಬಗ್ಗೆ ಮೌನವಾಗಿದೆ. ರಿನ್ ನಾವಿಕರು ಕಾಂಗ್ರೆಸ್, ಮುಸ್ಲಿಂ ಲೀಗ್ ಮತ್ತು ಕೆಂಬಾವುಟಗಳೊಂದಿಗೆ ಬಂಡಾಯವೆದ್ದಾಗ ಅವರ ನೆರವಿಗೆ ಧಾವಿಸಿದ್ದು ಕೆಂಬಾವುಟ ಮಾತ್ರ. ಗಾಂಧೀಜಿಯವರಿಗೆ ಮತ್ತೆ "ಅಹಿಂಸೆ" ಯ ನೆನಪಾಯಿತು, ರಿನ್ ನಾವಿಕರು ಒಂದು ಕೆಟ್ಟ, ಭಾರತಕ್ಕೆ ತಕ್ಕುದಲ್ಲದ ಉದಾಹರಣೆ ಮುಂದಿಟ್ಟಿದ್ದಾರೆ ಎಂದು ಖಂಡಿಸಿದರು.

ಮಹಾಯುದ್ಧ ಮುಗಿಯುತ್ತಿದ್ದಂತೆಯೇ ಜನಗಳ ಹೋರಾಟಗಳು ಭುಗಿಲೆದ್ದವು. ನೇತಾಜಿಯವರ ಸಶಸ್ತ್ರ ಹೋರಾಟದ ಯೋಜನೆ ವಿಫಲವಾದರೂ ಅವರ 'ಆಝಾದ್ ಹಿಂದ್ ಸೇನೆ(ಐಎನ್‌ಎ)' ಜನರಲ್ಲಿ ಹೊಸ ಹುರುಪನ್ನು ತುಂಬಿತ್ತು. ಬ್ರಿಟಿಶರು ತಮಗೆ ಸೆರೆ ಸಿಕ್ಕ ಐಎನ್‌ಎ ಯೋಧರ ವಿಚಾರಣೆಗಿಳಿದಾಗ ಅದರ ವಿರುದ್ಧ, ಅವರ ಬಿಡುಗಡೆಗಾಗಿ ದೇಶಾದ್ಯಂತ ಮತಪ್ರದರ್ಶನಗಳು ನಡೆದವು. ಇದರ ಬೆನ್ನ ಹಿಂದೆಯೇ ಮುಂಬೈಯಲ್ಲಿ ಆರಂಭವಾಗಿ ದೇಶದ ಎಲ್ಲಾ ಪ್ರಮುಖ ಬಂದರುಗಳಿಗೆ ಹರಡಿದ 'ರಾಯಲ್ ಇಂಡಿಯನ್ ನೇವಿ(ರಿನ್)'ಯ ನಾವಿಕರ ಬಂಡಾಯದಿಂದ ದೇಶದಲ್ಲಿ ವಿದ್ಯುತ್ ಸಂಚಾರವಾದಂತಾಯಿತು. ಮುಂಬೈಯಲ್ಲಿ ಕಾರ್ಮಿಕರು ಬಂಡಾಯವೆದ್ದ ನಾವಿಕರಿಗೆ ಬೆಂಬಲವಾಗಿ ಮುಷ್ಕರ ನಡೆಸಿ ಬೀದಿಗಿಳಿದರು. ದೇಶಾದ್ಯಂತ 'ಅಖಿಲ ಭಾರತ ಕಿಸಾನ್ ಸಭಾ'ದ ನೇತೃತ್ವದಲ್ಲಿ ರೈತರು ಯುದ್ಧಾನಂತರದ ವಿಪರೀತ ಬೆಲೆಯೇರಿಕೆ, ಆಹಾರದ ಅಭಾವದ ವಿರುದ್ಧ, ಪಾಳೇಗಾರಿ ಶೋಷಣೆಗಳ ವಿರುದ್ಧ ಹೋರಾಟಕ್ಕಿಳಿದರು. ತೆಲಂಗಾಣಾ, ತೇಭಾಗ, ಸುರ್ಮಾ ಕಣಿವೆ, ಪುನ್ನಪ್ರ ವಯಲಾರ್ ಮತ್ತು ವಾರಲೀ ಹೋರಾಟಗಳು ಬ್ರಿಟಿಶರನ್ನು ನಡುಗಿಸಿ ಬಿಟ್ಟವು. ಮಹಾಯುದ್ಧದಲ್ಲಿ ಗೆದ್ದರೂ ತನ್ನ ಸಾಮ್ರಾಜ್ಯ ಕುಸಿಯುತ್ತಿರುವುದನ್ನು ಕಂಡ ಬ್ರಿಟಿಶರು ಇನ್ನು ಇಲ್ಲಿ ತಮ್ಮ ಆಳ್ವಿಕೆಯನ್ನು ಹಿಂದಿನಂತೆ ಮುಂದುವರೆಸಲು ಸಾಧ್ಯವಿಲ್ಲ ಎಂದು ಕಂಡುಕೊಂಡರು. ಕಾಂಗ್ರೆಸ್ ನೇತೃತ್ವದ "ಚಲೇಜಾವ್" ಮಾಡಲಾಗದ್ದನ್ನು ಈಗ ಜನಗಳ ಸಮರಶೀಲ ಚಳುವಳಿಗಳು ಮಾಡಿದವು. ಬ್ರಿಟಿಶರು ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ಮುಖಂಡರೊಡನೆ ಸಂಧಾನಕ್ಕೆ ಮುಂದಾದರು.



ಆಝಾದ್ ಹಿಂದ್ ಸೇನೆ (ಐಎನ್‌ಎ) ಚಿತ್ರ

"ಸಂದೇಶವಿಲ್ಲ"

ಅತ್ತ ಕಾಂಗ್ರೆಸ್–ಮುಸ್ಲಿಂಲೀಗ್–ಬ್ರಿಟಿಶ್ ಸರಕಾರದ ಸಂಧಾನಗಳಲ್ಲಿ ದೇಶದ ವಿಭಜನೆಯಿಲ್ಲದೆ ಸ್ವಾತಂತ್ರ್ಯ ಸಾಧ್ಯವಿಲ್ಲ ಎಂಬ ಪರಿಸ್ಥಿತಿ ನಿರ್ಮಾಣವಾಗುತ್ತಿತ್ತು. ಇದರ ಪರಿಣಾಮವಾಗಿ ಹಿಂದೂ ಮತ್ತು ಮುಸ್ಲಿಂ ಸಮುದಾಯಗಳ ನಡುವೆ ಅಪನಂಬಿಕೆಯ ಗೋಡೆ ಬೆಳೆಯಲಾರಂಭಿಸಿತ್ತು. ಮುಸ್ಲಿಂ ಲೀಗ್ 1946ರ ಅಗಸ್ಟ್ 16ನ್ನು ಪಾಕಿಸ್ತಾನದ ಬೇಡಿಕೆಗಾಗಿ "ನೇರ ಕಾರ್ಯಾಚರಣೆ"ಯ ದಿನವಾಗಿ ಆಚರಿಸಲು ನೀಡಿದ ಕರೆಯ ಹಿನ್ನೆಲೆಯಲ್ಲಿ ದೇಶದಲ್ಲಿ ಕೋಮುಗಲಭೆಗಳ ವಾತಾವರಣ ಸೃಷ್ಟಿಯಾಗುತ್ತಿತ್ತು.

ಗಾಂಧೀಜಿ ದೇಶ ವಿಭಜನೆಯ ಕಡು ವಿರೋಧಿಗಳಾಗಿದ್ದರು. ಆದರೆ ನೆಹರೂ, ಪಟೇಲ್ ಸೇರಿದಂತೆ ಕಾಂಗ್ರೆಸಿನ ಇತರ ಮುಖಂಡರು ವಿಭಜನೆ ಅನಿವಾರ್ಯ ಎಂಬ ನಿರ್ಧಾರಕ್ಕೆ ಆಗಲೇ ಬಂದಿದ್ದರು. ವಿಭಜನೆ ನಿಜವಾಗಿಯೂ ಅನಿವಾರ್ಯವಾಗಿತ್ತೇ?

ದೇಶದಲ್ಲಿ ಜನಸಾಮಾನ್ಯರಲ್ಲಿ ಸಾಮ್ರಾಜ್ಯಶಾಹಿ-ವಿರೋಧಿ ಭಾವನೆಗಳು ಧರ್ಮ-ಪ್ರದೇಶ-ಭಾಷೆಗಳ ಬೇಧಗಳನ್ನು ಮೀರಿ ಸಮರಶೀಲ ಸ್ವರೂಪ ಪಡೆದಿದ್ದಾಗ ಗಾಂಧೀಜಿಯ 'ಸತ್ಯಾಗ್ರಹ'ದ ಅಸ್ತ್ರ ಬ್ರಿಟಿಶರು ಹಾಗೆಯೇ ಕಾಲು ಕೀಳುವಂತೆ ಮಾಡಲು ಸಮರ್ಥವಾಗುತ್ತಿರಲಿಲ್ಲವೇ?. ಆದರೆ ಗಾಂಧೀಜಿ ಇದಕ್ಕೆ ಮುಂದಾಗಲಿಲ್ಲ. ಕಾಂಗ್ರೆಸ್ ಮುಖಂಡರು ದೇಶ ವಿಭಜನೆಗೆ ಒಪ್ಪಿದಾಗ ಅವರು ಆ ಒಪ್ಪಿಗೆಯ ಭಾಗವಾಗದೆ ದೂರ ಉಳಿದರಷ್ಟೇ. ಏಕೆಂದರೆ ಗಾಂಧೀಜಿಗೆ ಕಾಂಗ್ರೆಸ್ ಒಂದು ಬ್ರಿಟಿಶ್-ವಿರೋಧಿ ಸಂಯುಕ್ತ ರಂಗವಾಗಿತ್ತು. ಆದರೆ ವಾಸ್ತವವಾಗಿ ಅದು ಬಂಡವಾಳಶಾಹಿ-ಭೂಮಾಲಕ ವರ್ಗಗಳ ಪಕ್ಷವಾಗಿ ನೇತೃತ್ವದಲ್ಲಿತ್ತು. ಈ ಸಮರಶೀಲ ಕಾರ್ಯಾಚರಣೆಗಳು ಜನಗಳ ಪೂರ್ಣ ಭಾಗವಹಿಸುವಿಕೆಯಿಂದ ತಮ್ಮ ಹಿತಗಳಿಗೇ ಮಾರಕವಾಗಬಹುದೆಂಬ ಭಯ ಆ ವರ್ಗಗಳಿಗಿತ್ತು. ಗಾಂಧೀಜಿ ಮೂಲತಃ ಆ ವರ್ಗಗಳ ಮುಖಂಡರೇ ಆಗಿದ್ದರು. ಅವರ ನೇತೃತ್ವದ ಚಳುವಳಿಗಳಲ್ಲಿ ಮುಂದಿಟ್ಟ ಬೇಡಿಕೆಗಳು, ಅವರ ಕಾರ್ಯವಿಧಾನಗಳು ಇದನ್ನು ಸಾಬೀತು ಪಡಿಸಿವೆ.

ನಂತರದ ಘಟನೆಗಳು ಮಹಾನ್ ಮಾನವತಾವಾದಿ ಗಾಂಧೀಜಿಯವರನ್ನು ಖಿನ್ನವಾಗಿಸಿದವು. ಆದ್ದರಿಂದಲೇ ಕಾಂಗ್ರೆಸ್ ಮುಖಂಡರೆಲ್ಲಾ ದೇಶ ವಿಭಜನೆಯಾಗಿ ಲಕ್ಷಾಂತರ ಜನಗಳನ್ನು ದಿಕ್ಕೆಡಿಸಿದ್ದರೂ ಅಧಿಕಾರ ಹಸ್ತಾಂತರವನ್ನು ಆಚರಿಸುತ್ತಿದ್ದಾಗ ಗಾಂಧೀಜಿ ಅವೆಲ್ಲವುಗಳಿಂದಲೂ ದೂರ ನೌಖಾಲಿಯಲ್ಲಿ ವಿಭಜನೆಗೆ, ಹಿಂಸಾಚಾರಕ್ಕೆ ಬಲಿಯಾದವರಿಗೆ ಸಾಂತ್ವನ ಹೇಳುವ ಪ್ರಯತ್ನ ನಡೆಸಿದ್ದರು. ಸ್ವಾತಂತ್ರ್ಯದ ಸಂದೇಶ



ಮಹಾತ್ಮ ಗಾಂಧೀಜಿ ಹತ್ಯೆ




ದೇಶ ವಿಭಜನೆಯ ಸಂದರ್ಭದಲ್ಲಿ ಜನತೆಯ ವಲಸೆ

ಕೇಳಲು ಬಂದ ಪತ್ರಕರ್ತರಿಗೆ "ನಾನು ಒಣಗಿ ಹೋಗಿದ್ದೇನೆ. ನನ್ನ ಬಳಿ ಯಾವ ಸಂದೇಶವೂ ಇಲ್ಲ. ಅದು ಕೆಟ್ಟದೆನಿಸಿದರೆ ಹಾಗೆಯೇ ಆಗಲಿ ಬಿಡಿ" ಎಂದರು.

ಗಾಂಧೀಜಿ ಒಣಗಿ ಹೋಗಿದ್ದು ಲಕ್ಷಾಂತರ ಮುಗ್ಧರನ್ನು ಬಲಿ ತೆಗೆದುಕೊಂಡ ಕೋಮುಗಲಭೆಗಳಿಂದ ಮಾತ್ರವೇ ಅಲ್ಲ, ಅಧಿಕಾರದ ನಿರೀಕ್ಷೆಯಲ್ಲಿದ್ದ ಕಾಂಗ್ರೆಸಿಗರ ವರ್ತನೆಗಳೂ ಅವರನ್ನು ಖಿನ್ನವಾಗಿಸಿದ್ದವು. ಆದ್ದರಿಂದಲೇ ಅವರು ಕಾಂಗ್ರೆಸನ್ನು ವಿಸರ್ಜಿಸಿ ಲೋಕ ಸೇವಕ ಸಂಘವನ್ನಾಗಿ ಮಾಡಿ, ಕಾಂಗ್ರೆಸಿಗರು ತಮಗೆ ಸೂಕ್ತವೆನಿಸಿದ ಪಕ್ಷಗಳನ್ನು ಸೇರಿಕೊಳ್ಳಲಿ, ರಚಿಸಿಕೊಳ್ಳಲಿ ಎಂದು ಸೂಚಿಸಿದರು. ಅದಕ್ಕೆ ತಯಾರಿಯನ್ನೂ ನಡೆಸಿದ್ದರು. ಅದನ್ನು ಕಾರ್ಯರೂಪಕ್ಕೆ ತರುತ್ತಿದ್ದರೋ, ಇಲ್ಲವೋ. ಜನವರಿ 30, 1948ರಂದು ಒಬ್ಬ ಹಿಂದೂ ಮತಾಂಧನ ಗುಂಡು ಅದಕ್ಕೆ ಅವಕಾಶವನ್ನೂ ಕೊಡಲಿಲ್ಲ. ನಂತರ ಗಾಂಧೀಜಿಯನ್ನು ಸದಾ ಹಾಡಿ ಹೊಗಳುವ ಕಾಂಗ್ರೆಸಿಗರು ಅ ಬಗ್ಗೆ ಗಮನವನ್ನೂ ಕೊಡಲಿಲ್ಲ. ಹೇಗೆ ತಾನೆ ಕೊಟ್ಟಾರು? ○

ಸ್ವಾತಂತ್ರ್ಯ ಎಂದರೆ....

ಸ್ವಾತಂತ್ರ್ಯ ಎಂದರೆ ಕೇವಲ ಯಜಮಾನರ ಬದಲಾವಣೆ ಎಂದಾದರೆ ಅನ್ಯಾಯದ ಬುನಾದಿಯ ಮೇಲೆ ನಿಂತಿರುವ ಶೋಷಕ ವ್ಯವಸ್ಥೆ ಹಾಗೆಯೇ ಉಳಿಯುತ್ತದೆ. ಸ್ವಾತಂತ್ರ್ಯ ಎಂದರೆ ಸ್ಪಷ್ಟವಾಗಿ ಪುರಾತನವಾದ ಶೋಷಕ ವ್ಯವಸ್ಥೆಯನ್ನು ಬದಲಿಸುವುದು ಎಂದರ್ಥ.



~ ಶಹೀದ್ ಭಗತ್ ಸಿಂಗ್

ದೇಶ ವಿಭಜನೆಗೆ ಬುನಾದಿ ಹಾಕಿದ ಕೋಮುವಾದಿ ಧಾರೆ

– ಎನ್. ಕೆ. ವಂತರಾಜ್

ಸ್ವಾತಂತ್ರ್ಯಪೂರ್ವ ಭಾರತದಲ್ಲಿ ಮೂರನೇ ಧಾರೆಯೊಂದು ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಲೇ ಇಲ್ಲ. ಮಾತ್ರವಲ್ಲ ಅದನ್ನು ಸಕ್ರಿಯವಾಗಿ ವಿರೋಧಿಸಿ ಬ್ರಿಟಿಷರಿಗೆ ಬೆಂಬಲ ನೀಡಿತು. ಬ್ರಿಟಿಷರು ಭಾರತ ಬಿಡುವುದು ಖಚಿತವಾದಾಗ ಧಾರ್ಮಿಕ ಆಧಾರದ ಮೇಲೆ ದೇಶ ಪುನರ್‌ರಚಿಸುವ ಬೇಡಿಕೆ ಮುಂದಿಟ್ಟಿತು. ಅದಕ್ಕಾಗಿ ದೇಶ ಒಡೆಯುವುದಕ್ಕೂ ಸಿಧ್ಧವಾಯಿತು. ಪಾಳೆಯಗಾರಿ ವ್ಯವಸ್ಥೆಯ ಶಕ್ತಿಗಳು ಅಂದರೆ ಭೂಮಾಲಕ ಮತ್ತು ಲೇವಾದೇವಿ ಸಾಹುಕಾರರ ವರ್ಗ ಮತ್ತು ಸಾಮಂತ ರಾಜರು ಈ ಧಾರೆಯ ಹಿಂದೆ ಇದ್ದರು. ದೇಶವಿಭಜನೆಗೆ ಕಾರಣವಾದ 'ಎರಡು–ದೇಶಗಳ ತತ್ವ' ವನ್ನು ಮೊದಲ ಬಾರಿಗೆ ಪ್ರತಿಪಾದಿಸಿದ 'ಕೀರ್ತಿ' ವಾಸ್ತವವಾಗಿ ಈ ಧಾರೆ ಹೇಳಿಕೊಳ್ಳುವ ಏಕೈಕ ಸ್ವಾತಂತ್ರ್ಯ ಹೋರಾಟಗಾರ 'ವೀರ'(?) ಸಾವರ್ಕರ್‌ಗೆ ಸಲ್ಲಬೇಕು. ಹಿಂದೂ ಮಹಾಸಭಾದ ಈ ನಾಯಕ 'ಎರಡು–ದೇಶಗಳ ತತ್ವ' ಮತ್ತು ಹಿಂದೂ ಮೂಲಭೂತವಾದಿ ಕೋಮುವಾದಿ–ಫ್ಯಾಸಿಸ್ಟ್ ಪರಿಕಲ್ಪನೆ 'ಹಿಂದುತ್ವ'ವನ್ನು ಮೊದಲ ಬಾರಿಗೆ ಪ್ರತಿಪಾದಿಸಿದರು, ಜಿನ್ನಾ ಮತ್ತು ಮುಸ್ಲಿಂ ಲೀಗ್ ಅದನ್ನು ಪ್ರತಿಪಾದಿಸುವ ಪೂರಾ ಮೂರು ವರ್ಷಗಳ ಮೊದಲು.

ಗಾಂಧೀಜಿಯ ಕೋನೆಯ ಕ್ಷಣದ ಚಿತ್ರ

ಮಹಮದ್ ಅಲಿ ಜಿನ್ನ





ವಿ. ಡಿ. ಸಾವರ್ಕರ್




ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಪೂರ್ವದಲ್ಲಿ ನಡೆದ ಹೋರಾಟದಲ್ಲಿ ಮೂರು ಪ್ರಮುಖ ಧಾರೆಗಳು ಇದ್ದವು. ಅವು ದೇಶದ ಪ್ರಮುಖ ವರ್ಗಗಳ ಹಿತಾಸಕ್ತಿಗಳನ್ನು ಪ್ರತಿನಿಧಿಸಿದ್ದವು. ಬಂಡವಾಳಶಾಹಿ ವರ್ಗದ ಪ್ರತಿನಿಧಿಯಾಗಿದ್ದ ಕಾಂಗ್ರೆಸ್ ಪಕ್ಷದ ನಾಯಕತ್ವದ ಧಾರೆ, ಮೊದಲು ಸ್ವಾಯತ್ತತೆ ಆ ಮೇಲೆ ರಾಜಕೀಯ ಸ್ವಾತಂತ್ರ್ಯದ ಬಗ್ಗೆ ಮಾತ್ರ ಒತ್ತು ಕೊಟ್ಟಿತ್ತು. ಕಾರ್ಮಿಕ ವರ್ಗದ ಪ್ರತಿನಿಧಿಯಾಗಿದ್ದ ಕಮ್ಯುನಿಸ್ಟ್ ಪಕ್ಷದ ನಾಯಕತ್ವದ ಧಾರೆ ಬ್ರಿಟಿಷ್ ಸಾಮ್ರಾಜ್ಯಶಾಹಿಯಿಂದ ಆರ್ಥಿಕ ಮತ್ತು ರಾಜಕೀಯ ಸ್ವಾತಂತ್ರ್ಯಗಳಿಸುವ ಪೂರ್ಣ ವಿಮೋಚನಾ ಹೋರಾಟದ ಕಣ್ಣೋಟವನ್ನು ದೇಶದ ಜನತೆಯ ಮುಂದೆ ಇಟ್ಟಿತು. ಈ ಎರಡು ಧಾರೆಗಳಲ್ಲಿ ಭಿನ್ನಾಭಿಪ್ರಾಯ ಇದ್ದರೂ ರಾಜಕೀಯ ಸ್ವಾತಂತ್ರ್ಯ ಸಾಧಿಸುವ ಸಮಾನ ಉದ್ದೇಶದ ಆಧಾರದ ಮೇಲೆ ಜಂಟಿ ಕಾರ್ಯಾಚರಣೆ ನಡೆಸಿದವು.

ಈ ಎರಡು ಧಾರೆಗಳು ದೇಶದ ಎಲ್ಲಾ ಜನವಿಭಾಗಗಳನ್ನು ಅದರಲ್ಲೂ ರೈತಾಪಿ ಮತ್ತು ಮಧ್ಯಮ ವರ್ಗಗಳನ್ನು ಸ್ವಾತಂತ್ರ್ಯ ಹೋರಾಟಕ್ಕೆ ಅಣಿ ನೆರೆಸುವ ಪ್ರಯತ್ನ ನಡೆಸಿದವು. ಆದರೆ ಮೂರನೇ ಧಾರೆಯೊಂದು ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಲೇ ಇಲ್ಲ. ಮಾತ್ರವಲ್ಲ ಅದನ್ನು ಸಕ್ರಿಯವಾಗಿ ವಿರೋಧಿಸಿ ಬ್ರಿಟಿಷರಿಗೆ ಬೆಂಬಲ ನೀಡಿತು. ಬ್ರಿಟಿಷರು ಭಾರತ ಬಿಡುವುದು ಖಚಿತವಾದಾಗ ಧಾರ್ಮಿಕ ಆಧಾರದ ಮೇಲೆ ದೇಶ ಪುನರ್ರಚಿಸುವ ಬೇಡಿಕೆ ಮುಂದಿಟ್ಟಿತು. ಅದಕ್ಕಾಗಿ ದೇಶ ಒಡೆಯುವುದಕ್ಕೂ ಸಿದ್ಧವಾಯಿತು. ಪಾಳೆಯಗಾರಿ ವ್ಯವಸ್ಥೆಯ ಶಕ್ತಿಗಳು ಅಂದರೆ ಭೂಮಾಲಕ ಮತ್ತು ಲೇವಾದೇವಿ ಸಾಹುಕಾರರ ವರ್ಗ ಮತ್ತು ಸಾಮಂತ ರಾಜರು ಈ ಧಾರೆಯ ಹಿಂದೆ ಇದ್ದರು.



1857ರ ಪ್ರಥಮ ಸ್ವಾತಂತ್ರ್ಯ ಹೋರಾಟ



1857ರ ಪ್ರಥಮ ಸ್ವಾತಂತ್ರ್ಯ ಹೋರಾಟ

ಪ್ರಥಮ ಹೋರಾಟದ ಸೋಲಿನ ನಂತರ

1857ರ ಪ್ರಥಮ ಸ್ವಾತಂತ್ರ್ಯ ಹೋರಾಟ ಆಗ ಆಳ್ವಿಕೆ ನಡೆಸುತ್ತಿದ್ದ ರಾಜರುಗಳ ನಾಯಕತ್ವದಲ್ಲಿ ಪಾಳೆಯಗಾರಿ ಶಕ್ತಿಗಳು ನಡೆಸಿದ ಕೊನೆಯ ಹೋರಾಟ ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. ಅದರಲ್ಲಿ ರೈತಾಪಿ ಮತ್ತು ಹೆಚ್ಚಿನ ಇತರ ವರ್ಗಗಳ ಬೆಂಬಲ ಸಹ ಅವರಿಗೆ ದೊರಕಿತ್ತು. ಬ್ರಿಟಿಷರು ಈ ಹೋರಾಟವನ್ನು ಸೋಲಿಸಿ ತೀವ್ರವಾಗಿ ದಮನಿಸಿದ ನಂತರ ಈ ಶಕ್ತಿಗಳು ಬ್ರಿಟಿಷರಿಗೆ ವಿಧೇಯರಾಗಿ ಅಡಿಯಾಳಾಗಿ ಇದ್ದು ಬಿಟ್ಟವು. ಇತರ ವರ್ಗಗಳು ತಾವಾಗಿಯೇ ಹೋರಾಟ ನಡೆಸುವ ಅಥವಾ ಅದರ ನಾಯಕತ್ವ ವಹಿಸುವ ಶಕ್ತಿ ಹೊಂದಿರಲಿಲ್ಲ. ಬ್ರಿಟಿಷ್ ಆಡಳಿತದ ಪರಿಣಾಮವಾಗಿ ಹುಟ್ಟಿ ಬೆಳೆದ ಹೊಸ ಎರಡು ವರ್ಗಗಳು ವರ್ಧಮಾನ ಸ್ಥಿತಿಗೆ ಬಂದಾಗ ಅವು ಈ ಬ್ರಿಟಿಷ್ ಸಾಮ್ರಾಜ್ಯಶಾಹಿಗೆ ಪ್ರತಿರೋಧ ತೋರಿಸಲು ಆರಂಭಿಸಿದವು.

ಭಾರತೀಯ ಬಂಡವಾಳಶಾಹಿ ಮತ್ತು ಕಾರ್ಮಿಕ ವರ್ಗಗಳೇ ಆ ಹೊಸ ವರ್ಗಗಳು. ಬಂಡವಾಳಶಾಹಿ ವರ್ಗ ಅದರ ಆರ್ಥಿಕ ಬಲದಿಂದ ಮೊದಲು ವರ್ಧಮಾನ ಸ್ಥಿತಿಗೆ ಬಂತು. ಇಂಗ್ಲೀಷ್ ಶಿಕ್ಷಣ ಮತ್ತು ಬ್ರಿಟಿಷ್ ಸರ್ಕಾರೀ ನೌಕರಿಯ ಲಾಭ ಪಡೆದ ಹೊಸ ಮಧ್ಯಮ ವರ್ಗ ಸಹ ಬೆಳೆಯಿತು. ಈ ವರ್ಗಗಳ ಆಕಾಂಕ್ಷೆಗಳ ಫಲವಾಗಿ ಹೊಸ ರಾಷ್ಟ್ರೀಯತೆಯ ಪ್ರಜ್ಞೆ ಬೆಳೆಯಲಾರಭಿಸಿತು. ಅದರ ರಾಜಕೀಯ ರೂಪವೇ 1885 ರಲ್ಲಿ ಇಂಡಿಯನ್ ನ್ಯಾಶನಲ್ ಕಾಂಗ್ರೆಸ್‌ನ ಜನನ. ಬ್ರಿಟಿಷ್ ಸರ್ಕಾರದಿಂದ ಹಲವು ಸವಲತ್ತು ಮತ್ತು ರಿಯಾಯಿತಿಗಳಿಗೆ ಸುಧಾರಣೆಗಳಿಗೆ ಬರಿಯ ಮನವಿ ಕೊಡಲು ಆರಂಭಿಸಿದ ಕಾಂಗ್ರೆಸ್, ಕ್ರಮೇಣ ದೇಶದ ಇಡೀ ದೇಶದ ಪರವಾಗಿ ಮಾತನಾಡುವ ಬಲ ಪಡೆಯುವತ್ತ ನಡೆಯಿತು. ಇದು ಹಿಂದೆ ಆಳುವ ವರ್ಗಗಳಾಗಿದ್ದ ಭೂಮಾಲಕ-ರಾಜರು ಮತ್ತು ಇತರ ಪಾಳೆಯಗಾರಿ ಶಕ್ತಿಗಳಿಗೆ ಇರುಸು ಮುರುಸು ತಂದಿತು.

ಕಾಶಿಯ ಸರ್ ಸೈಯ್ಯದ್ ಅಹ್ಮದ್ ಖಾನ್ ಮತ್ತು ರಾಜಾ ಶಿವಪ್ರಸಾದ್ ಕಾಂಗ್ರೆಸ್‌ಗೆ ವಿರುದ್ಧವಾಗಿ, 1888 ರಲ್ಲಿ ಯುನೈಟೆಡ್ ಇಂಡಿಯಾ ಪೇಟ್ರಿಯೊಟಿಕ್ ಅಸೋಸಿಯೇಶನ್ ಸ್ಥಾಪಿಸಿದರು. ಇದಕ್ಕೆ ಹಲವು ಪ್ರಮುಖ ಹಿಂದೂ-ಮುಸ್ಲಿಂ ಭೂಮಾಲಕರು, ರಾಜರು-ನವಾಬರುಗಳ ಬೆಂಬಲ ದೊರೆಯಿತು. ಇದರ ಜತೆ ಇದ್ದ ಹಲವು ಪ್ರಮುಖರು ಆ ಮೇಲೆ ಹಿಂದೂ ಮಹಾ ಸಭಾ ಮತ್ತು ಮುಸ್ಲಿಂ ಲೀಗ್‌ಗಳ ನಾಯಕತ್ವ ವಹಿಸಿದರು ಎಂಬುದು ಗಮನಾರ್ಹ.

ಕೋಮುವಾದದ ಹುಟ್ಟು

1857ರ ಪ್ರಥಮ ಸ್ವಾತಂತ್ರ್ಯ ಹೋರಾಟದಲ್ಲಿ ಹಿಂದೂ ಮತ್ತು ಮುಸ್ಲಿಂ ರಾಜರುಗಳು, ಸೈನಿಕರು ಜನಸಾಮಾನ್ಯರು ಒಟ್ಟಾಗೇ ಹೋರಾಡಿದ್ದರು. ಆದರೆ ಹೋರಾಟ ವಿಫಲವಾದ ನಂತರ ಬ್ರಿಟಿಷರು ಹರಿಯ ಬಿಟ್ಟ ದಮನ ಸಮಾನವಾಗಿರಲಿಲ್ಲ. ಮುಸ್ಲಿಮರನ್ನು ಹೆಚ್ಚು ಗುರಿ ಮಾಡಿತ್ತು. ಉದಾಹರಣೆಗೆ ದೆಹಲಿಯಲ್ಲಿ ಹೋರಾಟದಲ್ಲಿ ಭಾಗವಹಿಸಿದ ಹಿಂದೂಗಳು ತಮ್ಮ ಆಸ್ತಿಯ ಒಂದು ಭಾಗ ಕಳೆದುಕೊಂಡು ದೆಹಲಿಗೆ ಹಿಂತಿರುಗಬಹುದಾಗಿತ್ತು. ಆದರೆ ಹೋರಾಟದಲ್ಲಿ ಭಾಗವಹಿಸಿದ ಮುಸ್ಲಿಮರು ಎರಡು ವರ್ಷಗಳ ವರೆಗೆ ದೆಹಲಿಗೆ ಹಿಂತಿರುಗಿ ತಮ್ಮ ಆಸ್ತಿ ಪಡೆಯಲು ಸಾಧ್ಯವಿರಲಿಲ್ಲ. ಆ ಮೇಲೂ ಮುಸ್ಲಿಮರ ಆಸ್ತಿಯ (ಹಿಂದೂಗಳಿಗಿಂತ) ಹೆಚ್ಚಿನ ಭಾಗವನ್ನು ಬ್ರಿಟಿಷ್ ಸರ್ಕಾರ ಮುಟ್ಟುಗೋಲು ಹಾಕಿ ಕೊಳ್ಳುತ್ತಿತ್ತು. ಈ ಅಸಮಾನ ವರ್ತನೆ ಎರಡು ಜನವಿಭಾಗಗಳ ನಡುವೆ ಒಡಕು-ವಿರಸ ತರುವ ಬ್ರಿಟಿಷರ ಪ್ರಜ್ಞಾಪೂರ್ವಕ ಪ್ರಯತ್ನದ ಭಾಗವೂ ಆಗಿತ್ತು. ಮುಸ್ಲಿಮರನ್ನು ಪ್ರಮುಖ ಆಡಳಿತದ ಹುದ್ದೆಗಳಿಂದ ದೂರ ಇಡಲಾಯಿತು. ಇದರಿಂದ ರೋಸಿದ ಮುಸ್ಲಿಮರು ಇಂಗ್ಲಿಷ್ ಶಿಕ್ಷಣ, ಸರ್ಕಾರೀ ಉದ್ಯೋಗಗಳಿಂದ ದೂರ ಉಳಿದರು.

ಬ್ರಿಟಿಷ್ ಆಕ್ರಮಣ ಮತ್ತು ಆಡಳಿತ ಭಾರತದ ಸಮಾಜವನ್ನು ಬುಡದ ವರೆಗೆ ಅಲ್ಲಾಡಿಸಿತು. ಭಾರತೀಯ ಸಮಾಜದಲ್ಲಿ ಇದರಿಂದ ಬಂದ ಹಲವು ಮೂಲಭೂತ ಬದಲಾವಣೆಗಳು ಹೆಚ್ಚಾಗಿ ನಕಾರಾತ್ಮಕವಾಗಿದ್ದವು – ಕನಿಷ್ಟ ಸಾಮಾನ್ಯ ಜನತೆಯ ಬದುಕನ್ನು ಇನ್ನಷ್ಟು ದುರ್ಭರಗೊಳಿಸಿದ್ದರಿಂದ. ಈ ಹೊಸ ಸನ್ನಿವೇಶಕ್ಕೆ ಹೊಂದಿಕೊಳ್ಳುವ, ಬ್ರಿಟಿಷರಿಗೆ ಪ್ರತಿರೋಧ ತೋರಿಸುವ ಹಲವು ಪ್ರತಿಕ್ರಿಯೆಗಳು ಕಂಡವು. ರಾಜಾರಾಮಮೋಹನ ರಾಯರ ಶಿಕ್ಷಣ ಸಮಾಜ ಸುಧಾರಣೆಗೆ ಚಳುವಳಿ, ಸೈಯ್ಯದ್ ಅಹ್ಮದ್ ಖಾನ್ ರ ಅಲಿಘಡ ಶಿಕ್ಷಣ ಚಳುವಳಿ, ಬ್ರಮ್ಹ ಸಮಾಜ, ರಾಮಕೃಷ್ಣ ಮಿಶನ್, ಆರ್ಯ ಸಮಾಜದಂತಹ ಧಾರ್ಮಿಕ ಚಳುವಳಿಗಳು ಈ ಸ್ಪಂದನದ ಭಾಗವಾಗಿದ್ದವು. ಭಾರತದ ಸಮಾಜ ವಿವಿಧ ವರ್ಗ, ಜಾತಿ, ಧರ್ಮ, ಭಾಷೆ, ಆಚಾರ-ವಿಚಾರ, ಸಂಸ್ಕೃತಿಗಳ ಜನವಿಭಾಗಗಳ ಸ್ಪಂದನ ಬೇರೆ ಬೇರೆಯಾಗಿದ್ದವು. ಮುಖ್ಯವಾಗಿ ಹಿಂದೂ ಮತ್ತು ಮುಸ್ಲಿಂ ಪ್ರತಿಷ್ಟಿತರ ಶ್ರೀಮಂತರ ಸ್ಪಂದನ ಬೇರೆಯಾಗಿದ್ದೇ ಕೋಮುವಾದದ ಹುಟ್ಟಿಗೆ ಕಾರಣ. ಆರಂಭದಲ್ಲಿ ಕೋಮುವಾದ ಮೃದುರೂಪ ಹೊಂದಿದ್ದು, ಆ ಕೋಮಿನ ಎಲ್ಲರ ಬೆಂಬಲವನ್ನೇನು ಪಡೆದಿರಲಿಲ್ಲ.

ಬಂಗಾಳದ ವಿಭಜನೆ

ಹಿಂದೂಗಳೇ ಹೆಚ್ಚಾಗಿ ಇಂಗ್ಲಿಷ್ ಶಿಕ್ಷಣ ಮತ್ತು ಬ್ರಿಟಿಷ್ ಸರ್ಕಾರೀ ನೌಕರಿಯ ಲಾಭ ಪಡೆದರು. 1817 ರಲ್ಲಿ ಕಲ್ಕತ್ತದ ಹಿಂದೂ ಕಾಲೇಜು ಸ್ಥಾಪನೆ ಆದರೆ, ಅಲೀಗಡದಲ್ಲಿ ಆಂಗ್ಲೋ-ಮಹಮ್ಮಡನ್ ಕಾಲೇಜು ಸ್ಥಾಪನೆ ಆಗಿದ್ದು 1874 ರಲ್ಲಿ – ಸುಮಾರು 57 ವರ್ಷಗಳ ನಂತರ. ಹೊಸ ವರ್ಗಗಳಲ್ಲಿ (ಕೈಗಾರಿಕೋದ್ಯಮಿಗಳು, ವಕೀಲರು-ಡಾಕ್ಟರು-ಪ್ರೊಫೆಸರ್ ಮುಂತಾದ ಉದ್ಯೋಗಿಗಳು) ಹಿಂದೂಗಳ ಪ್ರಾತಿನಿಧ್ಯ ಹೆಚ್ಚಾಗಿ ಇತ್ತು. ಇದು 1857ರ ಪ್ರಥಮ ಸ್ವಾತಂತ್ರ್ಯ ಹೋರಾಟದ ಬಿಸಿ ತೀವ್ರವಾಗಿ ಮುಟ್ಟದ ಬಂಗಾಳದಲ್ಲಿ ಇನ್ನಷ್ಟು ಹೆಚ್ಚು ಅನ್ವಯವಾಗುತ್ತಿತ್ತು. ಈ ಹಲವು ಕಾರಣಗಳಿಂದ ಕನಿಷ್ಟ ಉನ್ನತ ವರ್ಗದ 'ಪ್ರತಿಷ್ಟಿತ' ಹಿಂದೂ ಮತ್ತು ಮುಸ್ಲಿಮರ ನಡುವೆ ಕಂದಕ ಬೆಳೆಯುತ್ತಾ ಹೋಯಿತು. ಅವರು ತಮ್ಮ ಹಿತಾಸಕ್ತಿ ಕಾಪಾಡಲು ತಮ್ಮ ಮತದ ಜನರನ್ನು ಅಣಿನೆರೆಸಲು ಪ್ರಯತ್ನಿಸಿದ್ದು ಕೋಮುವಾದಿ ರಾಜಕೀಯದ ಹಿಂದೂ ಮತ್ತು ಮುಸ್ಲಿಮರ ಐಕ್ಯತೆಯ ಬಲ ಕಂಡಿದ್ದ ಬ್ರಿಟಿಷರು ಹಿಂದೂ ಮತ್ತು ಮುಸ್ಲಿಮರ ನಡುವೆ ವಿರಸ-ಘರ್ಷಣೆ ತರುವ ಯಾವ ಅವಕಾಶವನ್ನೂ ಬಿಡಲಿಲ್ಲ.

1905 ರಲ್ಲಿ ಬ್ರಿಟಿಷರು ತಂದ ಬಂಗಾಳದ ವಿಭಜನೆ ಇಂತಹ ಒಂದು ಪ್ರಯತ್ನವಾಗಿತ್ತು. ಪೂರ್ವ ಬಂಗಾಳ ಮುಸ್ಲಿಂ ಬಹುಸಂಖ್ಯಾತ ಭಾಗವಾಗಿತ್ತು. ಪಶ್ಚಿಮ ಬಂಗಾಳ ಹಿಂದೂ ಬಹುಸಂಖ್ಯಾತ ಭಾಗವಾಗಿತ್ತು. ಆದರೆ ಇಡೀ ಬಂಗಾಳದಲ್ಲಿ ಉನ್ನತ ವರ್ಗದ ಹಿಂದೂಗಳು ಶಿಕ್ಷಣ, ಉದ್ಯೋಗಗಳಲ್ಲಿ ಮುನ್ನಡೆ ಹೊಂದಿ ಪ್ರಬಲವಾಗಿದ್ದರು. ಪೂರ್ವ ಬಂಗಾಳ ಪ್ರತ್ಯೇಕ ಪ್ರಾಂತ್ಯ ಆದರೆ ತಮಗೆ ಶಿಕ್ಷಣ, ಉದ್ಯೋಗಗಳಲ್ಲಿ ಮುನ್ನಡೆ ಸಾಧಿಸಲು ಹೆಚ್ಚಿನ ಅವಕಾಶ ಸಿಗಬಹುದು ಎಂಬ ಆಸೆಯನ್ನು

ಉನ್ನತ ಮತ್ತು ಮಧ್ಯಮ ವರ್ಗದ ಮುಸ್ಲಿಮರಲ್ಲಿ ಚಿಗುರಿಸಿತು. ಬಂಗಾಳದ ವಿಭಜನೆಯ ವಿರುದ್ಧ ವ್ಯಾಪಕವಾಗಿ ವಿರೋಧ, ಜನಾಂದೋಲನ ಕಂಡು ಬಂದರೂ ಬ್ರಿಟಿಷರು ಹಠದಿಂದ ಅದನ್ನು ಜಾರಿ ಮಾಡಿದರು.

ಇದರಿಂದ ಒಂದು ಕಡೆ ಬ್ರಿಟಿಷ್-ವಿರೋಧಿ ಭಾವನೆ ಪ್ರಬಲವಾದರೆ, ಇನ್ನೊಂದು ಕಡೆ ಕೋಮುವಾದಿ ಭಾವನೆಗಳು ಸಹ ಗಟ್ಟಿಯಾದವು. ಬಂಗಾಳ ವಿಭಜನೆ ನಂತರವೇ ಮುಸ್ಲಿಂ ಲೀಗ್ (1906) ಮತ್ತು ಪಂಜಾಬಿ ಹಿಂದೂ ಸಭಾ (1907) ಸ್ಥಾಪನೆಗೊಂಡವು. ಇದೇ ಪಂಜಾಬಿ ಹಿಂದೂ ಸಭಾ ಮುಂದೆ 1915 ರಲ್ಲಿ ಹಿಂದೂ ಮಹಾ ಸಭಾದ ಸ್ಥಾಪನೆಗೆ ನಾಂದಿ ಹಾಡಿತು) ಎಂದು ಗಮನಿಸಬೇಕು. ಇವೆರೆಡೂ ಕೋಮುವಾದಿ ರಾಜಕೀಯದ ಧಾರೆಗೆ ಬುನಾದಿ ಹಾಕಿದುವು. ಆಯಾ ಕೋಮಿನ ಪ್ರತಿಷ್ಟಿತರ ಹಿತಾಸಕ್ತಿ ಕಾಪಾಡಲು ಬ್ರಿಟಿಷರಿಂದ ಹೆಚ್ಚಿನ ಸವಲತ್ತು ಗಳಿಸಲು ಹುಟ್ಟಿದ ಈ ಸಂಸ್ಥೆಗಳು ಯಾವತ್ತೂ ಭಾರೀ ಜನಬೆಂಬಲ ಗಳಿಸಲಿಲ್ಲ. ಜನತೆಯ ದೇಶದ ಸಮಸ್ಯೆಗಳ ಬಗ್ಗೆ ವಿಶ್ಲೇಷಣೆ, ಪರಿಹಾರದ ಬಗ್ಗೆ ಪ್ರಯತ್ನ ಹೋರಾಟ ಮಾಡಲಿಲ್ಲ. ಆಗಿನ ಬ್ರಿಟಿಷ್ ಭಾರತದಲ್ಲಿ ಶಾಸನ ಸಭೆಗಳ ಸದಸ್ಯತ್ವ ಸೀಮಿತ ಮತದಾರರರಿಂದ (ಶಿಕ್ಷಣ ಪಡೆದವರು ಮಾತ್ರ) ಚುನಾವಣೆ ಮತ್ತು ನಾಮಕರಣದ ಆಧಾರದಲ್ಲಿ ಸಿಗುತ್ತಿದ್ದವು. ಈ ರಾಜಕೀಯ ಅಧಿಕಾರದ ಲಾಲಸೆ ಸಹ ಕೋಮುವಾದಿ ರಾಜಕೀಯಕ್ಕೆ ಒತ್ತಾಸೆ ನೀಡಿತು.

ಆರ್ಯ ಸಮಾಜದ ಸ್ವಾಮಿ ಶ್ರಧ್ಧಾನಂದರು ಆರಂಭಿಸಿದ ಶುಧ್ಧಿ ಎಂದು ಕರೆಯಲಾದ ಚಳುವಳಿ (ಇಸ್ಲಾಮಿನಿಂದ ಮತಾಂತರ ಅಥವಾ ಹಿಂದೂ ಧರ್ಮಕ್ಕೆ 'ಮರಳುವುದು') ಹಿಂದೂ ಧಾರ್ಮಿಕ ಭಾವನೆಗಳನ್ನು ಉದ್ರೇಕಗೊಳಿಸಿತು. ಶುಧ್ಧಿ ಚಳುವಳಿಯ ನಾಯಕರೇ ಪಂಜಾಬೀ ಹಿಂದೂ ಮಹಾ ಸಭಾ ಸ್ಥಾಪಿಸಿದ್ದು. ಮದನ ಮೋಹನ ಮಾಳವೀಯ, ಲಾಲಾ ಲಾಜಪತ್ ರಾಯ್ ಮುಂತಾದ ನಾಯಕರು ಶುಧ್ಧಿ ಚಳುವಳಿ ಬೆಂಬಲಿಸಿದ್ದು ಹಿಂದೂ ಸಭಾಕ್ಕೂ ಬೆಂಬಲ ಕೊಟ್ಟರು. ಮಹಾರಾಷ್ಟದಲ್ಲಿ ಕಾಂಗ್ರೆಸ್‌ನ ಅಗ್ರ ನಾಯಕರಾಗಿದ್ದ ತಿಲಕರು ರಾಜಕೀಯವಾಗಿ ಜನರನ್ನು ಅಣಿ ನೆರೆಸುವ ಸಾಧನವಾಗಿ 'ಗಣೇಶೋತ್ಸವ' ದಂತಹ ಧಾರ್ಮಿಕ ಆಚರಣೆಗಳಿಗೆ ಮೊರೆ ಹೋದರು. ಇದರಿಂದ ಜಾತ್ಯತೀತ ಪ್ರಜ್ಞೆಗೆ ಅಗತ್ಯವಿದ್ದ ರಾಜಕೀಯ-ಧರ್ಮಗಳ ಪ್ರತ್ಯೇಕ ಮಾಡುವ ಬದಲು ಮಿಶ್ರಣ ಮಾಡುವ ಪ್ರವೃತ್ತಿ ಬೆಳೆಯಿತು. 1906 ರಲ್ಲಿ ಆಗಾಖಾನ್ ನೇತೃತ್ವದಲ್ಲಿ 35 ಮುಸ್ಲಿಂ ನಾಯಕರು ಪ್ರತ್ಯೇಕ ಮುಸ್ಲಿಂ ಮತಕ್ಷೇತ್ರದ ಮತ್ತು ಜನಸಂಖ್ಯೆ ಅನುಪಾತಕ್ಕೆ ಅನುಗುಣವಾಗಿ ಕ್ಷೇತ್ರಗಳ ಮೀಸಲಾತಿಯ ಬೇಡಿಕೆಯನ್ನು ಬ್ರಿಟಿಷ್ ಸರ್ಕಾರದ ಮುಂದೆ ಇಟ್ಟರು. ಇದು ಭಾರತದ ಸ್ವಾತಂತ್ರ್ಯಕ್ಕೆ ರಾಜಕೀಯ ಹೋರಾಟವನ್ನು ಛಿದ್ರಗೊಳಿಸುವ ಕೋಮುವಾದಿ ಚಟುವಟಿಕೆಯ ಮುಖ್ಯ ವಾಹನವಾಯಿತು. ಬ್ರಿಟಿಷರ ಪ್ರಚೋದನೆಯಿಂದಲೇ ಈ ಪ್ರಸ್ತಾವ ಬಂದಿದ್ದು, ಸರ್ಕಾರ ತಕ್ಷಣವೇ ಒಪ್ಪಿಕೊಂಡಿತು. 1909 ರಲ್ಲಿ ಬಂದ ಇಂಡಿಯಾ ಕೌನ್ಸಿಲ್ ಆಕ್ಟ್ ಪ್ರತ್ಯೇಕ ಮುಸ್ಲಿಂ ಮತಕ್ಷೇತ್ರಗಳನ್ನು ಕಾರ್ಯರೂಪಕ್ಕೆ ತಂದಿತು.



ಮದನ ಮೋಹನ ಮಾಳವೀಯ

ಕೋಮು ಐಕ್ಯತೆಯ ಸ್ವಲ್ಪ ವಿರಾಮ

ಬ್ರಿಟಿಷರು ಪ್ರತ್ಯೇಕ ಮತಕ್ಷೇತ್ರಗಳ ಮೂಲಕ ಹಿಂದೂ-ಮುಸ್ಲಿಂ ಐಕ್ಯತೆ ಒಡೆಯುವ ಪ್ರಯತ್ನ ಪೂರ್ಣ ಸಫಲವಾಗಲಿಲ್ಲ. 1916 ರಲ್ಲಿ ಜಿನ್ನಾ ಮುಸ್ಲಿಂ ಲೀಗ್ ಅಧ್ಯಕ್ಷರಾಗಿದ್ದಾಗ ಈ ಮತಕ್ಷೇತ್ರಗಳ ಬಗ್ಗೆ ಇದ್ದ ಆತಂಕ ನಿವಾರಿಸಿ ತರಬೇಕಾದ ಸುಧಾರಣೆಗಳ ಬಗ್ಗೆ ಕಾಂಗ್ರೆಸ್-ಮುಸ್ಲಿಂ ಲೀಗ್ ಒಂದು ಒಪ್ಪಂದಕ್ಕೆ ಬಂತು. ಅದು 1919 ರಲ್ಲಿ ಗವರ್ನಮೆಂಟ್ ಆಫ್ ಇಂಡಿಯಾ ಆಕ್ಟ್ ನಲ್ಲಿ ಇವು ಶಾಸನ ರೂಪ ಪಡೆದವು. ಮೊದಲನೇ ಮಹಾಯುಧ್ಧದ ನಂತರವೂ ರಾಜಕೀಯ ಸುಧಾರಣೆಗಳ ನಿರೀಕ್ಷೆ ಹುಸಿಯಾಗಿ ರೌಲತ್ ಕಾಯಿದೆಯಿಂದ ದಮನ ತೀವ್ರವಾದಾಗ, ಗಾಂಧೀಜಿ ನಾಯಕತ್ವ ವಹಿಸಿಕೊಂಡು ಜನಾಂದೋಲನ ತೀವ್ರಗೊಂಡಿತು. 1921 ರಲ್ಲಿ ಕಾಂಗ್ರೆಸ್ ಗಾಂಧೀಜಿ ನಾಯಕತ್ವದಲ್ಲಿ ಅಸಹಕಾರ ಚಳುವಳಿಗೆ ಕರೆ ಕೊಟ್ಟಾಗ ಇದಕ್ಕೆ ಭಾರೀ ಜನಸ್ಪಂದನ ದೊರೆತಿತ್ತು. 1920 ರಲ್ಲಿ ಗಾಂಧೀಜಿ ಮತ್ತು ಅಲಿ ಸಹೋದರರ ನಾಯಕತ್ವದಲ್ಲಿ ಈಗಾಗಲೇ ಆರಂಭವಾಗಿದ್ದ ಖಿಲಾಫತ್ ಚಳುವಳಿಯಿಂದ ಪ್ರಚಂಡ ಹಿಂದೂ-ಮುಸ್ಲಿಂ ಐಕ್ಯತೆ ಕಂಡು ಬಂದಿತ್ತು. ಅಸಹಕಾರ ಚಳುವಳಿಯ ಹಲವು ಪ್ರಮುಖ ಬೇಡಿಕೆಗಳಲ್ಲಿ ಖಿಲಾಫತ್‌ನ ಬೇಡಿಕೆಗಳೂ ಒಳಗೊಂಡಿದ್ದರಿಂದ ಈ ಐಕ್ಯತೆ ಇನ್ನಷ್ಟು ಗಟ್ಟಿಗೊಂಡಿತು. ಆದರೆ 1922 ರಲ್ಲಿ ಚೌರಿ ಚೌರಾ ಘಟನೆಗಳ ಹಿನ್ನೆಲೆಯಲ್ಲಿ ಗಾಂಧೀಜಿ ಚಳುವಳಿ ವಾಪಸು ಪಡೆದಾಗ ದೇಶದ ಜನತೆಯಲ್ಲಿ ಮೂಡಿದ ಆಕ್ರೋಶ ನಿರಾಶಾಭಾವನೆ, ಇತರ ಹಲವು ಪರಿಣಾಮಗಳ ಜತೆ ಕೋಮುವಾದಿ ಶಕ್ತಿಗಳನ್ನು ಬಲಪಡಿಸಿತು.


ಕೋಮು-ಜಾತಿಗಳನ್ನು ಮೀರಿ ಪ್ರಬಲವಾಗಿ ಮೂಡಿ ಬಂದಿದ್ದ ರಾಷ್ಟ್ರೀಯ ಐಕ್ಯತೆಯನ್ನು ದುರ್ಬಲಗೊಳಿಸಿತು.

1924 ರಲ್ಲಿ ವ್ಯಾಪಕ ಕೋಮು ಗಲಭೆಗಳು ನಡೆದವು. ಇದರ ಹಿಂದೆ ಬ್ರಿಟಿಷರ ಮತ್ತು ಹಿಂದೂ-ಮುಸ್ಲಿಂ ಕೊಮುವಾದಿಗಳ ಕೈವಾಡ ಇತ್ತು. ಆರೆಸ್ಸೆಸ್ 1925 ರಲ್ಲಿ ಸ್ಥಾಪಿತವಾಯಿತು. ದೇಶದ ರಾಜಕೀಯದಲ್ಲಿ ಹಿಂದೂ ಮಹಾಸಭಾ ಮತ್ತು ಮುಸ್ಲಿಂ ಲೀಗ್‌ಗಳ ಪಾತ್ರ ಹೆಚ್ಚಾಯಿತು. ಹೆಚ್ಚಿನ ರಾಜಕೀಯ ಪಕ್ಷಗಳು ಸೈಮನ್ ಕಮಿಶನ್ ಬಹಿಷ್ಕರಿಸಿದ್ದ ಹಿನ್ನೆಲೆಯಲ್ಲಿ 1927 ರಲ್ಲಿ ಮೋತಿಲಾಲ್ ನೆಹರೂ ನೇತೃತ್ವದಲ್ಲಿ ಹಲವಾರು ರಾಜಕೀಯ ನಾಯಕರು ಇದ್ದ ಒಂದು ಸಮಿತಿ ರಚಿಸಿಕೊಂಡರು. ನೆಹರೂ ಸಮಿತಿ ಕಾಂಗ್ರೆಸ್, ಮುಸ್ಲಿಂ ಲೀಗ್, ಹಿಂದೂ ಮಹಾಸಭಾ ಮುಂತಾದ ರಾಜಕೀಯ ಶಕ್ತಿಗಳು ಒಪ್ಪಬಹುದಾದ ಸಂವಿಧಾನ ರಚಿಸಲು ಪ್ರಯತ್ನಿಸಿತು. ಪ್ರತ್ಯೇಕ ಮುಸ್ಲಿಂ ಮತಕ್ಷೇತ್ರ ಅಥವಾ ಮೀಸಲಾತಿ ಆಧಾರಿತ ಸಾಮಾನ್ಯ ಮತಕ್ಷೇತ್ರ ಇರಬೇಕೇ ಎಂಬುದು ಭಾರೀ ವಿವಾದದ ವಿಷಯವಾಯಿತು. ಕೆಲವು ಷರತ್ತುಗಳ ಮೇಲೆ ಮುಸ್ಲಿಂ ಲೀಗ್ ಸಾಮಾನ್ಯ ಮತಕ್ಷೇತ್ರಕ್ಕೆ ಒಪ್ಪಿತ್ತು. ಆದರೆ ಹಿಂದೂ ಮಹಾಸಭಾ ಆ ಷರತ್ತುಗಳನ್ನು ಬಲವಾಗಿ ವಿರೋಧಿಸಿ ಒಮ್ಮತ ಸಾಧ್ಯವಾಗದೆ ಹೋಯಿತು.

ಕೋಮುವಾದಿಗಳಿಗೆ ಜನ ಬೆಂಬಲ ಇರಲಿಲ್ಲ

ಕೋಮುವಾದಿ ಶಕ್ತಿಗಳಿಗೆ ನಿಜವಾಗಿಯೂ ಜನತೆಯ ನಡುವೆ ಅಂತಹ ಹೇಳಿಕೊಳ್ಳುವ ಬೆಂಬಲ ಇರಲಿಲ್ಲ. ಮುಸ್ಲಿಂ ಲೀಗ್ ಹಿಂದೂ ಮಹಾಸಭಾಕ್ಕೆ ಹೋಲಿಸಿದರೆ ಹೆಚ್ಚು ಜನಬೆಂಬಲ ಪಡೆದಿತ್ತು. ಆದರೆ ಮುಸ್ಲಿಮರು ದೊಡ್ಡ ಸಂಖ್ಯೆಯಲ್ಲಿದ್ದ ಉತ್ತರ ಪ್ರದೇಶ, ಬಿಹಾರಗಳಲ್ಲೂ ಲೀಗ್‌ಗೆ ಗಮನಾರ್ಹ ಬೆಂಬಲ ಇರಲಿಲ್ಲ. ಎಲ್ಲಾ ಮುಸ್ಲಿಂ ಬಹುಸಂಖ್ಯಾತ ರಾಜ್ಯಗಳಲ್ಲೂ ಲೀಗ್‌ಗೆ ದೊಡ್ಡ ಬೆಂಬಲ ಸಿಗಲಿಲ್ಲ. ಬಂಗಾಳ, ಪಂಜಾಬ್ ನಲ್ಲಿ ಮಾತ್ರ ಸ್ವಲ್ಪ ಮಟ್ಟಿನ ಬೆಂಬಲ ಸಿಕ್ಕಿತು. ಕಾಶ್ಮೀರದಲ್ಲಿ ಶೇಖ್ ಅಬ್ದುಲ್ಲಾರ ನೇಶನಲ್ ಕಾನ್ಫರೆನ್ಸ್, ಗಡಿನಾಡು ಪ್ರಾಂತ್ಯದಲ್ಲಿ 'ಗಡಿನಾಡ ಗಾಂಧಿ' ಎಂದೇ ಹೆಸರಾದ ಗಫಾರ್ ಖಾನ್‌ರ ಖುದಾಯಿ ಖಿದ್ಮತ್ ಗಾರ್ (ಅಥವಾ ಕೆಂಪು ಶರಟಿನ ಚಳುವಳಿ) ಪ್ರಬಲವಾಗಿತ್ತು. ಉತ್ತರ ಪ್ರದೇಶ ಮುಂತಾದ ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಮುಸ್ಲಿಮ್ ಜನತೆಯ ಬೆಂಬಲ ಪಡೆದಿದ್ದು, ಆಜಾದ್, ಡಾ. ಅನ್ಸಾರಿ, ಹಕೀಂ ಅಜ್ಮಲ್ ಖಾನ್ ಮುಂತಾದ ನಾಯಕರು ಹೊಮ್ಮಿದರು. ಹಲವು ಪ್ರಾಂತ್ಯಗಳಲ್ಲಿ ಮುಸ್ಲಿಂ ಜನತೆ ಕಮ್ಯುನಿಸ್ಟ್ ಚಳುವಳಿಯ ಬೆಂಬಲಿಗರೂ ಆಗಿದ್ದರು.


ಕೆ. ಬಿ. ಹೆಡ್ಗೇವಾರ್


Golwalkar: the brain of RSS
ಎಂ .ಎಸ್. ಗೋಳ್ವಲ್ಕರ್

1931 ರ ಉಪ್ಪಿನ ಸತ್ಯಾಗ್ರಹ ಮತ್ತು ಆ ಮೇಲಿನ ಕಾಯಿದೆ ಭಂಗ ಚಳುವಳಿಯ ಒತ್ತಡದಿಂದ 1937 ರಲ್ಲಿ ಜವಾಬ್ದಾರಿ ಸರ್ಕಾರಗಳಿಗೆ ಚುನಾವಣೆ ನಡೆಯಿತು. ಇದು 1932 ರಲ್ಲಿ ಕೊಡಲಾದ ಮಾಕ್ಡೊನಾಲ್ಡ್ 'ಕಮ್ಯುನಲ್ ಅವಾರ್ಡ್' ಎಂದು ಕರೆಯಲಾದ ಕೋಮುವಾರು ಪ್ರತ್ಯೇಕ ಮತಕ್ಷೇತ್ರಗಳ ಆಧಾರದ ಮೇಲೆ ನಡೆಯಿತು. ಆಗ ನಡೆದ ಚುನಾವಣೆಯಲ್ಲೂ ಮುಸ್ಲಿಂ ಲೀಗ್ 482 ಮುಸ್ಲಿಂ ಮೀಸಲು ಕ್ಷೇತ್ರಗಳಲ್ಲಿ 109 ಮಾತ್ರ ಗೆಲ್ಲಲು ಸಾಧ್ಯವಾಯಿತು. ಗಡಿನಾಡು ಪ್ರಾಂತ್ಯದಲ್ಲಿ ಅದು ಯಾವುದೇ ಸ್ಥಾನ ಗಳಿಸಲಿಲ್ಲ. ಪಂಜಾಬಿನಲ್ಲಿ 2 ಮತ್ತು ಸಿಂಧ್‌ನಲ್ಲಿ 3 ಸ್ಥಾನಗಳಿಸಿತು. ಲೀಗ್ ಯಾವುದೇ ಸ್ವಾತಂತ್ರ್ಯ ಪೂರ್ವ ಚುನಾವಣೆಯಲ್ಲಿ ಶೇ. 6ಕ್ಕಿಂತ ಹೆಚ್ಚಿನ ಮತ ಗಳಿಸಲಿಲ್ಲ ಎಂದು ಇಲ್ಲಿ ಗಮನಿಸಬಹುದು.

ಹಿಂದೂ ಮಹಾಸಭಾದ ಬೆಂಬಲ ಮತಗಳಿಕೆಯ ದೃಷ್ಟಿಯಿಂದ ನಗಣ್ಯವಾಗಿತ್ತು. ಹಿಂದೂ ಮಹಾಸಭಾ ಮತ್ತು ಆರೆಸ್ಸೆಸ್‌ಗಳ ಒಟ್ಟು ಪ್ರಭಾವ ಸಹ ಮಹಾರಾಷ್ಟ್ರ, ಪಂಜಾಬ, ಉತ್ತರ ಪ್ರದೇಶದ ಕೆಲವು ಪ್ರದೇಶಗಳಿಗೆ ಸೀಮಿತವಾಗಿತ್ತು. ಆದರೆ


1931 ರ ಉಪ್ಪಿನ ಸತ್ಯಾಗ್ರಹದ ಚಳುವಳಿ

ಕೋಮುಗಲಭೆಗಳನ್ನು ಸೃಷ್ಟಿಸುವುದರಲ್ಲಿ ಈ ಎರಡೂ ಸಂಘಟನೆಗಳದ್ದು ಎತ್ತಿದ ಕೈ. ಕೆಲವು ಹಿಂದೂ ಮಹಾಸಭಾ ಮತ್ತು ಆರೆಸ್ಸೆಸ್ ಕಾರ್ಯಕರ್ತರು ಕಾಂಗ್ರೆಸ್‌ನಲ್ಲೂ ಕೆಲಸ ಮಾಡುತ್ತಿದ್ದರು. ಕೆಲವು ಕಾಂಗ್ರೆಸಿಗರು ಹಿಂದೂ ಮಹಾಸಭಾದ ಸೈದ್ಧಾಂತಿಕ ಪ್ರಭಾವಕ್ಕೆ ಒಳಗಾಗಿದ್ದೂ ಉಂಟು. ಆ ಮೇಲೆ ಭಾರತೀಯ ಜನಸಂಘದ ಸ್ಥಾಪಕರಲ್ಲಿ ಒಬ್ಬರಾದ ಡಾ. ಶ್ಯಾಮಪ್ರಸಾದ್ ಮುಖರ್ಜಿ ಇಂತಹವರಲ್ಲಿ ಒಬ್ಬರು. ಕಾಂಗ್ರೆಸಿನ ಒಳಗೆ ಸಹ (ಹಿಂದೂ–ಮುಸ್ಲಿಂ ಎರಡೂ) ಕೋಮುವಾದಿಗಳು ಸಾಕಷ್ಟು ಸಂಖ್ಯೆಯಲ್ಲಿ ಇದ್ದರು.

'ಎರಡು–ದೇಶಗಳ ತತ್ವ'ದ ಕೀರ್ತಿಯ 'ವೀರ' ಸಾವರ್ಕರ್

ಕಾಂಗ್ರೆಸ್ ಮತ್ತು ಕಮ್ಯುನಿಸ್ಟ್ ಪಕ್ಷಗಳು ಎಲ್ಲಾ ಜಾತಿ, ಮತ ಮೀರಿ ನಿಂತ ಜಾತ್ಯತೀತ ರಾಷ್ಟ್ರೀಯತೆಯ ಕಣ್ಣೋಟವನ್ನು ಜನತೆಯ ಮುಂದಿಟ್ಟವು. ಬ್ರಿಟಿಷ್ ವಸಾಹತುಶಾಹಿ ಅಧಿಕಾರ ಕೊನೆಗೊಳಿಸಿ ಜಾತ್ಯತೀತ ರಾಷ್ಟ್ರೀಯತೆಯ ಆಧಾರದ ಮೇಲೆ ಹೊಸ ಭಾರತ ಕಟ್ಟುವ ಕಣ್ಣೋಟ ಅದಾಗಿತ್ತು. ಅದು ಸ್ವಾತಂತ್ರ್ಯ ಹೋರಾಟದ ಪ್ರಾಯೋಗಿಕ ಆವಶ್ಯಕತೆಯೂ ಆಗಿತ್ತು. ಇದಕ್ಕೆ ದೊಡ್ಡ ಪ್ರಮಾಣದ ಜನಬೆಂಬಲ ಇತ್ತು. ಹಿಂದೂ ಮಹಾಸಭಾ, ಆರೆಸ್ಸೆಸ್, ಮುಸ್ಲಿಂ ಲೀಗ್ ಧರ್ಮದ ಆಧಾರದ ಮೇಲೆ ರಾಷ್ಟ್ರೀಯತೆಯ ಕಣ್ಣೋಟವನ್ನು ಜನತೆಯ ಮುಂದಿಟ್ಟಿತು. ಧಾರ್ಮಿಕ ಅಲ್ಪಸಂಖ್ಯಾತರು – ಮುಸ್ಲಿಮರು (ಶೇ.25), ಸಿಖ್ಖರು ಇತ್ಯಾದಿ – ಗಮನಾರ್ಹ ಸಂಖ್ಯೆಯಲ್ಲಿ ಇದ್ದ ದೇಶದಲ್ಲಿ 'ಹಿಂದೂ ರಾಷ್ಟ' ಅಂಗೀಕಾರಾರ್ಹವಾಗುವ ಸಾಧ್ಯತೆ ಇರಲಿಲ್ಲ. ಕೆಲವು ಪ್ರಾಂತ್ಯಗಳಲ್ಲಿ ಮಾತ್ರ ಬಹುಸಂಖ್ಯಾತರಾಗಿದ್ದದ್ದು ಬಿಟ್ಟರೆ ಹಲವು ಪ್ರಾಂತ್ಯಗಳಲ್ಲಿ ಚದುರಿ ಹೋಗಿದ್ದ ಆಗಿನ ಇಂಡಿಯಾದಲ್ಲಿ ತಮ್ಮ ಬೇಳೆ ಬೇಯಬೇಕಾದರೆ ಪ್ರತ್ಯೇಕತೆಯ ಒತ್ತಾಯ ತರುವ ಅನಿವಾರ್ಯತೆ ಮುಸ್ಲಿಂ ಕೋಮುವಾದಿಗಳಿಗೆ ಸಹ ಇತ್ತು. ಇಲ್ಲದಿದ್ದರೆ ಈ ಎರಡೂ ಶಕ್ತಿಗಳು ದೇಶದ ರಾಜಕೀಯದಲ್ಲಿ ಅಪ್ರಸ್ತುತವಾಗಿ ಬಿಡುತ್ತಿದ್ದವು.



ಗಾಂಧೀಜಿ ಹತ್ಯೆ ಪ್ರಕರಣದ ಆರೋಪಿಗಳಲ್ಲಿ .ವಿ. ಡಿ. ಸಾವರ್ಕರ್

ಆದರೆ ಕೊನೆಗೆ ದೇಶವಿಭಜನೆಗೆ ಕಾರಣವಾದ 'ಎರಡು–ದೇಶಗಳ ತತ್ವ' ವನ್ನು ಮೊದಲ ಬಾರಿಗೆ ಪ್ರತಿಪಾದಿಸಿದ್ದು ಸಾಮಾನ್ಯವಾಗಿ ಅಂದುಕೊಂಡಂತೆ ಜಿನ್ನಾ ಅಲ್ಲ. ಆ 'ಕೀರ್ತಿ' ವೀರ ಸಾವರ್ಕರ್'ಗೆ ಸಲ್ಲಬೇಕು. ಹಿಂದೂ ಮಹಾಸಭಾದ ನಾಯಕ ಸಾವರ್ಕರ್ 'ಎರಡು–ದೇಶಗಳ ತತ್ವ' ಮತ್ತು ಹಿಂದೂ ಮೂಲಭೂತವಾದಿ ಕೋಮುವಾದಿ–ಫ್ಯಾಸಿಸ್ಟ್ ಪರಿಕಲ್ಪನೆ 'ಹಿಂದುತ್ವ'ವನ್ನು ಮೊದಲ ಬಾರಿಗೆ ಪ್ರತಿಪಾದಿಸಿದರು. ಜಿನ್ನಾ ಮತ್ತು ಮುಸ್ಲಿಂ ಲೀಗ್ ಅದನ್ನು ಪ್ರತಿಪಾದಿಸುವ ಪೂರಾ ಮೂರು ವರ್ಷಗಳ ಮೊದಲು. 1937 ರ ಹಿಂದೂ ಮಹಾಸಭಾದ ಅಧ್ಯಕ್ಷೀಯ ಭಾಷಣ ಮಾಡುತ್ತಾ " ಇಂಡಿಯಾ ಇಂದು ಒಂದು ಅಖಂಡ ಮತ್ತು ಸಮರೂಪದ (homogeneous) ದೇಶ ಆಗಿದೆ ಎಂದುಕೊಳ್ಳಬಾರದು. ಇಲ್ಲಿ ಎರಡು ದೇಶಗಳಿವೆ – ಮುಖ್ಯವಾಗಿ ಎರಡು – ಹಿಂದೂ ಮತ್ತು ಮುಸ್ಲಿಂ" ಅವರ ಪ್ರಕಾರ ಧರ್ಮ ರಾಷ್ಟ್ರೀಯ ಅಸ್ಮಿತೆಯ ಪ್ರಮುಖ ಅಂಶ. ಆದ್ದರಿಂದ ಹಿಂದೂಗಳು ಮತ್ತು ಮುಸ್ಲಿಮರು ಒಂದೇ ದೇಶದಲ್ಲಿ ಇರಲು ಸಾಧ್ಯವಿಲ್ಲ. ಆದರೆ ಇಂಗ್ಲೆಂಡಿಗೆ ಉನ್ನತ ವ್ಯಾಸಂಗಕ್ಕೆ ತೆರಳಿ ಬ್ರಿಟಿಷ್–ವಿರೋಧಿ ಕ್ರಾಂತಿಕಾರಿ ಚಟುವಟಿಕೆಯಲ್ಲಿ ತೊಡಗಿದ್ದ ಅವರು, 1857 ರ ಪ್ರಥಮ ಸ್ವಾತಂತ್ರ್ಯ ಹೋರಾಟದ ಬಗ್ಗೆ ಹಿಂದೆ ಬರೆದ ಪುಸ್ತಕದಲ್ಲಿ ಹಿಂದೂ–ಮುಸ್ಲಿಂ ಐಕ್ಯತೆಯನ್ನು ಪ್ರಬಲವಾಗಿ ಮುಂದಿಟ್ಟಿದ್ದರು. ಬ್ರಿಟಿಷ್ ಅಧಿಕಾರಿಯ ಕೊಲೆ ಪಿತೂರಿ ಆಪಾದನೆ ಒಂದರಲ್ಲಿ ಬಂಧಿಸಲ್ಪಟ್ಟು, ಅವರಿಗೆ ಅಂಡಮಾನ್‌ನಲ್ಲಿ ಜೀವಾವಧಿ ಕರಿನೀರಿನ ಶಿಕ್ಷೆ ಆಯಿತು.

ಆದರೆ ಅಂಡಮಾನ್‌ನಲ್ಲಿ ಕಠಿಣ ಶ್ರಮ ಮತ್ತು ಚಿತ್ರಹಿಂಸೆ ತಾಳಲಾರದ ಸಾವರ್ಕರ್ ಅವಮಾನಕಾರಿ ಶರತ್ತುಗಳನ್ನು ಒಪ್ಪಿಕೊಂಡು 1924 ರಲ್ಲಿ ಬಿಡುಗಡೆಯಾದರು. ಸರ್ಕಾರದ ಅನುಮತಿ ಇಲ್ಲದೆ ರತ್ನಗಿರಿ ಜಿಲ್ಲೆ ಬಿಟ್ಟು ಹೋಗದಿರುವುದು, ಯಾವುದೇ ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸದೆ ಇರುವುದು ಪ್ರಮುಖ ಶರತ್ತುಗಳಾಗಿದ್ದವು. ಇದು ಅವರ ಹಿಂದಿನ ಚಟುವಟಿಕೆಗಳಿಂದ ಬಂದ 'ವೀರ ಸಾವರ್ಕರ್' ಬಿರುದಿಗಾಗಲಿ ಅಥವಾ ಪ್ರಮುಖ 'ದೇಶಭಕ್ತ ನಾಯಕ' ಎಂಬ



1947ರಲ್ಲಿ ಪಂಜಾಬಿನಲ್ಲಿ ಕೋಮುಗಲಭೆಯ ಚಿತ್ರ

ಹೆಸರಿಗಾಗಲಿ ಘೋಷಣಪ್ರಾಯ ಆಗಿರಲಿಲ್ಲ. 1937 ರಲ್ಲಿ ಕಾಂಗ್ರೆಸ್ ಸರ್ಕಾರ ಬಂದ ಮೇಲಷ್ಟೇ ಅವರು ಮುಕ್ತವಾಗಿ ರಾಜಕೀಯ ಚಟುವಟಿಕೆಯಲ್ಲಿ ತೊಡಗಿದರು. ಆದರೆ 1923 ರಿಂದಲೇ ಅವರು ರಾಜಕೀಯವಾಗಿ ತಾತ್ವಿಕವಾಗಿ ಹಿಂದೂ ಕೋಮುವಾದಕ್ಕೆ ಒಲಿದು ಹಿಂದೂ ಮಹಾಸಭಾದ ಚಟುವಟಿಕೆಗಳ ನಾಯಕತ್ವ ವಹಿಸಿದರು. 1937 ರ ನಂತರ ಹಿಂದೂ ಮಹಾಸಭಾದ ಅಧ್ಯಕ್ಷರಾದರು. ಸ್ವಾತಂತ್ರ್ಯ ಪೂರ್ವದಲ್ಲಿ ಹಿಂದೂ ಮಹಾಸಭಾ ಹಿಂದೂ ಕೋಮುವಾದಿ ರಾಜಕೀಯದ ಪ್ರಮುಖ ಅಭಿವ್ಯಕ್ತಿ ಆಗಿದ್ದು ಸಾವರ್ಕರ್ ಅದರ ಪ್ರಮುಖ ವಕ್ತಾರರಾಗಿದ್ದರು. ಆರೆಸ್ಸೆಸ್‌ಗೂ ಅವರು ಸೈದ್ಧಾಂತಿಕ ಗುರು ಆಗಿದ್ದರು. ತಮ್ಮ ಬಿಡುಗಡೆಗೆ ಬ್ರಿಟಿಷರಿಗೆ ಕೊಟ್ಟ ಮಾತಿಗೆ ಅವರು ತಪ್ಪಲಿಲ್ಲ. ಅವರ ರಾಜಕೀಯ ಚಟುವಟಿಕೆಗಳು ಯಾವತ್ತೂ ಬ್ರಿಟಿಷ್ ವಿರೋಧಿಯಾಗಿರಲಿಲ್ಲ. ಅವರು ಕಾಂಗ್ರೆಸ್ ಹೂಡಿದ ದೇಶವ್ಯಾಪಿ ಚಳುವಳಿಯಲ್ಲಿ ಭಾಗವಹಿಸಲಿಲ್ಲ ಮಾತ್ರವಲ್ಲ, ಅದನ್ನು ಸಕ್ರಿಯವಾಗಿ ವಿರೋಧಿಸಿದರು. ಮುಸ್ಲಿಮರು ದೇಶದ ಮೊದಲ ವೈರಿಗಳು. ಮುಸ್ಲಿಮರ ದಾಳಿಯ ಮೊದಲು ಇದ್ದ 'ಅಖಂಡ ಹಿಂದೂ ರಾಷ್ಟ್ರ ಸ್ಥಾಪನೆ' ತಮ್ಮ ಗುರಿ ಎಂದರು.

ಮುಸ್ಲಿಂ ಲೀಗ್ 'ಎರಡು ದೇಶಗಳ ತತ್ವ'ದತ್ತ

ಮೊದಮೊದಲು ಬ್ರಿಟಿಷರಿಂದ ಪ್ರತ್ಯೇಕ ಮತಕ್ಷೇತ್ರ, ನೌಕರಿಯಲ್ಲಿ ಮೀಸಲಾತಿ, ಪ್ರಾಂತ್ಯದಲ್ಲಿ ಅಧಿಕಾರ ಹಿಡಿಯುವ ಉದ್ದೇಶಕ್ಕೆ ಸೀಮಿತವಾಗಿದ್ದ ಮುಸ್ಲಿಂ ಲೀಗ್, 1937 ರ ಚುನಾವಣೆಯ ಸೋಲಿನ ನಂತರ ಕುರುಡು ಕಾಂಗ್ರೆಸ್ ವಿರೋಧದಿಂದ ಮತ್ತು ತಾನು ಮುಸ್ಲಿಮರ ಏಕೈಕ ಪ್ರತಿನಿಧಿ ಎಂದು ತೋರಿಸಲು ಏನೂ ಮಾಡಲು ತಯಾರಾಯಿತು. ಮುಸ್ಲಿಂ ನಾಯಕರಿದ್ದ ಆದರೆ ಸರ್ವಮತಗಳ ಬೆಂಬಲಗಳಿಸಿದ್ದ ಪಕ್ಷಗಳನ್ನು ಅಥವಾ ನಾಯಕರನ್ನು (ಉದಾ: ಪಂಜಾಬಿನ ಹಯಾತ್ ಖಾನ್ ನಾಯಕತ್ವದ ಯೂನಿಯನಿಸ್ಟ್ ಪಕ್ಷ, ಬಂಗಾಳದ ಫಜ್ಲುಲ್ ಹಕ್ ಅವರ ಕೃಷಿಕ್ ಪ್ರಜಾಪಕ್ಷ) ಮುಸ್ಲಿಂ ಲೀಗ್ ಒಗ್ಗೂಡಿಸಿತು. 1937 ಚುನಾವಣೆಯ ಮೊದಲು ಕಾಂಗ್ರೆಸ್ ಜತೆ ಜಂಟಿಯಾಗಿ ಚುನಾವಣೆ ಸ್ಪರ್ಧಿಸುವ ಮತ್ತು ಸರ್ಕಾರ ನಡೆಸುವ ಮುಸ್ಲಿಂ ಲೀಗ್ ಪ್ರಸ್ತಾವವನ್ನು ಕಾಂಗ್ರೆಸ್ ತಿರಸ್ಕರಿಸಿತ್ತು. ಚುನಾವಣೆ ನಂತರವೂ ಕೆಲವು ಪ್ರಾಂತ್ಯಗಳಲ್ಲಿ ಕಾಂಗ್ರೆಸ್–ಮುಸ್ಲಿಂ ಲೀಗ್ ಸಂಯುಕ್ತ ಸರ್ಕಾರದ ಪ್ರಸ್ತಾವವನ್ನು ಪುನಃ ಕಾಂಗ್ರೆಸ್ ತಿರಸ್ಕರಿಸಿತ್ತು. ಇದರಿಂದ ಕಾಂಗ್ರೆಸ್–ಮುಸ್ಲಿಂ ಲೀಗ್ ವಿರಸ ತೀವ್ರವಾಗಿತ್ತು. ಎರಡನೇ ಮಹಾಯುದ್ಧದಲ್ಲಿ ಭಾರತದ ಪಾಲ್ಗೊಳ್ಳುವಿಕೆಯನ್ನು ವಿರೋಧಿಸಿ 1939 ರಲ್ಲಿ ಕಾಂಗ್ರೆಸ್ ಸರ್ಕಾರಗಳು ರಾಜೀನಾಮೆ ಕೊಟ್ಟಾಗ, ಮುಸ್ಲಿಂ ಲೀಗ್ ಅದನ್ನು 'ವಿಮೋಚನಾ ದಿನ'ವಾಗಿ ಆಚರಿಸುವ ವರೆಗೆ ಇದು ಹೋಯಿತು. ಯುದ್ಧಕ್ಕೆ ಭಾರತೀಯರ ಬೆಂಬಲ ಗಳಿಸಲು ಉತ್ಸುಕರಾಗಿದ್ದ ಬ್ರಿಟಿಷರಿಂದ ಅತ್ಯಧಿಕ ಸವಲತ್ತು ಪಡೆಯಲು ಇದು ಒಳ್ಳೆಯ ಸಮಯ ಎಂದು ಭಾವಿಸಿದ ಮುಸ್ಲಿಂ ಲೀಗ್ 1940 ರ ಲಾಹೋರ್ ಅಧಿವೇಶನದಲ್ಲಿ ಪ್ರತ್ಯೇಕ ಮುಸ್ಲಿಂ ದೇಶದ ಬೇಡಿಕೆ ಇಟ್ಟಿತುಡ ಕ್ವಿಟ್ ಇಂಡಿಯಾ ಚಳುವಳಿ, ಎರಡನೇ ಮುಹಾಯುದ್ಧದ ಬಿಸಿಯಲ್ಲಿ ಅದು ಅಷ್ಟು ಪ್ರಾಮುಖ್ಯತೆ ಪಡೆಯಲಿಲ್ಲ. ಆದರೆ ಹಿಂದೂ ಮಹಾಸಭಾ, ಆರೆಸ್ಸೆಸ್, ಮುಸ್ಲಿಂ ಲೀಗ್ ಎರಡನೇ ಮುಹಾಯುದ್ಧದ ಅವಧಿಯಲ್ಲಿ ನಡೆದ ಚಳುವಳಿಗಳಲ್ಲಿ ಭಾಗವಹಿಸಲಿಲ್ಲ. ಮಾತ್ರವಲ್ಲ ಬ್ರಿಟಿಷರ ಬೆಂಬಲಕ್ಕೆ ನಿಂತವು. ಹಿಂದೂ ಮಹಾಸಭಾ ಅಧಿಕಾರದ ಸ್ಥಾನಗಳಲ್ಲಿದ್ದ ತನ್ನ ಸದಸ್ಯರು ಹಿತೈಷಿಗಳು ತಮ್ಮ ಸ್ಥಾನಗಳನ್ನು ಬಿಟ್ಟುಕೊಡಬಾರದು ಎಂದು ನಿರ್ದೇಶನ ನೀಡಿತು. ಆಗ ಬಂಗಾಳದ ಮುಸ್ಲಿಂ ಲೀಗ್ ಸರ್ಕಾರದಲ್ಲಿ ಆರ್ಥಿಕ ಮಂತ್ರಿಯಾಗಿದ್ದ ಡಾ. ಶ್ಯಾಮಪ್ರಸಾದ್ ಮುಖರ್ಜಿ ಬಂಗಾಳದಲ್ಲಿ ಕ್ವಿಟ್ ಇಂಡಿಯಾ ಚಳುವಳಿ ಹೇಗೆ ತಡೆಗಟ್ಟಬಹುದು ಎಂಬ ಬಗ್ಗೆ ಬ್ರಿಟಿಷ್ ಗವರ್ನರ್‌ಗೆ ಪತ್ರ ಬರೆದರು !

ಎರಡನೇ ಮುಹಾಯುದ್ಧದ ನಂತರ ಸಹ ಬ್ರಿಟಿಷರು ದೇಶದಿಂದ ಕಾಲ್ತೆಗೆಯುವ ಸೂಚನೆಗಳು ಕಾಣದಿದ್ದಾಗ ಮತ್ತು ಯುದ್ಧದಿಂದ ಉಲ್ಬಣವಾಗಿದ್ದ ಜನರ ಸಮಸ್ಯೆಗಳ ಸುತ್ತ ತೀವ್ರ ಜನ ಹೋರಾಟಗಳು ಎದ್ದವು. ಕಾರ್ಮಿಕರ, ರೈತರ ಹೋರಾಟಗಳು ಕಮ್ಯುನಿಸ್ಟ್ ನಾಯಕತ್ವದಲ್ಲಿ ಭುಗಿಲೆದ್ದವು. ನೌಕಾ ಸೈನಿಕರ ದಂಗೆ ಮತ್ತು ಬಂಧಿತ ಅಜಾದ್



ಕ್ವಿಟ್ ಇಂಡಿಯಾ ಚಳುವಳಿ ಹೇಗೆ ತಡೆಗಟ್ಟುವುದು ಎಂದು ಬ್ರಿಟಿಷ್ ಗವರ್ನರ್‌ಗೆ ಪತ್ರ ಬರೆದ ಡಾ. ಶ್ಯಾಮ ಪ್ರಸಾದ್ ಮುಖರ್ಜಿ



1947ರ ದೇಶ ವಿಭಜನೆಯ ಸಂದರ್ಭದಲ್ಲಿ ಜನರ ಪಾಡು

ಹಿಂದ್ ಸೇನೆಯ ಅಧಿಕಾರಿಗಳ ಬಿಡುಗಡೆ ಒತ್ತಾಯಿಸಿದ ಚಳುವಳಿಗೆ ದೊರೆತ ವ್ಯಾಪಕ ಜನ ಬೆಂಬಲದಿಂದ ಬ್ರಿಟಿಷರಿಗೆ ತಾವು ಅಧಿಕಾರವನ್ನು ಭಾರತೀಯರಿಗೆ ಬಿಟ್ಟುಕೊಡುವುದು ಅನಿವಾರ್ಯ ಎಂದು ಮನವರಿಕೆಯಾಯಿತು.

ಕೋಮುವಾದಿಗಳ ಆಂಶಿಕ ಜಯ

ಬ್ರಿಟಿಷರ ನಿರ್ಗಮನದ ನಂತರದ ಭಾರತದ ರಾಜಕೀಯ ಸ್ವರೂಪ, ಸಂವಿಧಾನ ಹೇಗಿರಬೇಕು ಎಂಬ ಬಗ್ಗೆ ಮಾತುಕತೆಗಳ ಹೆಸರಲ್ಲಿ ದೇಶವನ್ನು ಛಿದ್ರಗೊಳಿಸಿ (ರಾಜಕೀಯವಲ್ಲದಿದ್ದರೂ) ತಮ್ಮ ಆರ್ಥಿಕ ಅಧಿಪತ್ಯ ಮುಂದುವರೆಯುವ ಸಾಧ್ಯತೆಗಳನ್ನು ಹುಡುಕತೊಡಗಿದರು. ಭಾರತವನ್ನು (ಹಿಂದೂ, ಮುಸ್ಲಿಂ ಮತ್ತು ಮಾಜಿ ರಾಜರುಗಳ) ಮೂರು – ಸಾಧ್ಯವಿದ್ದರೆ ಹಲವು – ದುರ್ಬಲ ದೇಶಗಳ ದುರ್ಬಲ ಒಕ್ಕೂಟವಾಗಿ ಮಾಡುವುದು ಅವರ ಉದ್ದೇಶವಾಗಿತ್ತು. ಈ ಉದ್ದೇಶ ಆಂಶಿಕವಾಗಿಯಾದರೂ ಈಡೇರುವಂತೆ ಕೋಮುವಾದಿ ಧಾರೆ ನೆರವಾಯಿತು. ಮುಸ್ಲಿಂ ಲೀಗ್ ಆರು ಮುಸ್ಲಿಂ ಬಹುಸಂಖ್ಯಾತ ಪ್ರಾಂತ್ಯಗಳು – ಗಡಿನಾಡು, ಬಲೂಚಿಸ್ತಾನ, ಸಿಂಧ್, ಪಂಜಾಬು, ಬಂಗಾಳ, ಆಸ್ಸಾಂ – ಸೇರಿ ಪಾಕಿಸ್ತಾಥ ನಿರ್ಮಾಣ ಆಗಬೇಕು ಎಂದು ಒತ್ತಾಯಿಸಿತು. ಇದರ ಬೆಂಬಲಕ್ಕೆ ಭಾರೀ ಕೋಮುವಾದಿ ಪ್ರಚಾರ ಹರಿಯ ಬಿಟ್ಟಿತು.

ಈ ಹಿನ್ನೆಲೆಯಲ್ಲಿ 1945 ರಲ್ಲಿ ಚುನಾವಣೆಗಳು ನಡೆದು ಕೋಮುವಾದಿ ಧ್ರುವೀಕರಣಕ್ಕೆ ಇನ್ನಷ್ಟು ಕುಮ್ಮಕ್ಕು ದೊರೆಯಿತು. ಕೇಂದ್ರ ಶಾಸನ ಸಭೆಯ ಸಾಮಾನ್ಯ ಮತಕ್ಷೇತ್ರಗಳಲ್ಲಿ ಕಾಂಗ್ರೆಸ್ ಶೇ. 91 ಮತಗಳಿಸಿತು. ಮುಸ್ಲಿಂ ಮತಕ್ಷೇತ್ರಗಳಲ್ಲಿ ಮುಸ್ಲಿಂ ಲೀಗ್ ಶೇ. 86 ಮತಗಳಿಸಿತು. 102 ಸದಸ್ಯರ ಸಭೆಯಲ್ಲಿ 57 ಸ್ಥಾನಗಳಿಸಿ ಕಾಂಗ್ರೆಸ್ ನಿಚ್ಚಳ ಬಹುಮತ ಪಡೆಯಿತು. ಮುಸ್ಲಿಂ ಲೀಗ್ ಎಲ್ಲಾ 30 ಮುಸ್ಲಿಂ ಸ್ಥಾನಗಳನ್ನು ಗಳಿಸಿತು. ಪ್ರಾಂತ್ಯ ಸಭೆಗಳಲ್ಲಿ 509 ಮುಸ್ಲಿಂ ಕ್ಷೇತ್ರಗಳಲ್ಲಿ 442ನ್ನು ಗೆದ್ದಿತು. ಆದರೂ ಯಾವ ಪ್ರಾಂತ್ಯದಲ್ಲೂ ತಾನಾಗಿ ಸರ್ಕಾರ ರಚಿಸಲು ನಿಚ್ಚಳ ಬಹುಮತ ಪಡೆಯಲಿಲ್ಲ. ಸಿಂಧ್ ಮತ್ತು ಬಂಗಾಳದಲ್ಲಿ ಮಾತ್ರ ಇತರ ಪಕ್ಷಗಳ ಬೆಂಬಲ ಮತ್ತು ಗವರ್ನರ್ ಕುತ್ರಂತ್ರದಿಂದ ಸರ್ಕಾರ ರಚಿಸಿತು. ಗಡಿನಾಡು ಮತ್ತು ಆಸ್ಸಾಂ ಗಳಲ್ಲಿ ಕಾಂಗ್ರೆಸ್ ನಿಚ್ಚಳ ಬಹುಮತ ಪಡೆಯಿತು. ಈ ಚುನಾವಣೆಗಳು ಎಲ್ಲಾ ವಯಸ್ಕ ಮತದಾರರ ಆಧಾರದಲ್ಲಿ ಇರಲಿಲ್ಲ. ಮತದಾರರ ಪ್ರಮಾಣ ಕೇವಲ ಶೇ. 14ರಷ್ಟು ಇತ್ತು ಎಂದು ಇಲ್ಲಿ ಗಮನಿಸಬೇಕು.

ಮುಸ್ಲಿಂ ಲೀಗ್‌ನ ಸಹಕಾರ ಇಲ್ಲದೆ ಬ್ರಿಟಿಷರಿಂದ ಅಧಿಕಾರ ಪಡೆಯುವುದು ಸಾಧ್ಯವಿಲ್ಲ ಎಂದು ಅರಿತ ಗಾಂಧೀಜಿ ಮತ್ತು ಕಾಂಗ್ರೆಸ್ ನಾಯಕತ್ವ ಜಿನ್ನಾ ಸೇರಿದಂತೆ ಮುಸ್ಲಿಂ ಲೀಗ್ ನಾಯಕತ್ವದ ಜತೆ ಹಲವು ಸುತ್ತಿನ ಮಾತುಕತೆಗಳನ್ನು ನಡೆಸಿದರು. ಗಾಂಧೀ–ಜಿನ್ನಾ, ದೇಸಾಯಿ–ಲಿಯಾಖತ್ ಅಲಿ ಖಾನ್ ಮಾತುಕತೆಗಳು ಅದರಲ್ಲಿ ಪ್ರಮುಖವಾದವು. ಬ್ರಿಟಿಷರು ತಮ್ಮ ಉದ್ದೇಶ ಸಾಧನೆಗೆ ಹಲವು ಪ್ರಯತ್ನಗಳನ್ನು ಮಾಡಿದರು. ವೇವೆಲ್ ಯೋಜನೆ, ಸಿಮ್ಲಾ ಸಮ್ಮೇಳನ, ಕ್ಯಾಬಿನೆಟ್ ಆಯೋಗ, ಮೌಂಟ್ ಬ್ಯಾಟನ್ ಯೋಜನೆ – ಅವುಗಳಲ್ಲಿ ಪ್ರಮುಖವಾದವು. ಹಲವು ಪ್ರಸ್ತಾವಗಳು ಬಂದವು. ಯೋಜನೆಗಳ ಬಗ್ಗೆ ದೀರ್ಘ ಚರ್ಚೆಗಳು ನಡೆದವು. ಆದರೆ ಹಲವು ದಶಕಗಳ ರಾಷ್ಟ್ರೀಯ ಐಕ್ಯತೆಯನ್ನು ಭಾರತ ಆ ಸಮಯದಲ್ಲಿ ತೋರಲಿಲ್ಲ. ಚರ್ಚೆಗಳು ರಾಜಕೀಯ ದೂಷಣೆ, ಕೆಸರು ಎರಚಾಟ, ಭೀಷಣ ಕೋಮುದಂಗೆಗಳ ಹಿನ್ನೆಲೆಯಲ್ಲಿ ನಡೆದವು.

ವಿಭಜನೆಗೆ ಮೂಲ ಕಾರಣ ಯಾರು ?

ತಾತ್ಕಾಲಿಕ ಮಂತ್ರಿಮಂಡಳ ರಚನೆಯ ಬಗ್ಗೆ ಮುಸ್ಲಿಂ ಲೀಗ್ ಭಿನ್ನಾಭಿಪ್ರಾಯಕ್ಕೆ ಪ್ರತಿಕ್ರಿಯೆ ಆಗಿ, 1946 ಅಗಸ್ಟ್ 16 ರಂದು 'ನೇರ ಕಾರ್ಯಾಚರಣೆ ದಿನ'ವಾಗಿ ಆಚರಿಸಿತು. ಹಜ್ಜೆನ ಕಡೆ ಅದು



ಮೌಂಟ್ ಬ್ಯಾಟನ್

ಶಾಂತಿಯುತವಾಗಿ ನಡೆದರೂ, ಮುಸ್ಲಿಂ ಲೀಗ್ ಅಧಿಕಾರದಲ್ಲಿ ಇದ್ದ ಬಂಗಾಳದಲ್ಲಿ ಅದರಲ್ಲೂ ಕಲ್ಕತ್ತಾದಲ್ಲಿ ಭೀಕರ ಹತ್ಯಾಕಾಂಡ ನಡೆಯಿತು. ಕ್ರಮೇಣ ಅದು ಉತ್ತರ ಪ್ರದೇಶ, ಬಿಹಾರ, ಪಂಜಾಬಿಗೆ ಹರಡಿ ಇಡೀ ದೇಶದಲ್ಲಿ ಪ್ರಕ್ಷುಬ್ಧ ಪರಿಸ್ಥಿತಿ ತಂದಿತು. ಆರು ಲಕ್ಷಕ್ಕೂ ಹೆಚ್ಚು ಜನ ಸತ್ತರು. ಒಂದುವರೆ ಕೋಟಿ ಗೂ ಹೆಚ್ಚು ಜನ ಮನೆ ಕಳೆದುಕೊಂಡರು. ಇದರಲ್ಲಿ ಎಲ್ಲಾ ಬಣ್ಣದ ಕೋಮುವಾದಿಗಳ ಪಾತ್ರ ಇತ್ತು. ಮುಸ್ಲಿಂ ಲೀಗ್ ಜತೆಗೆ ಆರೆಸ್ಸೆಸ್, ಹಿಂದೂ ಮಹಾಸಭಾ ಇದರಲ್ಲಿ ಪ್ರಮುಖ ಪಾತ್ರ ವಹಿಸಿದವು.



ದೇಶ ವಿಭಜನೆ ನಿರ್ಣಯಕ್ಕೆ ಬೆಂಬಲ


ಈ ಭೀಕರ ಹತ್ಯಾಕಾಂಡ ವಿಭಜನೆ ಇಲ್ಲದೆ ಯಾವುದೇ ಇತರ ಪರಿಹಾರ ಇಲ್ಲ ಎಂಬ ಭಾವನೆಯನ್ನು ಅತ್ಯಂತ ಜಾತ್ಯತೀತ ದೇಶಭಕ್ತರಲ್ಲೂ ಮೂಡಿಸಿತು. ಹಲವು ಪರಿಹಾರಗಳು ಇನ್ನೂ ಸಾಧ್ಯವಿದ್ದವು. ಹಲವು ಇತರ ಸಾಧ್ಯತೆಗಳು ಇದ್ದವು. ಆದರೂ ಈ ಪರಿಸ್ಥಿತಿ ದೇಶವನ್ನು ವಿಭಜನೆ ಮಾಡಿ ಸ್ವಾತಂತ್ರ್ಯ ಕೊಡುವ ಮೌಂಟ್ ಬ್ಯಾಟನ್ ಯೋಜನೆಗೆ ಎಲ್ಲರೂ ಒಪ್ಪಿಕೊಳ್ಳುವಂತೆ ಮಾಡಿದವು. ಕೋಮುವಾದಿ ಧಾರೆಗೆ ಆಂಶಿಕ ವಿಜಯ ದೊರೆಯಿತು.

ದೇಶದ ವಿಭಜನೆಗೆ ಮೂಲ ಕಾರಣ ಎಂದು ಹಲವು ವ್ಯಕ್ತಿಗಳ, ಪಕ್ಷಗಳ, ಘಟನೆಗಳ ಮೇಲೆ ಆಪಾದನೆ ಹಾಕಲಾಗಿದೆ. ಜಿನ್ನಾ, ಗಾಂಧೀಜಿ, ನೆಹರೂ, ಪಟೇಲ್, ಮುಸ್ಲಿಂ ಲೀಗ್ – ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ವಿಭಜನೆಗೆ ಕಾರಣವಾದ ಪ್ರಕ್ರಿಯೆ ಸಂಕೀರ್ಣವಾಗಿತ್ತು. ವಿಭಜನೆಗೆ ಕೋಮುವಾದಿ ರಾಜಕೀಯ ಧಾರೆ ಒಂದು ಪ್ರಮುಖ ಕಾರಣ ಎಂಬುದು ನಿರ್ವಿವಾದಿತ. ಆದರೆ ಮೂಲ ಕಾರಣ ಭಾರತದ ಆಳುವ ವರ್ಗಗಳ ಎರಡು ಪ್ರಮುಖ ವಿಭಾಗಗಳ – ಹಿಂದೂ ಮತ್ತು ಮುಸ್ಲಿಂ ಬಂಡವಾಳಶಾಹಿ ಭೂಮಾಲಕರ – ನಡುವೆ ಅಧಿಕಾರಕ್ಕೆ ನಡೆದ ತಿಕ್ಕಾಟ. ಬೇಗನೇ ಸಾಧ್ಯವಾದಷ್ಟು ಹೆಚ್ಚಿನ ಅಧಿಕಾರ ಪಡೆಯಲು ಬ್ರಿಟಿಷರ ಜತೆ ಚೌಕಾಶಿಯ ಅವರ ತರಾತುರಿ ಇತರ ಸಾಧ್ಯತೆಗಳನ್ನು ಇಲ್ಲವಾಗಿಸಿತು. ಮುಸ್ಲಿಂ ಲೀಗ್– ಮುಸ್ಲಿಂ ಬಂಡವಾಳಶಾಹಿ, ಭೂಮಾಲಕರ ವರ್ಗದ ಪ್ರತಿನಿಧಿ ಆಗಿತ್ತು. ಎರಡನೇ ಮಹಾಯುದ್ಧದಲ್ಲಿ ಬ್ರಿಟಿಷರ ಜತೆ ಸಹಕಾರದಿಂದ ಅದು ಸಾಕಷ್ಟು ಪ್ರಬಲವಾಗಿತ್ತು. ಅದಕ್ಕೆ ಅವಿಭಜಿತ ಭಾರತದಲ್ಲಿ ಪ್ರಬಲವಾಗಿರುವ ಹಿಂದೂ ಬಂಡವಾಳಶಾಹಿ ಭೂಮಾಲಕರ ವಿಭಾಗ ತನ್ನ ಬೆಳವಣಿಗೆ ಅಡ್ಡಿಯಾಗಬಹುದೆಂಬ ಆತಂಕ ಇತ್ತು. ಕಾಂಗ್ರೆಸ್ ಎಲ್ಲಾ ಬಂಡವಾಳಶಾಹಿ ಭೂಮಾಲಕರ ವರ್ಗದ ಪ್ರತಿನಿಧಿಯಾಗಿದ್ದರೂ ಹಿಂದೂ ಬಂಡವಾಳಶಾಹಿ ಭೂಮಾಲಕರ ವಿಭಾಗ ಅದರಲ್ಲಿ ಪ್ರಬಲವಾಗಿತ್ತು. ಅದರ ಹಿತಾಸಕ್ತಿ ಅವಿಭಜಿತ ಭಾರತದ ಮೇಲೆ ನಿಯಂತ್ರಣ ಸಾಧಿಸಬೇಕೆಂಬುದರಲ್ಲಿ ಇತ್ತು. ಆದರೆ ಅದನ್ನು ಸಾಧಿಸಲು ಮುಸ್ಲಿಂ ಬಂಡವಾಳಶಾಹಿ ಭೂಮಾಲಕರ ವಿಭಾಗದ ಜತೆ ಸಹಕಾರ–ಸಮಜಾಯಿಷಿ–ಹಂಚಿಕೆಗೆ ಅದಕ್ಕೆ ತಾಳ್ಮೆ ಇರಲಿಲ್ಲ. ಬದಲಾಗಿ ಬ್ರಿಟಿಷರ ಜತೆ ಚೌಕಾಶಿಯ ತರಾತುರಿಯಲ್ಲಿ ಇತ್ತು.

ಬಂಡವಾಳಶಾಹಿ ಭೂಮಾಲಕರ ವರ್ಗಗಳು ಅಧಿಕಾರ ಪಡೆಯಲು ಮಾತ್ರವಲ್ಲ, ಅದನ್ನು ಉಳಿಸಿ–ಬೆಳೆಸಲು ಸಹ ಕೋಮುವಾದಿ ತತ್ವದ ಬಳಕೆಗೆ ಹಿಂಜರಿಯುವುದಿಲ್ಲ. ಭಾರತ–ಪಾಕಿಸ್ತಾನದ ಆಳುವ ವರ್ಗಗಳು ಸ್ವಾತಂತ್ರ್ಯ ನಂತರ ಇತ್ತೀಚಿನ ವರೆಗೂ ಕೋಮುವಾದವನ್ನು ಮುಲಾಜಿಲ್ಲದೆ ಬಳಸಿದ ಉದಾಹರಣೆ ನಮ್ಮ ಮುಂದಿದೆ. ಧರ್ಮ ಪಾಕಿಸ್ತಾನದ ವಿಭಜನೆಯನ್ನು ತಡೆಯಲು ವಿಫಲವಾಯಿತು. ಭಾರತದಲ್ಲೂ ಧರ್ಮ ದೇಶಕ್ಕೆ ಆಧಾರವಾಗಬಲ್ಲುದು ಎಂಬ ಭಾವನೆಗೆ ತೀವ್ರ ಹಿನ್ನಡೆಯಾಗಿದೆ. ಈ ಅರ್ಥದಲ್ಲಿ ಸ್ವಾತಂತ್ರ್ಯ ಪೂರ್ವದ ಕೋಮುವಾದಿ ಧಾರೆ ಪೂರ್ಣವಾಗಿ ಸೋತಿದೆ. ಆದರೆ ಸತ್ತಿಲ್ಲ.

○


ಸ್ವಾತಂತ್ರ್ಯ ಹೋರಾಟದಲ್ಲಿ ಕಮ್ಯುನಿಸ್ಟರು



– ಜ್ಯೋತಿ ಬಸು

ಇದು ಹಿರಿಯ ಕಮ್ಯುನಿಸ್ಟ ನೇತಾರ ಜ್ಯೋತಿಬಸು ಅವರು 1997ರಲ್ಲಿ ಬರೆದ ಲೇಖನದ ಆಯ್ದ ಭಾಗ. ನಮ್ಮ ಸ್ವಾತಂತ್ರ್ಯ ಚಳುವಳಿಗೆ ನಾಯಕತ್ವ ನೀಡಿದ್ದೇನೋ ಕಾಂಗ್ರೆಸ್ ಪಕ್ಷವೇ. ಆದರೆ ಸ್ವಾತಂತ್ರ್ಯ ಚಳುವಳಿ ಎಂದರೆ ಅಷ್ಟು ಮಾತ್ರವೇ?

1917ರ ಮಹಾನ್ ಅಕ್ಟೋಬರ್ ಕ್ರಾಂತಿಯ ಪ್ರೇರಣೆಯೊಂದಿಗೆ ಭಾರತದಲ್ಲಿ ಬೆಳೆದು ಬಂದ ಕಮ್ಯುನಿಸ್ಟ್ ಪಕ್ಷ, ಕಮ್ಯುನಿಸ್ಟ್ ಚಳುವಳಿ ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ವಹಿಸಿದ ಪಾತ್ರ ಅನನ್ಯವಾದುದು. ಈ ಕುರಿತು ಓದಿ. ಸಚಿತ್ರ ದಾಖಲೆಗಳೊಂದಿಗೆ




ಎಡ ರಾಷ್ಟ್ರೀಯವಾದದ ಬೆಳವಣಿಗೆ

ಭಾರತದ ಸ್ವಾತಂತ್ರ್ಯ ಹೋರಾಟದ ಸ್ವರೂಪ ಕೇವಲ ಗಾಂಧಿವಾದಿ ರಾಷ್ಟ್ರೀಯವಾದ ಎನ್ನುವುದು ತಪ್ಪಾಗುತ್ತದೆ. ಕಾಂಗ್ರೆಸ್ ಸಂಸ್ಥೆಯ ವ್ಯಾಪ್ತಿಯ ಹೊರಗೆ ಪ್ರತಿಭಟನಾ ರಾಜಕೀಯ ಉದ್ದಕ್ಕೂ ಹರಡಿತ್ತು. ಕ್ರಾಂತಿಕಾರೀ ರಾಷ್ಟ್ರೀಯವಾದ, ಕಾರ್ಮಿಕ ವರ್ಗ ಮತ್ತು ರೈತಾಪಿ ಜನಗಳ ಪ್ರತಿಭಟನೆಗಳ ಭುಗಿಲು, ಬುಡಕಟ್ಟು ಬಂಡಾಯಗಳು, ವಿದ್ಯಾರ್ಥಿ-ಯುವಜನ ಆಂದೋಲನಗಳು ಇವೆಲ್ಲಾ ಸತತವಾಗಿ ಸ್ವಾತಂತ್ರ್ಯ ಹೋರಾಟದ ಪ್ರಮುಖ ಧಾರೆಯಾದ ಕಾಂಗ್ರೆಸ್ ರಾಷ್ಟ್ರೀಯವಾದವನ್ನು ಇನ್ನಷ್ಟು ಬಲಪಡಿಸಿದವು. ಅದು ಉಳಿದು ಬೆಳೆಯಲು ನೆರವಾದವು. ಭಾರತ ಕಮ್ಯುನಿಸ್ಟ್ ಪಕ್ಷ ಈ ಪ್ರತಿಭಟನಾ ರಾಜಕೀಯವನ್ನು ಜೀವಂತವಾಗಿಡುವಲ್ಲಿ, ರಾಷ್ಟ್ರೀಯವಾದದ ಪ್ರಮುಖ ಧಾರೆಯೊಂದಿಗೆ ಅದನ್ನು ಬೆಸೆಯುವಲ್ಲಿ ಒಂದು ಮಹತ್ವದ ಪಾತ್ರವಹಿಸಿತು.

ಉಗ್ರಗಾಮಿ ರಾಜಕೀಯದ ಹತಾಶೆ, ಖಿಲಾಫತ್ ಆಂದೋಳನದ ವಿಫಲತೆ ಮತ್ತು ಕಾರ್ಮಿಕ ವರ್ಗ ಮತ್ತು ರೈತಾಪಿ ಜನಗಳಲ್ಲಿ ಹೆಚ್ಚುತ್ತಿದ್ದ ಅಸಂತೃಪ್ತಿಯ ಹಿನ್ನೆಲೆಯಲ್ಲಿ ಒಂದು ಹೊಸ ಸಿದ್ಧಾಂತ ಹಾಗೂ ಹೊಸ ಮುಖಂಡತ್ವದ ಹುಡುಕಾಟ ನಡೆಯುತ್ತಿದ್ದಂತೆ ಒಂದು ಮಹತ್ವಪೂರ್ಣ ಕಾಲಘಟ್ಟದಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷ ರಚನೆಗೊಂಡಿತು. ಅಕ್ಟೋಬರ್ 1920ರಲ್ಲಿ ತಾಷ್ಕೆಂಟ್‌ನಲ್ಲಿ ಮನವೇಂದ್ರನಾಥ್ ರಾಯ್, ಅಬನಿ ಮುಖರ್ಜಿ ಹಾಗೂ ಇಬ್ಬರು ಖಿಲಾಫತ್ ಕಾರ್ಯಕರ್ತರ ಮುತುವರ್ಜಿಯಿಂದ ಪಕ್ಷದ ಸ್ಥಾಪನೆಯಯಿತು. ಆ ನಂತರ ಕಲ್ಕತ್ತಾ, ಮುಂಬೈ, ಮದ್ರಾಸ್ ಹಾಗೂ ಲಾಹೋರ್‌ಗಳಲ್ಲಿ ನಾಲ್ಕು ಕಮ್ಯುನಿಸ್ಟ್ ಗುಂಪುಗಳು ರಚನೆಗೊಂಡವು. ಆರಂಭದಲ್ಲಿ ಸ್ವತಂತ್ರವಾಗಿ ಕೆಲಸ ಮಾಡುತ್ತಿದ್ದ ಈ ಗುಂಪುಗಳು ಎಡರಾಷ್ಟ್ರೀಯವಾದದ ಪ್ರಚಾರದ ಕೆಲಸ ಮಾಡಿದವು. ಡಿಸೆಂಬರ್ 1925ರಲ್ಲಿ ಈ ನಾಲ್ಕು ಗುಂಪುಗಳ ಪ್ರತಿನಿಧಿಗಳು ಕಾನ್ಪುರದಲ್ಲಿ ಸಭೆ ಸೇರಿ ದೇಶದಲ್ಲಿ ಎಡ ರಾಜಕೀಯಕ್ಕೆ ಒಂದು ಸಂಯೋಜಿತ ಐಕ್ಯ ಸ್ವರೂಪ ನೀಡಲು ಒಂದು ಕೇಂದ್ರ ಸಮಿತಿಯನ್ನು ರಚಿಸಿದರು.


ಭಾರತದಲ್ಲಿ ಕಮ್ಯುನಿಸಂ ಹರಡುವುದನ್ನು ಕಂಡ ಬ್ರಿಟಿಶರಿಗೆ ಬಹಳ ದಿಗಿಲಾಯಿತು. ಅದನ್ನೆದುರಿಸಲು ಎಲ್ಲಾ ರೀತಿಯ ದಮನ ಕ್ರಮಗಳಿಗೆ ಕೈ ಹಾಕಿದರು. ಅಂದರೆ ಇದರರ್ಥ ಆರಂಭದಿಂದಲೇ




ಕಾನ್ಪುರ ಪಿತೂರಿ ಮೊಕದ್ದಮೆಯ ಆಪಾದಿತರು ನಳಿನಿ ಭೂಷಣ್ ದಾಸ್‌ಗುಪ್ತ, ಶೌಕತ್ ಉಸ್ಮಾನಿ, ಎಸ್.ಎ. ಡಾಂಗೆ, ಮುಝಫರ್ ಅಹ್ಮದ್.

ಕಮ್ಯುನಿಸ್ಟರು ಬಹಳಷ್ಟು ಪ್ರತಿಕೂಲ ವಾತಾವರಣವನ್ನು ಎದುರಿಸಿ ಕೆಲಸ ಮಾಡಬೇಕಾಯಿತು. ವಿದೇಶಗಳಲ್ಲಿ ತರಬೇತಾಗಿ ಭಾರತಕ್ಕೆ ಕಳಿಸಲ್ಪಟ್ಟ ಎಂ.ಎನ್.ರಾಯ್ ಮುಂತಾದವರನ್ನು ಅವರು ದೇಶದೊಳಗೆ ಬಂದ ಕೂಡಲೇ ಬಂಧಿಸಲಾಯಿತು. 1923ರಲ್ಲಿ ಅವರಲ್ಲಿ ಹೆಚ್ಚಿನವರ ಮೇಲೆ ಪೇಶಾವರ್ ಪಿತೂರಿ ಮೊಕದ್ದಮೆಯನ್ನು ಹಾಕಿ ಜೈಲಿಗೆ ಅಟ್ಟಲಾಯಿತು. 1924ರಲ್ಲಿ ವಸಾಹತುಶಾಹಿಗಳು ಕಾನ್ಪುರ ಪಿತೂರಿ ಮೊಕದ್ದಮೆಯ ನಾಟಕವಾಡಿದರು. ಅದರಲ್ಲಿ ದೇಶದ ಆಗಿನ ನಾಲ್ವರು ಪ್ರಮುಖ ಕಮ್ಯುನಿಸ್ಟರಾದ ಮುಝಫರ್ ಅಹ್ಮದ್, ಶೌಕತ್ ಉಸ್ಮಾನಿ, ಎಸ್.ಎ. ಡಾಂಗೆ ಹಾಗೂ ನಳಿನಿ ಭೂಷಣ್ ದಾಸ್‌ಗುಪ್ತರವರನ್ನು ಸಾಮ್ರಾಟನ ವಿರುದ್ಧ ಪಿತೂರಿ ಹೂಡಿದ ಆಪಾದನೆಯ ಮೇಲೆ ಶಿಕ್ಷೆಗೆ ಗುರಿಪಡಿಸಲಾಯಿತು. ಆದರೆ ಈ ಕುರಿತು ವಿಚಾರಣೆ ಕಾರ್ಮಿಕ ವರ್ಗ ಮತ್ತು ಬುದ್ಧಿಜೀವಿಗಳನ್ನು ಸಾಕಷ್ಟು ದಿಗ್ಭ್ರಾಂತಗೊಳಿಸಿತು. ಸಮಾಜವಾದ, ಕಮ್ಯುನಿಸಂ ಪ್ರಶ್ನೆಗಳು ಮುಂದೆ ಬಂದವು. ಮುಂಬೈಯಲ್ಲಿ ಒಂದು ಭಾರತೀಯ ಕಮ್ಯುನಿಸ್ಟರ ರಕ್ಷಣಾ ಸಮಿತಿ ರಚನೆಯಾಯಿತು. ಅದು ಕಮ್ಯುನಿಸ್ಟ್ ಪಾರ್ಟಿ ಕಟ್ಟುವ ಭಾರತೀಯರ ಹಕ್ಕನ್ನು ಪಡೆಯಲು ಒಂದು ಪ್ರಚಾರಾಂದೋಲನವನ್ನು ಸಂಘಟಿಸಿತು. ಬ್ರಿಟಿಷ್ ಆಳ್ವಿಕೆಯ ಬಹಳಷ್ಟು ಕಾಲದಲ್ಲಿ ಭಾರತದ ಕಮ್ಯುನಿಸ್ಟ್ ಪಕ್ಷ ಒಂದು ನಿಷೇಧಿತ ರಾಜಕೀಯ ಸಂಘಟನೆಯಾಗಿ ತಲೆಮರೆಸಿಕೊಂಡೇ ಕೆಲಸ ಮಾಡಬೇಕಾಯಿತು ಎಂಬುದು ಗಮನಾರ್ಹ.


ಕಮ್ಯುನಿಸ್ಟರು ಆರಂಭದ ವರ್ಷಗಳಲ್ಲಿ ಕಾಂಗ್ರೆಸ್ಸಿನ ಮೂಲಕ ಕೆಲಸ ಮಾಡುತ್ತಾ ಕಾರ್ಷಿಕ ಮತ್ತು ಕಾರ್ಮಿಕ ವರ್ಗ ಹೋರಾಟಗಳೊಂದಿಗೆ ಈ ರಾಷ್ಟ್ರೀಯವಾದಿ ಸಂಘಟನೆಯ ಸಂಬಂಧ ಬೆಸೆಯಲು ಪ್ರಯತ್ನಿಸಿದರು. ಈ ಆರಂಭದ ಘಟ್ಟದಲ್ಲಿ ದೇಶದ ವಿಭಿನ್ನ ಸ್ಥಾನಗಳಲ್ಲಿ ಸ್ಥಾಪನೆಗೊಂಡ ಕಾರ್ಮಿಕ ಮತ್ತು ರೈತರ ಪಕ್ಷ (Workers and Peasants Party) ದ



ಮುಝಾಫರ್ ಅಹ್ಮದ್.



ಎಸ್.ಎ. ಡಾಂಗೆ.




ಎಂ.ಎನ್.ರಾಯ್

ವೇದಿಕೆಯನ್ನು ಬಳಸಿಕೊಂಡರು. 1928ರಲ್ಲಿ ಈ ಪಕ್ಷದ ಅಖಿಲ ಭಾರತ ಸಮ್ಮೇಳನ ನಡೆದು ವಿವಿಧ ಸ್ಥಳೀಯ ಘಟಕಗಳನ್ನು ಒಟ್ಟು ತರಲು ಪ್ರಯತ್ನಿಸಲಾಯಿತು. ಅದೇ ವರ್ಷ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಕಲ್ಕತ್ತಾ ಅಧಿವೇಶನದಲ್ಲಿ ಸಂಪೂರ್ಣ ಸ್ವಾತಂತ್ರ್ಯ ತನ್ನ ಗುರಿ ಎಂದು ಕಾಂಗ್ರೆಸ್ ಘೋಷಿಸಬೇಕೆಂದು ಒತ್ತಾಯಿಸಿ 50,000 ಮಿಲ್ ಕಾರ್ಮಿಕರು ಮತ್ತು ಭಾರತೀಯ ಸಮಾಜದ ಕೆಳವರ್ಗಗಳ ಜನ ಎಡ ನೇತೃತ್ವದಲ್ಲಿ ಪ್ರಬಲರಾಗಿದ್ದವರು ಡೊಮಿನಿಯನ್ ಅಂದರೆ ಆಶ್ರಿತ ಸ್ಥಾನಮಾನದ ಬಗ್ಗೆಯಷ್ಟೆ ಯೋಚಿಸುತ್ತಿದ್ದರು.


ಈ ಸಂದರ್ಭದಲ್ಲಿ ಸುಭಾಶ್ ಚಂದ್ರ ಬೋಸ್‌ರವರೂ ಸಂಪೂರ್ಣ ಸ್ವಾತಂತ್ರ್ಯದ ಬೇಡಿಕೆಯನ್ನು ಬೆಂಬಲಿಸಿದರು. ಈ ಹಿಂದೆ 1921 ರಲ್ಲಿ ಅಹಮದಾಬಾದ್ ಕಾಂಗ್ರೆಸ್ ಅಧಿವೇಶನದಲ್ಲಿ ಸಂಪೂರ್ಣ ಸ್ವಾತಂತ್ರ್ಯ ಕಾಂಗ್ರೆಸ್ಸಿನ ಗುರಿಯಾಗಬೇಕೆಂಬ ಒಂದು ನಿರ್ಣಯವನ್ನು ಮಂಡಿಸಲಾಗಿತ್ತು. ಅದನ್ನು ಮಂಡಿಸಿದವರು ಮತ್ತು ಅನುಮೋದಿಸಿದವರು ಇಬ್ಬರೂ ಕಮ್ಯುನಿಸ್ಟರು ಎಂಬುದು ಗಮನಾರ್ಹ. ನಂತರ **1927 ರಲ್ಲಿ ಮದ್ರಾಸ್ ಅಧಿವೇಶನದಲ್ಲಿ ಜವಾಹರಲಾಲ್ ನೆಹರೂವ 'ಪೂರ್ಣಸ್ವರಾಜ್ಯ'ದ ಠರಾವನ್ನು ಮಂಡಿಸಿದಾಗ ಅದನ್ನು ಅನುಮೋದಿಸಿ ಮಾತನಾಡಿದವರು ಕಮ್ಯುನಿಸ್ಟ್ ಪ್ರತಿನಿಧಿಯಾದ ಜೋಗ್ಳೇಕರ್.**

1920 ರ ದಶಕದ ಅಂತ್ಯದ ವೇಳೆಗೆ ಭಾರತದ ಕಾರ್ಮಿಕ ವರ್ಗದ ನಡುವೆ ಕಮ್ಯುನಿಸ್ಟ್ ಪ್ರಭಾವ ಹೆಚ್ಚಿತು. ಕಮ್ಯುನಿಸ್ಟ್ ನೇತೃತ್ವದಲ್ಲಿ ಕಾರ್ಮಿಕ ವರ್ಗ ರಾಷ್ಟವ್ಯಾಪಿ ಸೈಮನ್ ಆಯೋಗ – ವಿರೋಧಿ ಆಂದೋಲದಲ್ಲಿ ಭಾಗವಹಿಸಿತು. 1928 ರ ಒಂದೇ ವರ್ಷದಲ್ಲಿ ದೇಶಾದ್ಯಂತ 200 ಕ್ಕೂ ಹೆಚ್ಚು ಕೈಗಾರಿಕಾ ಮುಷ್ಕರಗಳು ನಡೆದು ಇದರಲ್ಲಿ ಸುಮಾರು 5 ಲಕ್ಷ ಕಾರ್ಮಿಕರು ಭಾಗವಹಿಸಿದರು. ಇದರಲ್ಲಿ ಅತ್ಯಂತ ಮಹತ್ವದ್ದೇದರೆ ಮಹಾರಾಷ್ಟದಲ್ಲಿ ಕಮ್ಯುನಿಸ್ಟ್ ಪ್ರಭಾವದ ಗಿರಿಣಿ ಕಾಮಗಾರ್ ಯೂನಿಯನ್ ನ ನೇತೃತ್ವದಲ್ಲಿ ನಡೆದ ಜವಳಿ ಕಾರ್ಮಿಕರ ಮುಷ್ಕರ, 1928 ರಲ್ಲಿ ಈ ಸಂಘ ಆರಂಭವಾದಾಗ ಸದಸ್ಯ ಸಂಖ್ಯೆ ಕೇವಲ 324 ಇದ್ದದ್ದು ಆ ವರ್ಷದ ಡಿಸೆಂಬರ್ ವೇಳೆಗೆ 54,000ಕ್ಕೇರಿತು. 1929ರ ಆರಂಭದಲ್ಲಿ ಅದು 65,000 ಆಯಿತು.

ಕುತೂಹಲಕಾರಿ ಸಂಗತಿ ಎಂದರೆ ಕಾಂಗ್ರೆಸ್ಸಿನ ಪ್ರಬಲ ಮುಖಂಡತ್ವ ಈ ಕಾರ್ಮಿಕ ಅಸಂತೃಪ್ತಿಯನ್ನು ಒಪ್ಪಲಿಲ್ಲ. ಅಥವಾ ಬ್ರಿಟಿಷ ಸರ್ಕಾರ ಅಮಾನುಷ ದಮನ ಕ್ರಮಗಳನ್ನು ಬಳಸಿದಾಗ ಮೌನವಾಗಿತ್ತು. ಆಗ ಕಾರ್ಮಿಕ ಬಂಡಾಯ ಎಷ್ಟಿತ್ತೆಂಬುದಕ್ಕೆ 1928–29ರ ಒಂದು ಸರಕಾರಿ ವರದಿಯ ಈ ಕೆಳಗಿನ ಮಾತುಗಳೇ



ರಾಷ್ಟವ್ಯಾಪಿ ಸೈಮನ್ ಆಯೋಗ – ವಿರೋಧಿ ಆಂದೋಲದಲ್ಲಿ ಕಾರ್ಮಿಕ ವರ್ಗ


ಸಂಪೂರ್ಣ ಸ್ವಾತಂತ್ರ್ಯ ಬೇಡಿಕೆಯನ್ನು ಮಂಡಿಸಿದವರು ಮತ್ತು ಅನುಮೋದಿಸಿದವರು ಹಸ್ರತ್ ಮೊಹನಿ ಮತ್ತು ಸ್ವಾಮಿ ಕುಮಾರನಂದ

ಸಾಕ್ಷಿ.– "ಕಮ್ಯುನಿಸ್ಟ್ ವಿಚಾರಗಳು.... ಕೈಗಾರಿಕಾ ಶ್ರಮಜೀವಿ ವರ್ಗದ ವಿವಿಧ ವಿಭಾಗಗಳ ನಡುವೆ. ಅಷ್ಟೇ ಅಲ್ಲ ಸ್ವಲ್ಪಮಟ್ಟಿಗೆ ಗ್ರಾಮೀಣ ಭಾರತದಲ್ಲೂ ಹರಡಿವೆ.... ಹಲವು ಯುವ ಸಂಘಟನೆಗಳು ಕಮ್ಯುನಿಸ್ಟ್ ಪ್ರತೀಕಗಳನ್ನು, ಸಿದ್ಧಾಂತಗಳನ್ನು ಅಂಗೀಕರಿಸಿರುವುದು ಒಂದು ಮಹತ್ವದ ಸಂಗತಿ. ಕಮ್ಯುನಿಸ್ಟ್ ಆಂದೋಲನ ಒಂದು ಆತಂಕದ ವಿಷಯವಾಗಿಯೇ ಇದೆ. ಆಡಳಿತ ಈ ಬಗ್ಗೆ ನಿರಂತರ ಎಚ್ಚರದಿಂದಿರಬೇಕು"

ಇಲ್ಲಿ ಮಹತ್ವದ ಸಂಗತಿಯೆಂದರೆ ಕಮ್ಯುನಿಸ್ಟ್‌ರು ಕಾರ್ಮಿಕ ವರ್ಗದ ರಾಜಕೀಯವನ್ನು ಸಂಘಟಿಸುವಾಗಲೂ ಎಂದೂ ರಾಷ್ಟ್ರೀಯವಾದೀ ಕಣ್ಣೋಟವನ್ನು ಮರೆಯಲಿಲ್ಲ. 1930 ರಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷ "ಕಾರ್ಯಾಚರಣೆಯ ವೇದಿಕೆ" ಎಂಬ ಕಾರ್ಯಕ್ರಮವನ್ನು ಪ್ರಕಟಿಸಿತು. 1934 ರಲ್ಲಿ ಇದನ್ನು ಪಕ್ಷದ ಪ್ಲೀನಂ ಸಭೆ ಭಾರತ ಕಮ್ಯುನಿಸ್ಟ್ ಪಕ್ಷದ ಕಾರ್ಯಕ್ರಮ ಎಂದು ಅಂಗೀಕರಿಸಿತು. ಇದರಲ್ಲಿ ಸ್ವಾತಂತ್ರ್ಯ ಪಡೆಯುವ ಒಂದು ಸಂಪೂರ್ಣ ಕಾರ್ಯಕ್ರಮವನ್ನು ವಿಶದಪಡಿಸಲಾಯಿತು.

ಮಾರ್ಕ್ಸ್‌ವಾದ–ಲೆನಿನ್‌ವಾದವನ್ನು ಆಧರಿಸಿದ ಈ ದಸ್ತಾವೇಜು ಕಾಂಗ್ರೆಸ್ಸಿನ ಬಂಡವಾಳಶಾಹಿ–ಭೂಮಾಲಕ ಕಣ್ಣೋಟದಿಂದ ದೂರ ಸಿಡಿದು ನಿಂತು ರಾಷ್ಟೀಯ ಸಾಮ್ರಾಜ್ಯಶಾಹಿ–ವಿರೋಧಿ ಹೋರಾಟದ ಯಶಸ್ಸು ಹಾಗೂ ಒಂದು ಕಾರ್ಷಿಕ ಕ್ರಾಂತಿಯ ನಡುವೆ ಸಂಬಂಧ ಬೆಸೆಯಿತು. ಈ ದಾಸ್ತಾವೇಜು ಹೀಗೆಂದಿತ್ತು–

"ಭಾರತೀಯ ಜನತೆಯು ಗುಲಾಮಿಕೆಯನ್ನು ನಾಶಮಾಡಿ


ಕಾರ್ಮಿಕ ವರ್ಗ ಹಾಗೂ ರೈತಾಪಿ ಜನಗಳನ್ನು ಕಿತ್ತು ತಿನ್ನುತ್ತಿರುವ ಬಡತನದಿಂದ ಅವರನ್ನು ವಿಮೋಚನೆಗೊಳಿಸಬೇಕಾದರೆ ದೇಶದ ಸ್ವಾತಂತ್ರ್ಯವನ್ನು ಗೆದ್ದುಕೊಳ್ಳುವುದು ಹಾಗೂ ಮಧ್ಯಯುಗದಿಂದ ಉಳಿದು ಬಂದಿರುವ ಭೂಮಾಲಕ ವ್ಯವಸ್ಥೆಯನ್ನು ಧ್ವಂಸಮಾಡಿ ಮಧ್ಯಯುಗದ ಹೊಲಸುಗಳಿಂದ ಇಡೀ ದೇಶವನ್ನು ಸ್ವಚ್ಛಗೊಳಿಸುವ ಒಂದು ಕಾರ್ಷಿಕ ಕ್ರಾಂತಿಯ ಬಾವುಟವನ್ನೆತ್ತಿ ಹಿಡಿಯುವುದು ಅತ್ಯಗತ್ಯ. ಬ್ರಿಟಿಷ್ ಬಂಡವಾಳಶಾಹಿ ಮತ್ತು ಭೂಮಾಲಕತ್ವದ ವಿರುದ್ಧ ಒಂದು ಕಾರ್ಷಿಕ ಕ್ರಾಂತಿ ಭಾರತದ ಕ್ರಾಂತಿಕಾರಿ ವಿಮೋಚನೆಯ ಆಧಾರವಾಗಬೇಕು".

ಮೀರತ್ ಮತ್ತು ನಂತರ

"ಕಮ್ಯುನಿಸ್ಟ್ ಬೆದರಿಕೆ" ಎಂದು ಬ್ರಿಟಿಷ್ ಆಡಳಿತ ಏನನ್ನು ಚಿತ್ರಿಸಿಕೊಂಡಿತ್ತೋ ಅದನ್ನೆದುರಿಸಲು ಬ್ರಿಟಿಷ್ ಆಡಳಿತ ಕ್ರಾಂತಿಕಾರಿ ಮುಖಂಡರು ಮತ್ತು ತೀವ್ರಗಾಮಿ ಟ್ರೇಡ್ ಯೂನಿಯನ್ ಮುಖಂಡರ ವ್ಯಾಪಕ ಬಂಧನಕ್ಕಿಳಿಯಿತು. ಮಾರ್ಚ್ 1929 ರಲ್ಲಿ ಭಾರತೀಯ ಕಮ್ಯುನಿಸ್ಟರಲ್ಲಿ ಪ್ರಮುಖರಾದ ಮುಝಫರ್ ಅಹ್ಮದ್, ಎಸ್.ಎ.ಡಾಂಗೆ, ಪಿ.ಸಿ.ಜೋಷಿ ಮುಂತಾದ ಮುಖಂಡರು ಹಾಗೂ ಮೂವರು ಬ್ರಿಟಿಷ್ ಕಮ್ಯುನಿಸ್ಟರು ಸೇರಿಂದಂತೆ 33 ಪ್ರಸಿದ್ದ ಕಾರ್ಮಿಕ ಮುಖಂಡರ ಮೇಲೆ ಬ್ರಿಟಿಷ್ ಆಳ್ವಿಕೆಯ ವಿರುದ್ಧ ಪಿತೂರಿ ಹೂಡಿದ ಆಪಾದನೆ ಹೇರಲಾಯಿತು. ಇದು ಮೀರತ್ ಪಿತೂರಿ ಮೊಕದ್ದಮೆ ಎಂದು ಖ್ಯಾತವಾಗಿದೆ. 1930ರ ವರೆಗೂ ಇದರ ವಿಚಾರಣೆ ಎಳೆಯಿತು. ಈ ವಿಚಾರಣೆಯ ವೇಳೆಗೆ ಕಮ್ಯುನಿಸ್ಟರ ವರ್ತನೆಗೆ ವ್ಯಾಪಕ ಮೆಚ್ಚುಗೆ ವ್ಯಕ್ತವಾಯಿತು. ಆತ್ಮರಕ್ಷಣೆಯ ಅವಕಾಶವನ್ನು ಅವರು ಮಾರ್ಕ್ಸ್‌ವಾದ-ಲೆನಿನ್‌ವಾದದ ನೀತಿಗಳನ್ನು ಪ್ರತಿಪಾದಿಸಲು ಹಾಗೂ ರಾಷ್ಟ್ರೀಯವಾದಕ್ಕೆ ತಮ್ಮ ಬದ್ಧತೆಯನ್ನು ಪುನರುಚ್ಚರಿಸಲು ಬಳಸಿಕೊಂಡರು. ಅದೇ ವೇಳೆಗೆ ನ್ಯಾಯಾಲಯದ ಹೊರಗು ಈ ವಿಚಾರಣೆಗೆ ವ್ಯಕ್ತಗೊಂಡ ಜನತೆಯ ಕ್ರೋಧ ದೇಶಾದ್ಯಂತ ಮುಷ್ಕರಗಳ ಒಂದು ಸರಣಿಯ



1929 ರಲ್ಲಿ 'ಮೀರತ್ ಪಿತೂರಿ' ಮೊಕದ್ದಮೆಯಲ್ಲಿ ಸಿಲುಕಿಸಲಾದ 33 ಸಂಗಾತಿಗಳು



ಐನ್‌ಸ್ಟೈನ್

ರೂಪದಲ್ಲಿ ವ್ಯಕ್ತಗೊಂಡಿತು. ಮೋತಿಲಾಲ್ ನೆಹರೂ ಅಧ್ಯಕ್ಷರಾಗಿದ್ದ ಹಾಗೂ ಜವಾಹರಲಾಲ್ ನೆಹರು ಕಾರ್ಯದರ್ಶಿಯಾಗಿದ್ದ ಒಂದು ರಕ್ಷಣಾ ಸಮಿತಿ ರಚನೆಗೊಂಡಿತು. ಕಮ್ಯುನಿಸ್ಟರ ರಕ್ಷಣೆಗಾಗಿ ನಿಧಿ ಎತ್ತುವುದು ಸುಲಭದ ಕೆಲಸವಾಗಿರಲಿಲ್ಲವೆಂದು ಜವಾಹರಲಾಲ್ ನಂತರ ಹಲುಬಿದರೂ ಪ್ರತಿವಾದಿಯ ವಕೀಲರಿಗಾಗಿ ಹಣ ಸಂಗ್ರಹಿಸಲು ಬಂಧಿಗಳಿಗೆ ಆಹಾರ, ಪತ್ರಿಕೆಗಳು, ಪುಸ್ತಕಗಳನ್ನು ಒದಗಿಸಲು ಕೂಡಾ ಸಮಿತಿಗಳು ರಚನೆಗೊಂಡವು.

ಮೀರತ್ ರಕ್ಷಣಾ ಆಂದೋಲನಕ್ಕೆ ಸೋವಿಯತ್ ಒಕ್ಕೂಟದಿಂದ ಹಾಗೂ ಸ್ವತಃ ಗ್ರೇಟ್ ಬ್ರಿಟನ್‌ನ ಕಾರ್ಮಿಕ ಆಂದೋಲನದಿಂದ ಗಮನಾರ್ಹ ಬೆಂಬಲ ದೊರೆಯಿತು. ಆ ಯುಗದ ಪ್ರಖ್ಯಾತ ಬುದ್ಧಿಜೀವಿಗಳಾದ ಐನ್‌ಸ್ಟೈನ್, ರೋಮೇಂರೋಲಾ ಮತ್ತು ಹೆರಾಲ್ಡ್ ಲಾಸ್ಕಿಯಂತವರು ಮೀರತ್ ವಿಚಾರಣೆಯನ್ನು ಖಂಡಿಸಿದರು. ನ್ಯಾಯಾಲಯ ಆಪಾದಿತರಿಗೆ ಕಠಿಣ ಶಿಕ್ಷೆಗಳನ್ನು ವಿಧಿಸಿತು. ಆದರೆ ಈ ಪಿತೂರಿ ಮೊಕದ್ದಮೆ ಭಾರತದಲ್ಲಿ ಕಮ್ಯುನಿಸಂನ ಶಕ್ತಿ ಬೆಳೆಯುತ್ತಿರುವುದನ್ನು ಸಾಬೀತುಗೊಳಿಸಿತು.

1934ರ ವೇಳೆಗೆ ಕಮ್ಯುನಿಸ್ಟರು ಮೀರತ್ ಆಘಾತದಿಂದ ಚೇತರಿಸಿಕೊಂಡು ಒಂದು ಹೊಸ ಹುಮ್ಮಸ್ಸಿನಿಂದ ಭಾರತೀಯ ಕಾರ್ಮಿಕ ಶಕ್ತಿಯ ಮರುಸಂಘಟನೆ ಆರಂಭಿಸಿದರು. ಆ ವರ್ಷ ಕಮ್ಯುನಿಸ್ಟರು ಮತ್ತು ಇತರ ಎಡಪಂಥೀಯ ಗುಂಪುಗಳು ಜೊತೆಗೂಡಿ ಒಂದು ಬೃಹತ್ ಅಖಿಲ ಭಾರತ ಜವಳಿ ಮುಷ್ಕರವನ್ನು ಸಂಘಟಿಸಿದರು. ರಾಜಕೀಯ ಬಂಧಿಗಳ ಬಿಡುಗಡೆ ಮುಷ್ಕರಕಾರರ ಬೇಡಿಕೆಗಳಲ್ಲಿ ಒಂದಾಗಿತ್ತು. ಈ ಅವಧಿಯಲ್ಲಿ ಕಮ್ಯುನಿಸ್ಟರು ಕಾಂಗ್ರೆಸ್ ಸಮಾಜವಾದಿ ಗುಂಪಿನೊಂದಿಗೆ ಸಂಪರ್ಕಗಳನ್ನು ಬೆಳೆಸಿದರು. ಇಬ್ಬರೂ ಸೇರಿ 1933ರ ಭಾರತ ಸರಕಾರ ಕಾನೂನಿಗೆ ಒಪ್ಪಿಗೆ ನೀಡಿದ್ದನ್ನು ವಿರೋಧಿಸಿದರು. ಆದರೆ 1937ರ ಚುನಾವಣೆಗಳ ನಂತರ 11 ಪ್ರಾಂತಗಳಲ್ಲಿ 7 ರಲ್ಲಿ ಕಾಂಗ್ರೆಸ್ ಪ್ರಾಂತೀಯ ಸರಕಾರಗಳನ್ನು ರಚಿಸಿದ ನಂತರ ಸಿಪಿಐ ಹೊಸ ರಾಜಕೀಯ ವಾತಾವರಣದಲ್ಲಿ ಒಂದು ದ್ವಂದ್ವ ನೀತಿಯನ್ನು ಅನುಸರಿಸಿತು. ಒಂದೆಡೆ ಅಧಿಕಾರಶಾಹಿ ಮತ್ತು ಕೇಂದ್ರ ಸರಕಾರದ ಹಸ್ತಕ್ಷೇಪವನ್ನು ತಡೆದು



ಎಐಎಸ್‌ಎಫ್ ಸ್ಥಾಪನಾ ಸಭೆ –1936

ನಿಲ್ಲಿಸಲು ಕಾಂಗ್ರೆಸ್ ಮಂತ್ರಿಮಂಡಲಗಳಿಗೆ ಬೆಂಬಲವಾಗಿ ನಿಂತಿತು. ಇನ್ನೊಂದೆಡೆ, ಕಾಂಗ್ರೆಸ್ ಸರಕಾರಗಳು ಪ್ರತಿಭಟನಾ ರಾಜಕೀಯದ ವಿರುದ್ಧ ದಮನದ ಧೋರಣೆಯನ್ನು ಆರಿಸಿಕೊಂಡಾಗ ಸಿಪಿಐ ಅವುಗಳ ವಿರುದ್ಧ ಸಂಘರ್ಷಕ್ಕೂ ಇಳಿಯಿತು.

ಈ ನಡುವೆ ಕಮ್ಯುನಿಸ್ಟರು ರೈತಾಪಿ ಜನಗಳನ್ನು, ಯುವಜನರನ್ನು ಸಂಘಟಿಸುವಲ್ಲಿ ಸಾಕಷ್ಟು ಮುನ್ನಡೆ ಸಾಧಿಸಿದರು. ಎಡ ರಾಷ್ಟ್ರೀಯವಾದಿಗಳ ಸಹಕಾರದೊಂದಿಗೆ ಕಮ್ಯುನಿಸ್ಟರು 1936ರಲ್ಲಿ ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ (AISF) ವನ್ನು ಸ್ಥಾಪಿಸಿದರು. ಅದೇ ಸುಮಾರಿಗೆ ಕಮ್ಯುನಿಸ್ಟರ ಮುತುವರ್ಜಿಯಿಂದ ಪ್ರಗತಿಪರ ಕಲಾವಿದರ ಒಂದು ರಾಷ್ಟ್ರೀಯ ವೇದಿಕೆ ಸಂಘಟಿತವಾಯಿತು. ಅದೇ ವರ್ಷ ಅಖಿಲ ಭಾರತ ಕಿಸಾನ್ ಸಭಾ ಸ್ಥಾಪನೆಗೊಂಡಿತು. ಅದು ಕಮ್ಯುನಿಸ್ಟರ ನೇತೃತ್ವದಲ್ಲಿ ವಿಶೇಷವಾಗಿ ಬಂಗಾಳ, ಕೇರಳ, ಆಂಧ್ರ ಪ್ರದೇಶ, ಪಂಜಾಬ್‌ಗಳಲ್ಲಿ ಬಲಿಷ್ಟವಾಗಿ ಬೆಳೆಯಿತು. ಈ ಸಂದರ್ಭದಲ್ಲಿ ಸಹಜಾನಂದ ಸರಸ್ವತಿಯಂತಹ ರೈತ ಮುಖಂಡರು ವಹಿಸಿದ ಮಹತ್ವದ ಪಾತ್ರವನ್ನು ನೆನಪಿಸಿಕೊಳ್ಳಬಯಸುತ್ತೇನೆ. ಕಿಸಾನ್ ಸಭಾ ರೈತರ ಕುಂದುಕೊರತೆಗಳಿಗೆ ದನಿ ನೀಡಿದ್ದಷ್ಟೇ ಅಲ್ಲ, ಅದಾಗಲೇ ಗಾಂಧಿವಾದಿ ನೇತೃತ್ವದಲ್ಲಿ ಒಂದು ಪ್ರೌಢ ಸ್ವರೂಪ ಪಡೆದಿದ್ದ ರಾಷ್ಟ್ರೀಯವಾದದ ಪ್ರಮುಖ ಧಾರೆಗೆ ಬೆಂಬಲ ನೀಡಿತು.

ಎರಡನೇ ಮಹಾಯುದ್ಧ ಭಾರತದಲ್ಲಿ ಕಮ್ಯುನಿಸ್ಟ್ ರಾಜಕೀಯದ ಬೆಳವಣಿಗೆಯಲ್ಲಿ ಒಂದು ಹೊಸ ತಿರುವು ಬಿಂದುವಾಯಿತು. ಆರಂಭದಲ್ಲಿ ಸಿಪಿಐ ಈ ಯುದ್ಧವನ್ನು ಸಾಮ್ರಾಜ್ಯಶಾಹಿ ಯುದ್ಧವೆಂದು ವಿಶ್ಲೇಷಿಸಿತು; ಭಾರತವನ್ನು ಏಕ ಪಕ್ಷೀಯವಾಗಿ ಈ ಯುದ್ಧದಲ್ಲಿ ಭಾಗಿಯಾಗುವಂತೆ ಮಾಡುವ ಬ್ರಿಟಿಶ್ ಪ್ರಯತ್ನವನ್ನು ಕಾಂಗ್ರೆಸ್ಸಿನ ಜೊತೆಗೂಡಿ ವಿರೋಧಿಸಿತು. ಯುದ್ಧದ ಆರ್ಥಿಕ ದುಷ್ಪರಿಣಾಮಗಳನ್ನು ಬಯಲಿಗೆಳೆಯುವ ಪ್ರಚಾರಾಂದೋಲನದ ಮುಖಂಡತ್ವವನ್ನು ಕಮ್ಯುನಿಸ್ಟರೇ ವಹಿಸಿದ್ದರು. ಅಕ್ಟೋಬರ್2, 1939ರಂದು ಮುಂಬೈಯ 20,000 ಗಿರಿಣಿ ಕಾರ್ಮಿಕರು ಯುದ್ಧವನ್ನು ವಿರೋಧಿಸಿ ಮುಷ್ಕರ ನಡೆಸಿದರು. ದೇಶದ ಇತರ ಭಾಗಗಳಲ್ಲೂ ಸಿಪಿಐ ಯುದ್ಧ ವಿರೋಧಿ ಮತ ಪ್ರದರ್ಶನಗಳನ್ನು ನಡೆಸಿತು. ಕಮ್ಯುನಿಸ್ಟರ ಚಟುವಟಿಕೆಗಳಿಂದ ಕುಪಿತರಾದ ಬ್ರಿಟೀಶ್ ಸರಕಾರ ಎಲ್ಲಾ ಪ್ರಮುಖ ಕಮ್ಯುನಿಸ್ಟ ಮುಖಂಡರನ್ನು ಬಂಧಿಸಿ ಜೈಲಿಗಟ್ಟಿತು. ಆದರೂ ಕಮ್ಯುನಿಸ್ಟ್ ಚಟುವಟಿಕೆಗಳ ಹೆಚ್ಚಿನ ಪ್ರತಿಭಟನೆ ಹಾಗೂ ಉಲ್ಲಂಘನೆಯ ಕಿಡಿಯನ್ನು ಆರಿಸಲು ಬ್ರಿಟಿಶ್ ಸರಕಾರಕ್ಕೆ ಆಗಲಿಲ್ಲ.

ಫ್ಯಾಸಿಸಂ ವಿರೋಧಿ ಘಟ್ಟ


ನಾಝಿಗಳು ಸೋವಿಯತ್ ಒಕ್ಕೂಟವನ್ನು ಅತಿಕ್ರಮಿಸಿದಾಗ ಎರಡನೇ ಮಹಾಯುದ್ಧದ ಸ್ವರೂಪವೇ ಬದಲಾಯಿತು. ಮೂಲತಃ ಸಾಮ್ರಾಜ್ಯಶಾಹಿ ಯುದ್ಧವಾಗಿದ್ದದ್ದು ಈಗ ಜನತಾ ಯುದ್ಧವಾಗಿ ಮಾರ್ಪಟ್ಟಿತು. ವಿಶ್ವದಾದ್ಯಂತ ಕಮ್ಯುನಿಸ್ಟರು ಅಂಗೀಕರಿಸಿದ ನಿಲುಮೆಗೆ ಅನುಗುಣವಾಗಿ ಸಿಪಿಐ ಕೂಡಾ ಆಗ ನಾಝಿವಾದ ಮತ್ತು ಫ್ಯಾಸಿಸಂ ವಿರುದ್ಧ ಪ್ರಜಾಪ್ರಭುತ್ವವಾದಿ ಶಕ್ತಿಗಳಿಗೆ ನೆರವಾಗುವುದು ತನ್ನ ಪ್ರಾಥಮಿಕ ಕರ್ತವ್ಯ ಎಂದು ಬಗೆಯಿತು. ಆ ಪ್ರಕಾರ ಕಾಂಗ್ರೆಸ್ ಕೊಟ್ಟ 1942ರ ಅಗಸ್ಟ್ ಕ್ರಾಂತಿಯ ಕರೆಯಿಂದ ಸಿಪಿಐ ಅಧಿಕೃತವಾಗಿ ದೂರಉಳಿಯಿತು. ಆದರೆ ಪ್ರಜಾಸತ್ತಾತ್ಮಕ, ಆರ್ಥಿಕ ಹಕ್ಕುಗಳಿಗಾಗಿ ಹಾಗೂ ಕೋಮು ಸೌಹಾರ್ದಕ್ಕಾಗಿ ಜನ[illegible] ಆಂದೋಲನಗಳನ್ನು ಸಂಘಟಿಸುವುದನ್ನು ಮುಂದುವರೆಸಿತು. ಕ್ವಿಟ್ ಇಂಡಿಯಾ ಆಂದೋಲನದಲ್ಲಿ ಬಂಧಿಸಿದ್ದ ಕಾಂಗ್ರೆಸ್ ಮುಖಂಡರ ಬಿಡುಗಡೆಗಾಗಿಯೂ

ಇಪ್ಟಾ ಸಂಘಟನೆಯ ಚಿನ್ಹೆ

ಸಿಪಿಐ ಚಳುವಳಿ ನಡೆಸಿತು. ಸ್ಥಳೀಯ ಮಟ್ಟಗಳಲ್ಲಿ ಹಲವು ಕಮ್ಯುನಿಸ್ಟರು ವೈಯಕ್ತಿಕವಾಗಿ ಆ ರಾಷ್ಟ್ರೀಯ ಉತ್ಕರ್ಷದಲ್ಲಿ ಭಾಗವಹಿಸಿದರು, ಅದಕ್ಕೆ ರೈತರು, ಕಾರ್ಮಿಕ ವರ್ಗ ಹಾಗೂ ಬುಡಕಟ್ಟು ಜನಗಳ ಬೆಂಬಲ ಸಿಗುವಂತೆ ಮಾಡಿದರು. 1943ರ ಬಂಗಾಳದ ಮನುಷ್ಯ ನಿರ್ಮಿತ ಬರಗಾಲದಲ್ಲಿ ಕಮ್ಯುನಿಸ್ಟರು ನಡೆಸಿದ ಪರಿಹಾರ ಹಾಗೂ ಪುನರ್ವಸತಿ ಕೆಲಸಗಳಿಂದಾಗಿ ಜನರ ಮೆಚ್ಚಿಗೆ ಗಳಿಸಿದರು. ಈ ಸಮಯದಲ್ಲಿ ಈ ಸಮಯದಲ್ಲಿ ಕಮ್ಯುನಿಸ್ಟರ ಪ್ರಯತ್ನದಿಂದಾಗಿ ಮಧ್ಯಮ ವರ್ಗದ ಬುದ್ಧಿ ಜೀವಿಗಳು-ವಿಶೇಷವಾಗಿ ಬಂಗಾಳದಲ್ಲಿ ಮಾರ್ಕ್ಸ್‌ವಾದ-ಲೆನಿನ್‌ವಾದದ ಪ್ರಭಾವಕ್ಕೊಳಗಾದರು. ಇಪ್ಟಾ (ಇಂಡಿಯನ್ ಪ್ರೊಗ್ರೆಸಿವ್ ಥಿಯೇಟರ್ ಅಸೋಸಿಯೇಷನ್ - IPTA) ದಂತಹ ಸಾಂಸ್ಕೃತಿಕ ಸಂಘಟನೆಗಳ ಕೆಲಸದ ಪ್ರಭಾವ ಈಗಲೂ ಅಚ್ಚಳಿಯದೆ ಉಳಿದಿರುವುದನ್ನು ಕಾಣಬಹುದು. 1942-43 ರ ಅವಧಿಯಲ್ಲಿ ಇವೆಲ್ಲದರಿಂದಾಗಿ ಸಿಪಿಐನ ಸದಸ್ಯರ ಸಂಖ್ಯೆ ಗಮನಾರ್ಹವಾಗಿ ಹೆಚ್ಚಿತು. ಇದು ಸಿಪಿಐನ ದೊಡ್ಡ ರಾಜಕೀಯ ತೊಂದರೆಯ ಸಮಯವೂ ಆಗಿತ್ತು. ಕ್ವಿಟ್ ಇಂಡಿಯಾ ಆಂದೋಳನದ ಬಗ್ಗೆ ಪಕ್ಷದ ನಿಲುವಿನಿಂದಾಗಿ ನಾವು ರಾಷ್ಟ್ರೀಯವಾದದ ಮುಖ್ಯಧಾರೆಯಿಂದ ದೂರವಾಗಿದ್ದೆವು. ನಮ್ಮನ್ನು 'ದೇಶದ್ರೋಹಿ'ಗಳು ಎಂದು ಚಿತ್ರಿಸುವ ಕಾಂಗ್ರೆಸ್ಸಿನ ಕೆಟ್ಟ ಪ್ರಚಾರ ಚಳುವಳಿಯಿಂದಾಗಿ ಪರಿಸ್ಥಿತಿ ಇನ್ನಷ್ಟು ಕಷ್ಟಕರವಾಗಿತ್ತು. ಅದರೆ ನಾವು ಜನಗಳೊಂದಿಗೇ ಇರಲು ದೃಢ ನಿರ್ಧಾರ ಮಾಡಿದ್ದೆವು. ಇದರಿಂದಾಗಿ ಸಿಪಿಐಯು ಗೆ ತನ್ನ ರಾಜಕೀಯ ಸ್ಥಾನಮಾನವನ್ನು ಉಳಿಸಿಕೊಳ್ಳಲು ಸಾಧ್ಯವಾಯಿತು.

ಹೊಸ ಹುಮ್ಮಸ್ಸು

ಎರಡನೇ ಮಹಾಯುದ್ಧದಲ್ಲಿ ಮಿತ್ರ ರಂಗದ ವಿಜಯ, ಯುದ್ಧಾನಂತರ ಬಿಟನ್ನಿನಲ್ಲಿ ಆರ್ಥಿಕ ಬಿಕ್ಕಟ್ಟು ಹಾಗೂ ಸಾಮ್ರಾಜ್ಯಶಾಹಿ ಮತ್ತು ರಾಷ್ಟ್ರೀಯವಾದದ ನಡುವಿನ ವೈರುಧ್ಯ ತೀಕ್ಷ್ಣಗೊಂಡುದರಿಂದ ದಕ್ಷಿಣ ಏಷ್ಯಾದಲ್ಲಿ ವಸಾಹತುವಾದದ ಕ್ರಾಂತಿ ಅನಿವಾರ್ಯವಾಯಿತು. ರಾಜಕೀಯ ಶಕ್ತಿಗಳ ಹೊಸ ಬಲಾಬಲಗಳಿಂದಾಗಿ ಭಾರತದಲ್ಲಿ ಯುದ್ಧಾನಂತರ ಒಂದು ಹೊಸ ಉತ್ಕರ್ಷ ಕಂಡುಬಂತು. ಕಮ್ಯುನಿಸ್ಟರು ಇದರಲ್ಲಿ ಒಂದು ನೇತೃತ್ವದ ಪಾತ್ರವಹಿಸಿದರು. ಪ್ರತಿಭಟನಾ ರಾಜಕೀಯದ ವಿಭಿನ್ನ ಧಾರೆಯೊಂದಿಗೆ ಸೇರಿಕೊಂಡ ಸನ್ನಿವೇಶ ಅದು. ಕಾರ್ಮಿಕ ವರ್ಗ, ರೈತಾಪಿ ಜನಗಳು ಹಾಗೂ ಯುವಜನಗಳ ಆರ್ಥಿಕ ಮತ್ತು ರಾಜಕೀಯ ಬೇಡಿಕೆಗಳನ್ನು ಒಂದುಗೂಡಿಸಿ ಒಂದು ಬ್ರಿಟಿಷ್ ವಿರೋಧಿ ಸಾಮೂಹಿಕ ಉತ್ಕರ್ಷ ಬೆಳೆಯುವಂತೆ ಮಾಡಿದರು. ಕೆಂಪು ಕೋಟೆಯಲ್ಲಿ ಆಝುದ್ ಹಿಂದ್ ಸೇನೆಯ ಬಂಧಿಗಳ ವಿಚಾರಣೆಯ ವಿರುದ್ಧ ದೇಶಾದ್ಯಂತ ಭುಗಿಲೆದ್ದ ಪ್ರತಿಭಟನೆಯಲ್ಲಿ ಕಮ್ಯುನಿಸ್ಟರು ಹುಮ್ಮಸ್ಸಿನಿಂದ ಭಾಗವಹಿಸಿದರು. ಆಝುಧ್ ಹಿಂದ್ ಸೈನಿಕ ಅಬ್ದುಲ್ ರಶೀದ್‌ಗೆ ಶಿಕ್ಷೆವಿಧಿಸಿದಾಗ ಇಡೀ ಕಲ್ಕತ್ತಾದಲ್ಲಿ ಕ್ರೋಧ ಸ್ಫೋಟಗೊಂಡಿತು. ಸಿಪಿಐ ಕರೆಯ ಮೇರೆಗೆ ಫೆಬ್ರವರಿ 12, 1946 ರಂದು ನಡೆದ ಸಾರ್ವತ್ರಿಕ ಮುಷ್ಕರ ಇಡೀ ನಗರವನ್ನು ಅಸ್ತವ್ಯಸ್ತಗೊಳಿಸಿತು. ಆಗ ಕಂಡುಬಂದ ಒಂದು ವಿಶಿಷ್ಟತೆಯೆಂದರೆ ಹಿಂದೂ-ಮುಸ್ಲಿಂ ಐಕ್ಯತೆ. ಕಾಂಗ್ರೆಸ್ ಮುಖಂಡರಾಗಿದ್ದ ಅರುಣಾ ಆಸಫ್ ಅಲಿ ಕಮ್ಯುನಿಸ್ಟ್ ನೇತೃತ್ವದ ವಿದ್ಯಾರ್ಥಿ- ಯುವಜನ ಆಂದೋಲನವನ್ನು ಕಂಡು ಎಷ್ಟು ಪ್ರಭಾವಿತರಾದರೆಂದರೆ ಇಡೀ ದೇಶ ಈ ಕಾರ್ಯಾಚರಣೆಯ ಮಾದರಿಯನ್ನು ಅನುಸರಿಸಬೇಕು ಎಂದು ಆಗ್ರಹಪಡಿಸಿದರು. ಆಗಿನ ಕಲ್ಕತ್ತಾ ಪೋಲೀಸ್ ಕಮಿಶನರ್ ತನ್ನ ಗುಪ್ತ ವರದಿಯಲ್ಲಿ ಕಮ್ಯುನಿಸ್ಟರು ಆತ್ಯಂತ ಅಪಾಯಕಾರಿ ಶಕ್ತಿ ಎಂದು ನೇರವಾಗಿಯೇ ಒಪ್ಪಿಕೊಂಡಿದ್ದರು.



2ನೇ ಮಹಾಯುದ್ಧದ ಅಂತಿಮ ವಿಜಯದ ಚಿತ್ರ ಬರ್ಲಿನ್



2ನೇ ಮಹಾ ಯುದ್ಧ ವಿರೋಧಿ ಸಭೆ ಬಾಂಬೆ 1939

ನಾವಿಕ ದಂಗೆ

ಈ ಅವಧಿಯ ಇನ್ನೊಂದು ವಿಶೇಷ ಲಕ್ಷಣವೆಂದರೆ ಈ ಬ್ರಿಟಿಷ್ ವಿರೋಧಿ ಅಲ್ಲೋಲಕಲ್ಲೋಲದಲ್ಲಿ ಬ್ರಿಟಿಷ್ ಭಾರತೀಯ ಸೇನಾಪಡೆಗಳು ಸೇರಿಕೊಂಡಿದ್ದು. ಜನವರಿ 1946ರಲ್ಲಿ

ಮುಂಬೈಯಲ್ಲಿ ವೈಮಾನಿಕ ಪಡೆಯ ಭಾರತೀಯ ಸದಸ್ಯರು ಜನಾಂಗ ಪಕ್ಷಪಾತದ ವಿರುದ್ಧ ಮುಷ್ಕರ ನಡೆಸಿದರು. ವಿಮಾನಪಡೆಯಿಂದ ಮುಕ್ತಗೊಳಿಸಿದಾಗ ಬೇರೆ ಉದ್ಯೋಗವಕಾಶ ಒದಗಿಸಬೇಕು ಎಂದು ಒತ್ತಾಯಿಸಿದರು. ಈ ಅವಧಿಯ ಅತ್ಯಂತ ಗಮನ ಸೆಳೆದ ಘಟನೆಯೆಂದರೆ ನಾವಿಕ ಪಡೆಯ ಸೈನಿಕರು ಮುಂಬೈಯಲ್ಲಿ ಫೆಬ್ರವರಿ 1946ರಲ್ಲಿ ದಂಗೆಯೆದ್ದರು. ಅವರು ಯೂನಿಯನ್ ಜಾಕ್ ಬಾವುಟವನ್ನಿಳಿಸಿ ಅದರ ಸ್ಥಾನದಲ್ಲಿ ಕಾಂಗ್ರೆಸ್, ಮುಸ್ಲಿಂ ಲೀಗ್ ಮತ್ತು ಕೆಂಬಾವುಟವನ್ನು ಹಾರಿಸಿದರು. ಈ ನಾವಿಕ ಬಂಡಾಯಗಾರರಿಗೆ ನಾಗರಿಕರ ಸೌಹಾರ್ದತೆಯಂತೂ ಬ್ರಿಟಿಶ್ ಆಡಳಿತದಲ್ಲಿ ಆತಂಕವನ್ನೇ ಮೂಡಿಸಿತು. ಈ ನಾವಿಕ ಮತ್ತು ನಾಗರಿಕ ಬಂಡಾಯ ಒಟ್ಟಾಗಿ ನಡೆಯಲು ಸಾಧ್ಯವಾದದ್ದು ಬಹಳ ಮಟ್ಟಿಗೆ ಸಿಪಿಐನ ಪ್ರಯತ್ನದಿಂದಾಗಿಯೇ.


ರಿನ್ ನಾವಿಕರ ದಂಗೆ

ಫೆಬ್ರವರಿ 21ರಂದು ಕಮ್ಯುನಿಸ್ಟ್ ಪಕ್ಷದ ಕರೆಗೆ ಓಗೊಟ್ಟು ಮುಂಬೈಯಲ್ಲಿ ಹರತಾಳ ನಡೆದು ದಂಗೆಯೆದ್ದ ನಾವಿಕರಿಗೆ ಸೌಹಾರ್ದ ವ್ಯಕ್ತಪಡಿಸಲಾಯಿತು. ಮರುದಿನ ಮುಂಬೈ ಕಾರ್ಖಾನೆಗಳ ಕಾರ್ಮಿಕರು ಕೆಲಸಮಾಡದೆ ರಿನ್ ನಾವಿಕರ ದಂಗೆಗೆ ಬೆಂಬಲವಾಗಿ ನಡೆದ ಸಭೆ, ಮೆರವಣಿಗೆಗಳಲ್ಲಿ ಭಾಗವಹಿಸಿದರು. ಕಾಮಗಾರ್ ಮೈದಾನದಲ್ಲಿ ಒಂದು ಬೃಹತ್ ಸಭೆ ನಡೆಯಿತು. ಡಾಂಗೆ ಮತ್ತಿತರರು ಅಲ್ಲಿ ಮಾತನಾಡಿದರು. ಮುಂಬೈಯಲ್ಲಿ ಆರಂಭವಾದ ಈ ನಾವಿಕ ಬಂಡಾಯಬೇಗನೆ ಕರಾಚಿ, ಕಲ್ಕತ್ತಾ, ವಿಶಾಖಪಟ್ಟಣ ಮತ್ತಿತರ ಬಂದರುಗಳಿಗೂ ಹರಡಿತು. ಅಲ್ಲೂ ಬಂಡಾಯಗಾರರಿಗೆ ತಕ್ಷಣವೇ ಜನರಿಂದ ಬೆಂಬಲ ದೊರೆಯಿತು. ನನಗಿನ್ನೂ ನೆನಪಿದೆ ಬೆಂಗಾಲ್-ಅಸ್ಸಾಂ ರೈಲ್ವೆಯ ನೌಕರರು ರಿನ್ ಬಂಡಾಯಗಾರರು 24 ಗಂಟೆಗಳೊಳಗೆ ಶರಣಾಗತರಾಗದಿದ್ದರೆ ಬಾಂಬ್ ಹಾಕುವುದಾಗಿ ಬ್ರಿಟಿಶ್ ಸರ್ಕಾರ ಬೆದರಿಸಿದಾಗ ಅದನ್ನು ಪ್ರತಿಭಟಿಸಿ ಮುಷ್ಕರ ನಡೆಸಬೇಕೆಂಬ ಕರೆಗೆ ಹುಮ್ಮಸ್ಸಿನಿಂದ ಓಗೊಟ್ಟರು. ಆಗ ಮಹಮ್ಮದ್ ಇಸ್ಮಾಯಿಲ್ ಮತ್ತು ನಾನು ಆಳವಾಗಿ ತೊಡಗಿಸಿಕೊಂಡಿದ್ದ ಬೆಂಗಾಲ್-ಅಸ್ಸಾಂ ರೈಲ್ವೇಮೆನ್ಸ್ ಯೂನಿಯನ್ ಸಂಘಟಿಸಿದ ಮೊದಲ ರಾಜಕೀಯ ಮುಷ್ಕರ ಇದಾಗಿತ್ತು. ಸೈನಿಕರು ಮತ್ತು ನಾಗರಿಕರ ಅತೃಪ್ತಿಯ ಈ ಸಮ್ಮೇಳನ ನಮ್ಮ ಭವ್ಯ ಸ್ವಾತಂತ್ರ್ಯ ಹೋರಾಟದ ಒಂದು ಚಾರಿತ್ರಿಕ ಅಧ್ಯಾಯ. ದುರದೃಷ್ಟವಶಾತ್, ಕಾಂಗ್ರೆಸ್ಸಿನ ಪ್ರಬಲ ಮುಖಂಡತ್ವ ಈ ಕ್ರಾಂತಿಕಾರಿ ಸನ್ನಿವೇಶವನ್ನು ಇಷ್ಟ ಪಡಲಿಲ್ಲ. ಗಾಂಧಿ ಹಿಂಸಾಚಾರವನ್ನು ಖಂಡಿಸಿದರು. ಮೌಲಾನಾ ಆಝಾದ್ ಮತ್ತು ಸರ್ದಾರ್ ಪಟೇಲ್ ವಯಕ್ತಿಕವಾಗಿ ಮಧ್ಯ ಪ್ರವೇಶಿಸಿ ನಾವಿಕರನ್ನು ಮುಷ್ಕರ ಹಿಂತೆಗೆದುಕೊಳ್ಳುವಂತೆ ಒತ್ತಾಯಿಸಿದರು. ಜಿನ್ನಾರಿಗೆ ಕೂಡಾ ರಿನ್ ಬಂಡಾಯದಿಂದ ಉಂಟಾದ ರಾಜಕೀಯ ವಾತಾವರಣ ಇಷ್ಟವಾಗಿರಲ್ಲಿಲ್ಲ.


ರಿನ್ ನಾವಿಕರ ಬೆಂಬಲವಾಗಿ ಬಾಂಬೆ ಕಾರ್ಮಿಕರ ಹೋರಾಟ

ರೈತರ ಸಮರಶೀಲತೆ

ಸ್ವಾತಂತ್ರ್ಯದ ಮೊದಲಿನ ಈ ಅಂತಿಮ ಘಟ್ಟದಲ್ಲಿ ರೈತರಲ್ಲಿನ ಅತೃಪ್ತಿಯೂ ತಾರಕಕ್ಕೇರಿತು. ಇದರ ಹಿಂದಿದ್ದ ಪ್ರಧಾನ ಚಾಲಕ ಶಕ್ತಿಯೆಂದರೆ ಸಿಪಿಐ. 1946-47ರಲ್ಲಿ ಬಂಗಾಳ ಪ್ರದೇಶ ಕಿಸಾನ್ ಸಭಾ ತೇಭಾಗ್ ಆಂದೋಲನವನ್ನು ಸಂಘಟಿಸಿತು. ಪಾಲು ಬೆಳೆಗಾರರಿಗೆ ಬೆಳೆಯ ಮೂರನೇ ಎರಡು ಪಾಲು ಸಿಗಬೇಕೆಂಬ ಬೇಡಿಕೆಯ ಮೇಲೆ ಈ ಹೋರಾಟ ನಡೆಯಿತು. "ನಿಜ್ ಕಾಮಾರೆ, ಧಾನ್ ತೋಲೋ" (ನಿಜ ಕೆಲಸಕ್ಕೆ ಧಾನ್ಯ ಅಳೆ), 'ಲಂಗರ್ ಜಾಮ್ ಜಾಯೇ ತಾಕ್' ಮತ್ತು 'ಜಮೀನ್ದಾರಿ ಪ್ರಥಾ ಧ್ವಂಸ ಹೌಕ್" (ಜಮೀನ್ದಾರಿ ಪದ್ಧತಿ ಧ್ವಂಸವಾಗಬೇಕು) ಎಂಬುದು ಆಗ ಬಂಡಾಯಗಾರರ ಸಮರ ಕರೆಯಾಗಿತ್ತು. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಅಗಸ್ಟ್ 1946 ರಲ್ಲಿ ಕೋಮುವಾದಿ ಅತಿರೇಕ ಕಲ್ಕತ್ತಾ ಮತ್ತು ನೌಖಾಲಿಯನ್ನು ತಟ್ಟಿ ಜಾತ್ಯಾತೀತ ರಾಜಕೀಯವನ್ನು ಕುಂಠಿತಗೊಳಿಸಿದ್ದರೂ ಅದು




ತೇಭಾಗ ಆಂದೋಲನದಲ್ಲಿ ಮಹಿಳೆಯರು 1946

ಅಲ್ಪಕಾಲಕ್ಕೆ ಮಾತ್ರ, ದೀರ್ಘಾವಧಿಯಲ್ಲಿ ಪ್ರತಿಭಟನಾ ರಾಜಕೀಯವನ್ನು ನಿರ್ವಿಣ್ಣಗೊಳಿಸಲು ಅದಕ್ಕೆ ಸಾಧ್ಯವಾಗಲಿಲ್ಲ. ಸೂಕ್ತ ಐತಿಹಾಸಿಕ ಘಟ್ಟದಲ್ಲಿ ಅದು ಮತ್ತೆ ಕಾಣಿಸಿಕೊಂಡಿತು.

ಅದೇ ಅವಧಿಯಲ್ಲಿ ಬಂಗಾಳದ ಹೊರಗೆ ಇನ್ನೆರಡು ರೈತ ಬಂಡಾಯಗಳು ನಡೆದವು. 1946 ರಲ್ಲಿ ತಿರುವಾಂಕೂರಿನಲ್ಲಿ ಕಮ್ಯುನಿಸ್ಟ್ ಸ್ಫೂರ್ತಿಯಿಂದ ಪೋನ್ನಪ್ರ-ವಾಯಿಲಾರ್ ಬಂಡಾಯ ನಡೆಯಿತು. ಅದೇ ವೇಳೆಗೆ ತೆಲಂಗಾಣದಲ್ಲಿ ರೈತರು ಉಳಿಗಮಾನ್ಯ ಶೋಷಣೆಯ ವಿರುದ್ಧ ಕೆಂಬಾವುಟದ ಅಡಿಯಲ್ಲಿ ಒಟ್ಟಾಗಿ ಬಂಡೆದ್ದರು. ಈ ಬಂಡಾಯ ಜುಲೈ 1946 ರಿಂದ ಅಕ್ಟೋಬರ್ 1951ರ ವರೆಗೆ 5 ವರ್ಷ ನಡೆಯಿತು. ಆಧುನಿಕ ಭಾರತದ ಅತಿ ದೀಘಾವಧಿಯ ಗೆರಿಲ್ಲಾ ರೈತ ಬಂಡಾಯವಿದು. ಕನಿಷ್ಟ 4,000 ರೈತ ಜೀವಿಗಳು ಇದರಲ್ಲಿ ಬಲಿಯಾದವು. ಒಂದು ಉತ್ತಮ ಸಾಮಾಜಿಕ ವ್ಯವಸ್ಥೆಗಾಗಿ ನಡೆದ ಇಂತಹ ರೈತ ಬಂಡಾಯಗಳು ನಮಗೆ ಮನುಷನಿಂದ ಮನುಷ್ಯ ಶೋಷಣೆಯಿಲ್ಲದ ಸಮಾಜ ನಿರ್ಮಾಣದಲ್ಲಿ ಸದಾ ಸ್ಫೋರ್ತಿದಾಯಕ.



ತೆಲಂಗಾಣ – ಸಶಸ್ತ್ರ ಬಂಡಾಯ



ಪುನ್ನಪ್ರ-ವಯಲಾರ್ ಬಂಡಾಯದ ನಾಯಕರು 1946

ವಿಭಜನೆಯ ರಾಜಕೀಯ

ಇಲ್ಲಿ ನಾನು ಹೇಳಬಯಸುವ ಸಂಗತಿಯೆಂದರೆ ಕಮ್ಯುನಿಸ್ಟರು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ರಾಷ್ಟ್ರೀಯವಾದಿ ಹಾಗು ಎಡ ಪ್ರೇರಿತ ಪ್ರತಿಭಟನಾ ರಾಜಕೀಯವನ್ನು ಪರಸ್ಪರ ಒಂದು ಗೂಡಿಸಲು ಪ್ರಯತ್ನಿಸುವ ಮೂಲಕ ಒಂದು ಮಹತ್ವದ ಪಾತ್ರವನ್ನು ವಹಿಸಿದರು ಎಂಬುದು. ಅಲ್ಲದೇ ಕಮ್ಯುನಿಸ್ಟರು ಸತತವಾಗಿ ಹಿಂದೂ-ಮುಸ್ಲಿಂ ಐಕ್ಯತೆಗಾಗಿ ಹಾಗೂ ಒಂದು ಜಾತ್ಯಾತೀತ ರಾಜಕೀಯ ಸಂಸ್ಕೃತಿಯನ್ನು ಪೋಷಿಸಲು ಸದಾ ಶ್ರಮಿಸಿದರು. 1926 ರ ರಷ್ಟು ಹಿಂದೆಯೇ ಹಿಂದೂ-ಮುಸ್ಲಿಂ ದಂಗೆಗಳ ವಿರುದ್ಧ ಹಾಗೂ ಕೋಮು ಐಕ್ಯತೆಗಾಗಿ ಸಿಪಿಐ ಒಂದು ಪ್ರನಾಳಿಕೆಯನ್ನು ಬಿಡುಗಡೆ ಮಾಡಿತ್ತು. 1946 ರ ಕಲ್ಕತ್ತಾ ಹಾಗೂ ನೌಕಾಲಿಗಳ ಕೋಮು ಕಾಂಡ ತಾರಕಕ್ಕೇರಿದಾಗ ಒಂದು ದೃಢ ಜಾತ್ಯಾತೀತ ನಿಲುವು ತಳೆದ ಪಕ್ಷವೆಂದರೆ ಸಿಪಿಐ. ಕಲ್ಕತ್ತೆಯಲ್ಲಿ ಕಮ್ಯುನಿಸ್ಟ ನೇತೃತ್ವದ ಟ್ರಾಮ್‌ವೇ ಕಾರ್ಮಿಕರ ಸಂಘ ಕೋಮು ದಳ್ಳುರಿಯನ್ನು ಎದುರಿಸುವಲ್ಲಿ ಒಂದು ಸಕಾರಾತ್ಮಕ ಪಾತ್ರ ವಹಿಸಿದ್ದರೆ, ಹಳ್ಳಿಗಳಲ್ಲಿ ಕಿಸಾನ್ ಸಭಾಗಳು ಕೋಮು ವಿಷ ಹರಡದಂತೆ ಎಚ್ಚರದಿಂದಿದ್ದವು. ಸ್ವಾತಂತ್ರ್ಯದ ಮುನ್ನಾದಿನ ಗಾಂಧೀಜಿ ಕಲ್ಕತ್ತೆಗೆ ಕೋಮು ಭಾವೋದ್ವೇಗವನ್ನು ಶಮನ ಗೊಳಿಸಲೆಂದು ಬಂದಾಗ ನಾವು ಅವರನ್ನು ಭೇಟಿಯಾಗಿ ಅವರ ಸಲಹೆಯಂತೆ ಶಾಂತಿ ಮೆರವಣಿಗೆಗಳನ್ನು ಸಂಘಟಿಸಿದೆವು.

ಆದರೂ ನಾವು ದೇಶದ ವಿಭಜನೆಯನ್ನು ತಡೆಯುವಲ್ಲಿ ವಿಫಲವಾದೆವೇಕೆ ಎಂಬ ಪ್ರಶ್ನೆ ಉಳಿದೇ ಉಳಿಯುತ್ತದೆ ನಿಜ, ಬ್ರಿಟಿಶ್ ಸರ್ಕಾರದ ಕೈವಾಡ ಇದರಲ್ಲಿ ಖಂಡಿತಾ ಇತ್ತು. ಯುದ್ಧಾನಂತರದ ತೀವ್ರಗಾಮಿ ಹಾಗೂ ಸಮರಧೀರ ಅಲ್ಲೋಲಕಲ್ಲೋಲ ಸಶಸ್ತ್ರ ಪಡೆಗಳನ್ನು ತಟ್ಟಿದಾಗ ಅವುಗಳಲ್ಲಿ ಕಮ್ಯುನಿಸ್ಟ ಚಟುವಟಿಕೆಗಳು ಹರಡುತ್ತಿರುವುದನ್ನು ಕಂಡ ಬ್ರಿಟಿಶ್ ಆಡಳಿತ ಗಾಬರಿಯಾಗಿತ್ತು. ವೈಸರಾಯ್ ವೇವಲ್‌ನ 'ಸ್ಮರಣೆ'ಗಳು ಹಾಗೂ ಹಿರಿಯ ಅಧಿಕಾರಶಾಹಿ ವಿ.ಪಿ. ಮೆನನ್‌ರ ತಪ್ಪೊಪ್ಪಿಗೆಗಳಿಂದ ಇದು ಸ್ಪಷ್ಟವಾಗುತ್ತದೆ. ಅಂದರೆ ಕಮ್ಯುನಿಸ್ಟ ಮತ್ತು ಎಡ ಆಂದೋಲನ ಒಂದು ಪರ್ಯಾಯ ಮುಖಂಡತ್ವ

ನೀಡುವಷ್ಟು ಬಲಶಾಲಿಯಾಗಿತ್ತು. ಅದೇ ವೇಳೆಗೆ ಕಾಂಗ್ರೆಸ್ ಪಕ್ಷಕ್ಕೆ ಹಿಂದೂಗಳು ಮತ್ತು ಮುಸ್ಲಿಮರನ್ನು ಒಂದುಗೂಡಿಸಿ ಒಂದು ದೀರ್ಘಕಾಲದ ಸಾಮೂಹಿಕ ಹೋರಾಟಕ್ಕೆ ನೇತೃತ್ವ ನೀಡುವ ವಿಶ್ವಾಸ ಉಳಿದಿರಲಿಲ್ಲ. ಅದಲ್ಲದೇ ತೀವ್ರಗಾಮಿ ಮತ್ತು ಎಡ ರಾಷ್ಟ್ರೀಯವಾದಿಗಳಿಗೆ ದೊರೆತ ಖ್ಯಾತಿಯಿಂದ ಅದಕ್ಕೆ ಗಾಬರಿಯಾಗಿತ್ತು. ಆದ್ದರಿಂದ ಬ್ರಿಟಿಶ್ ಸರಕಾರದ ಸಂಚುಗಳಿಗೆ ಅದು ಬಲಿ ಬಿದ್ದಿತು. ಈ ನಡುವೆ ಮುಸ್ಲಿಂ ಲೀಗ್ ವಿಭಿನ್ನ ಕಾರಣಗಳಿಂದಾಗಿ ಮುಸ್ಲಿಮರ ದೊಡ್ಡ ವಿಭಾಗಗಳ ನಡುವೆ ಒಂದು ಬಲಿಷ್ಟ ಶಕ್ತಿಯಾಗಿ ಬಿಟ್ಟಿತ್ತು. ಅದು ಸನ್ನಿವೇಶದ ಪ್ರಯೋಜನ ಪಡೆದು ಬ್ರಿಟಿಶ್ ಸರಕಾರದೊಂದಿಗೆ ದೇಶದ ವಿಭಜನೆ ಕುರಿತಂತೆ ಒಂದು ವ್ಯವಹಾರ ಕುದುರಿಸಿತು. ಇವೆಲ್ಲದರ ಫಲವೇ 15 ಆಗಸ್ಟ್ 1947 ರಂದು ಆದ ಅರ್ಧಂಬರ್ಧ ಇತ್ಯರ್ಥ.

ಸ್ವಾತಂತ್ರ್ಯದ ನಂತರ

14–15 ಆಗಸ್ಟ್ ಮಧ್ಯರಾತ್ರಿ ಆದ ಅಧಿಕಾರದ ವರ್ಗಾವಣೆ ಒಂದು ಅಪೂರ್ಣ ವರ್ಗಾವಣೆಯಾಗಿತ್ತು. ಏಕೆಂದರೆ ರಾಜಕೀಯ ಪರಿವರ್ತನೆಯ ಜೊತೆಗೆ ಒಂದು ತೀವ್ರಗಾಮಿ ಸಾಮಾಜಿಕ-ಆರ್ಥಿಕ ಪರಿವರ್ತನೆ ನಡೆಯಲಿಲ್ಲ. ಹಲವು ರೀತಿಯಲ್ಲಿ ಆಡಳಿತ ವ್ಯವಸ್ಥೆ ವಸಾಹತುಶಾಹಿ ಯುಗದ ಮುಂದುವರಿಕೆಯನ್ನೇ ಉಳಿಸಿಕೊಂಡಿತು. ಹೊಸ ಆಳುವ ಶಕ್ತಿಯಾದ ಕಾಂಗ್ರೆಸ್ ದೇಶವನ್ನು ದೊಡ್ಡ ಭೂ ಮಾಲಕರು ಮತ್ತು ದೇಶೀ ಬಂಡವಾಳಶಾಹಿಗಳ ಹಿತಾಸಕ್ತಿಗಳಿಗೆ ಅನುಸಾರವಾಗಿಯೇ ಆಳಲಾರಂಭಿಸಿತು. ಇದರಿಂದಾಗಿ ವರ್ಗ ಧ್ರುವೀಕರಣ ನಗರಗಳಲ್ಲೂ, ಗ್ರಾಮಾಂತರಗಳಲ್ಲೂ ತೀವ್ರಗೊಂಡಿತು. ಭಾರತದ ರಾಜಕೀಯ ಹೆಚ್ಚೆಚ್ಚಾಗಿ ಕೇಂದ್ರೀಕರಣದ ದನಿಯನ್ನು ಹೊರಡಿಸಲಾರಂಭಿಸಿತು.




ಕೆಂಪು ಕೋಟೆಯ ಮೇಲೆ ರಾಷ್ಟ್ರ ಧ್ವಜ 1947

ಇದರಿಂದ ಗಂಭೀರ ಪ್ರಾದೇಶಿಕ ಅಸಮಾನತೆ ಉಂಟಾಯಿತು. ಒಂದು ನಾಗರಿಕ ಸಮಾಜಕ್ಕೆ ಅಗತ್ಯವಾದ ಮೂಲಭೂತ ಪರಿಸ್ಥಿತಿಗಳನ್ನು ನಿರ್ಮಿಸಲು ಭಾರತೀಯ ಪ್ರಭುತ್ವಕ್ಕೆ ಸಾಧ್ಯವಾಗಲಿಲ್ಲ. ನಿಜ ಸ್ಥಿತಿಯಂದರೆ ಬೇರೆ ರೀತಿಯಲ್ಲಿ ಪ್ರಜಾಸತ್ತಾತ್ಮಕವಾದ ಸಂವಿಧಾನದ ಕೆಲವು ಅಂಶಗಳನ್ನು ಬಳಸಿ ಇಂದಿರಾಗಾಂಧಿ ತುರ್ತು ಪರಿಸ್ಥಿತಿ ಹೇರಿದರು. ಎಲ್ಲಾ ಹಕ್ಕುಗಳನ್ನು ಮೂಲೆಗುಂಪು ಮಾಡಲಾಯಿತು. ಆದರೆ ಜನ ಪ್ರತಿರೋಧವನ್ನು ಮುಂದುವರಿಸಿದರು. ಜಯಪ್ರಕಾಶ್ ನಾರಾಯಣ್ ತುರ್ತು ಪರಿಸ್ಥಿತಿಯ ವಿರುದ್ಧ ಜನರನ್ನು ಎಬ್ಬಿಸುವಲ್ಲಿ ಒಂದು ಮಹತ್ವದ ಪಾತ್ರ ವಹಿಸಿದರು. ನಾವು ಈ ಅವಧಿಯಲ್ಲಿ ಅವರೊಡನೆ ಸಂಪರ್ಕ ಇಟ್ಟುಕೊಂಡೆವು, ಅವರಿಗೆ ನೆರವಾದೆವು. ಇದೇ ವೇಳೆಗೆ ಕೇಂದ್ರದಲ್ಲಿನ ಕ್ರಾಂಗ್ರೆಸ್‌ನ ಸರಕಾರಗಳು ಧಾರ್ಮಿಕ ಮೂಲಭೂತವಾದದ, ಸಂಕುಚಿತವಾದದ ಶಕ್ತಿಗಳಿಗೆ ನಿರ್ಣಾಯಕ ಜಾತ್ಯಾತೀತ ಹೊಡೆತ ನೀಡುವಲ್ಲಿ ವಿಫಲವಾದವು. ಇದರಿಂದಾಗಿ ಅವೀಗ ಭಯಾನಕ ರೂಪ ತಳೆದು ನಿಂತಿವೆ. ಸ್ವಾವಲಂಬನೆ ಕುರಿತ ನೆಹರೂ ನಿಲುಮೆಯನ್ನು ಕೇಂದ್ರದ ಕ್ರಾಂಗ್ರೆಸ್ ಸರಕಾರ ವಿಶ್ವ ಬಂಡವಾಳಶಾಹಿಯ ಒತ್ತಡಗಳಿಗೆ ತಲೆಬಾಗಿ ಹ್ರಾಸಗೊಳಿಸಿತು. ಹೊಸ ಆರ್ಥಿಕ ನೀತಿಗಳ ಹಿನ್ನೆಲೆಯಲ್ಲಿ ಬಹುರಾಷ್ಟ್ರೀಯ ಕಂಪನಿಗಳಿಗೆ ಮಹಾದ್ವಾರವನ್ನೇ ತೆರೆದಿಡಲಾಯಿತು.

ಇದರರ್ಥ ಕಳೆದ ಐವತ್ತು ವರ್ಷಗಳಲ್ಲಿ ಭಾರತ ವಿಶ್ವದ ದೇಶಗಳ ಸಮೂಹದಲ್ಲಿ ಏನೇನೂ ಸಾಧಿಸಲಿಲ್ಲವೆಂದೇನೂ ಅಲ್ಲ. 1940ರ ದಶಕದಲ್ಲಿ ವಸಾಹತುವಾದದ ಕುಸಿತದಲ್ಲಿ ಸ್ವಾತಂತ್ರ್ಯಗಳಿಸಿದ ದೇಶಗಳಲ್ಲೆಲ್ಲಾ ಭಾರತ ಒಂದು ಸ್ಥಿರ ಪ್ರಜಾಸತ್ತಾತ್ಮಕ ರಾಜಕೀಯ ವ್ಯವಸ್ಥೆಯನ್ನು ಉಳಿಸಿಕೊಳ್ಳಲು ಸಾಧ್ಯವಾಗಿದೆ. ಒಂದು ಕೈಗಾರಿಕಾ ತಳಹದಿಯನ್ನು ಕಟ್ಟಲು ಅದಕ್ಕೆ ಸಾಧ್ಯವಾಗಿದೆ. ತಪ್ಪು ಗ್ರಹಿಕೆಯ ಧೋರಣೆಗಳಿಂದಾಗಿ ಕೆಲವು ನಕಾರಾತ್ಮಕ ಲಕ್ಷಣಗಳು ಬೆಳೆದಿವೆ ಎಂಬುದು ಬೇರೆ ಮಾತು. ಕೃಷಿಯಲ್ಲಿ ಉತ್ಪಾದನೆ ಹೆಚ್ಚಿದೆ. ಆದರೆ ಭೂ ಸುಧಾರಣೆಯಿಂದ ಇನ್ನೂ ಹೆಚ್ಚಿನ ಬೆಳವಣಿಗೆ ಸಾಧ್ಯವಿತ್ತು. ಅದರಿಂದ ವಿಶಾಲ ಜನಸಮೂಹಗಳಿಗೂ ಸಹಾಯವಾಗುತ್ತಿತ್ತು. ಅಂತರರಾಷ್ಟ್ರೀಯ ಸಂಬಂಧಗಳಲ್ಲೂ ಭಾರತ ಒಂದು ಗೌರವಪೂರ್ವಕ ಪಾತ್ರ ವಹಿಸಿದೆ. ಅದು ಅಲಿಪ್ತ ಆಂದೋಲನದ ಸ್ಥಾಪಕ ಸದಸ್ಯರಲ್ಲಿ ಒಂದು. ಅದು ಅಂತರರಾಷ್ಟ್ರೀಯ ವಿವಾದಗಳನ್ನು ಇತ್ಯರ್ಥ ಪಡಿಸುವಲ್ಲಿ ಮಧ್ಯ ಪ್ರವೇಶಿಸಿದೆ ಮುಖ್ಯವಾಗಿ ವಿಶ್ವಸಂಸ್ಥೆಯ ಮೂಲಕ.

ಪರ್ಯಾಯ ದಾರಿ ಎಡ ಪಕ್ಷಗಳ ಪಾತ್ರ


ಆದರೂ ಸ್ವಾತಂತ್ರ್ಯ ಹೋರಾಟಗಾರರು ಯಾವ ಒಂದು ಉತ್ತಮ ಭವಿಷ್ಯದ, ಸಮಾನತೆಯ ವ್ಯವಸ್ಥೆಯ ಕನಸು ಹೊತ್ತು ತ್ಯಾಗ ಬಲಿದಾನಗಳನ್ನು ನೀಡಿದರೋ ಆ ಕನಸು ನನಸಾಗದೇ ಉಳಿದಿದೆ. ನಮಗೀಗ ಬೇಕಾಗಿರುವುದು ರಾಷ್ಟ್ರ ಕಟ್ಟುವ ಒಂದು ಪರ್ಯಾಯ ಕಾರ್ಯತಂತ್ರ. ಕೇಂದ್ರ-ರಾಜ್ಯ ಸಂಬಂಧಗಳ ಪುನರ್‌ರಚನೆ, ರಾಜಕೀಯ ವ್ಯವಸ್ಥೆಯಲ್ಲಿ ಹೆಚ್ಚಿನ ಪ್ರಜಾ ಪ್ರಭುತ್ವೀಕರಣ, ಸಾಮಾಜಿಕ-ಆರ್ಥಿಕ ಪಕ್ಷಪಾತದ ನಿರ್ಮೂಲನೆ ಹಾಗೂ ನಮ್ಮ ಬಹುಸ್ವರೂಪಿ ಸಾಂಸ್ಕೃತಿಕ ಪರಂಪರೆಯ ಉತ್ತಮ ಅಂಶಗಳೆಲ್ಲಾ ಅರಳುವ ಒಂದು ಅವಕಾಶ. ಇವೆಲ್ಲಾ ಇರುವ ಪರ್ಯಾಯ ಕಾರ್ಯತಂತ್ರ ಬೇಕಾಗಿದೆ. ಪಶ್ಚಿಮ ಬಂಗಾಳದಲ್ಲಿ ಎಡರಂಗ ಸರಕಾರ ತನ್ನ ಸೀಮಿತ ಅಧಿಕಾರಗಳೊಂದಿಗೆ ಕಳೆದ 35 ವರ್ಷಗಳಲ್ಲಿ ಇಂತಹ ಒಂದು ಆಡಳಿತ ವ್ಯವಸ್ಥೆಯ ಪ್ರಯೋಗ ನಡೆಸುತ್ತಿದೆ. ಈ ಮೂಲಕ ಈಗಿರುವ ಸಂವಿಧಾನಿಕ ಚೌಕಟ್ಟಿನೊಳಗೆ ಜನಗಳ ಬೇಡಿಕೆಗಳಲ್ಲಿ ಕೆಲವನ್ನು ಪೂರೈಸಲು ಸಾಧ್ಯವಾಗಿದೆ. ಅವುಗಳನ್ನು ಅಧಿಕಾರ ಸಂಪನ್ನಗೊಳಿಸಿ ನ್ಯಾಯವನ್ನು ಜನರ ಮನೆ ಬಾಗಿಲಿಗೆ ತಂದು, ಮೂಲಭೂತ ಭೂಸುಧಾರಣೆಗಳನ್ನು ಆರಂಭಿಸಿ, ಸ್ಥಳೀಯ ಸ್ವಯಮಮಾಡಳಿತವನ್ನು ಬಲಗೊಳಿಸಿ ರಾಜ್ಯದ ಅಗತ್ಯಗಳಿಗನುಗುಣವಾಗಿ ಕೈಗಾರೀಕರಣವನ್ನು ಪ್ರೋತ್ಸಾಹಿಸಿ, ಅದೇ ವೇಳೆಗೆ ಕಾರ್ಮಿಕ ವರ್ಗದ ಹಿತಾಸಕ್ತಿಗಳನ್ನು ಬಲಿಗೊಡದೆ ಎಡರಂಗ ಸರಕಾರ ಭಾರತದ ಆಡಳಿತಕ್ಕೆ ಒಂದು ಹೊಸ ಮಾದರಿಯನ್ನು ಮುಂದಿಟ್ಟಿದೆ. ಕಾಂಗ್ರೆಸ್ ಪ್ರಾಬಲ್ಯ ಕೊನೆಗೊಂಡು ಜನಗಳಲ್ಲಿ ವಿಶ್ವಾಸ ಕಳಕೊಂಡು, ತನ್ನ ಧೋರಣೆಗಳನ್ನು ಬದಲಿಸಲಾರದೆ ಹಾಗೂ ಕೋಮುವಾದಿ ಶಕ್ತಿಗಳೊಂದಿಗೆ ರಾಜಿ ಮಾಡಿಕೊಳ್ಳುತ್ತಿರುವ ಸಂದರ್ಭದಲ್ಲಿ ಅಖಿಲ ಭಾರತ ಹಾಗೂ ರಾಜ್ಯಗಳಲ್ಲಿ ಜನಪ್ರಿಯವಾಗಿರುವ ಪಕ್ಷಗಳ ಒಂದು ಮೂರನೇ ರಂಗ ಮೂಡಿಬರುವುದು ಭಾರತೀಯ ರಾಜಕೀಯದಲ್ಲಿ ಅನಿವಾರ್ಯವಾಯಿತು. ಬಿಜೆಪಿಯಂತಹ ಕೋಮುವಾದಿ ಪಕ್ಷದ ಉದಯದಿಂದಾಗಿ ಇದು ಇನ್ನಷ್ಟು ಅವಶ್ಯಕವಾಗಿದೆ. ಈ ಅಗತ್ಯವನ್ನು ಪೂರೈಸಬೇಕಂದರೆ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳನ್ನು ಬಲಪಡಿಸುವುದೂ ಅಗತ್ಯ. ಸಿಪಿಐ(ಎಂ) ಮತ್ತು ಇತರ ಎಡ ಪಕ್ಷಗಳಿಗೆ ಈಗ ಕೇಂದ್ರದಲ್ಲಿ ಒಂದು ಜಾತ್ಯಾತೀತ ಮತ್ತು ಪ್ರಜಾಸತ್ತಾತ್ಮಕ ಪರ್ಯಾಯವನ್ನು ರೂಪಿಸುವಲ್ಲಿ ನೆರವಾಗಲು ಒಂದು ಸಮಾನ ಕನಿಷ್ಟ ಕಾರ್ಯಕ್ರಮದ ಮೂಲಕ ಈ ಪರ್ಯಾಯವನ್ನು ರೂಪಿಸಿ ದೇಶಾದ್ಯಂತ ಕೋಮುವಾದ ಮತ್ತು ಮೂಲಭೂತವಾದದ ವಿರುದ್ಧ ಒಂದು ಸೈದ್ಧಾಂತಿಕ ಸಮರ ನಡೆಸುವ ಅಗತ್ಯವಿದೆ. ಭಾರತದ ಸ್ವಾತಂತ್ರ್ಯ ಹೋರಾಟ, ಅದರಲ್ಲೂ ಮುಖ್ಯವಾಗಿ 1942-44ರ ಕಷ್ಟಕರ ಅವಧಿಯ ಅನುಭವ ನಮಗೊಂದು ಪಾಠ ಕಲಿಸಿದೆ. ಅದೇನೆಂದರೆ ಕೆಲವೊಮ್ಮೆ ತಾತ್ಕಾಲಿಕ ಹಿನ್ನಡೆಯಾದರೂ ಜನಗಳೊಂದಿಗೆ ದೃಢವಾಗಿ ನಿಂತರೆ ಕೊನೆಗೂ ನಮ್ಮ ರಾಜಕೀಯ ನೆಲೆಯನ್ನು ಉಳಿಸಿಕೊಳ್ಳಲು ಸಾಧ್ಯ. ಭಾರತವೀಗ ತನ್ನ ಇತಿಹಾಸದ ಒಂದು ಹೊಸ ಅಧ್ಯಾಯವನ್ನು ಆರಂಭಿಸಿರುವ ಸಂಧಿಕಾಲದಲ್ಲಿ ಈ ರಾಜಕೀಯ ತತ್ವವನ್ನು ನಾವು ನೆನಪಿಸಿಕೊಳ್ಳಬೇಕು. ○



ಕೇರಳ ಮತ್ತು ಪಶ್ಚಿಮ ಬಂಗಾಳದಲ್ಲಿ ಕಮ್ಯುನಿಸ್ಟ ಪಕ್ಷದ ಸರ್ಕಾರ ರಚನೆ

ಜಗತ್ತಿನ ಯಾವುದೇ ಮೂಲೆಯಲ್ಲಿ ನಡೆಯುವ ಅನ್ಯಾಯವನ್ನು ನೀನು ಪ್ರತಿಭಟಿಸುವುದಾದರೆ ಆಗ ನೀನು ನನ್ನ ಸಂಗಾತಿ.

ಚೆ-ಗುವಾರ



ಭಾರತೀಯ ಸ್ವಾತಂತ್ರ್ಯ

ವಾಸ್ತವವಾದಿ, ಶಾಮೀಲುವಾದಿ ಮತ್ತು ಪಂಥವಾದಿ ಕಣ್ಣೋಟಗಳು

– ವಿ.ಜೆ.ಕೆ. ನಾಯರ್



'ಯಾರಿಗೆ ಬಂತು ನಲ್ವತ್ತೇಳರ ಸ್ವಾತಂತ್ರ್ಯ' ಎಂಬುದು ಜನಪರವಾಗಿ ಯೋಚಿಸುವವರು ಸಾಮಾನ್ಯವಾಗಿ ಕೇಳುವ ಪ್ರಶ್ನೆ. ಅಗಸ್ಟ್ 15, 1947 ರಂದು ಕಮ್ಯುನಿಸ್ಟರು ಇದನ್ನು 'ಸ್ವಾತಂತ್ರ್ಯ' ಎನ್ನುವ ಬದಲು 'ಅಧಿಕಾರದ ಹಸ್ತಾಂತರ' ಎಂದು ಕರೆದರು. ಆದರೆ ನಂತರ ಭಾರತಕ್ಕೆ ಅಂದು ನಿಜವಾಗಿಯೂ ಸ್ವಾತಂತ್ರ್ಯ ಸಿಕ್ಕಿತೇ ಎಂಬ ಬಗ್ಗೆ, ಅದಕ್ಕೆ ಸಂವಾದಿಯಾಗಿ ಅಂದಿನಿಂದ ಅಧಿಕಾರ ನಡೆಸುತ್ತಿರುವವರು ಯಾರು ಎಂಬ ಬಗ್ಗೆ , ಅವರ ವರ್ಗಸ್ವರೂಪದ ಬಗ್ಗೆ ಕಮ್ಯುನಿಸ್ಟ್ ಆಂದೋಲನದೊಳಗೇ ಮೂರು ನಿಲುವುಗಳು ಮೂಡಿಬಂದವು. ಇವುಗಳ ಹಿನ್ನೆಲೆ ಹಾಗೂ ಈ ನಿಲುವುಗಳ ಪರಿಣಾಮಗಳನ್ನು ಈ ಲೇಖನದಲ್ಲಿ ಪರಿಶೀಲಿಸಲಾಗಿದೆ.

ಪ್ರೀತಿಯಿಂದ 'ಎಕೆಜಿ'ಎಂದು ಕರೆಯಲಾಗುವ ಕಾಮ್ರೇಡ್ ಎ.ಕೆ. ಗೋಪಾಲನ್.


ಅಗಸ್ಟ್ 14/15ರ ಆ ಮಧ್ಯರಾತ್ರಿಯ ಕ್ಷಣದಲ್ಲಿ ಯೂನಿಯನ್ ಜಾಕ್ ಬಾವುಟವನ್ನು ಕೆಳಗಿಳಿಸಿ ತ್ರಿವರ್ಣ ಬಾವುಟವನ್ನು ಮೇಲೇರಿಸುತ್ತಿದ್ದಂತೆ, ಜವಹರಲಾಲ್ ನೆಹರೂರವರು "ಅದೃಷ್ಟದೊಂದಿಗೆ ಸಮಾಗಮ"ದ ಭಾಷಣ ಮಾಡುತ್ತಿದ್ದಂತೆ, ಮಹಾತ್ಮ ಗಾಂಧಿ ತನ್ನ ಬಳಿ ಈ ಸಂದರ್ಭದಲ್ಲಿ ನೀಡಲು ಯಾವುದೇ ಸಂದೇಶ ಇಲ್ಲ ಎನ್ನುತ್ತಾ ನಿರಾಕರಿಸುತ್ತಿದ್ದಂತೆ ಅತ್ತ ಭಾರತೀಯ ಕಮ್ಯುನಿಸ್ಟರು ಈ ಬೆಳವಣಿಗೆಯನ್ನು ಅರ್ಥೈಸಿಕೊಳ್ಳಲು ಪ್ರಯತ್ನಿಸುತ್ತಿದ್ದರು.ಅವರು ಇದನ್ನು 'ಸ್ವಾತಂತ್ರ್ಯ' ಎನ್ನುವ ಬದಲು 'ಅಧಿಕಾರದ ಹಸ್ತಾಂತರ' ಎಂದು ಕರೆದರು.



ತೆಲಂಗಾಣ ಸಶಸ್ತ್ರ ಹೋರಾಟ

ಎಕೆಜಿ ತಮ್ಮ ಆತ್ಮ ಕಥನದಲ್ಲಿ ಸ್ವಾತಂತ್ರ್ಯ ದಿನವನ್ನು ಕಣ್ಣೂರು ಜೈಲಿನಲ್ಲಿ ಆಚರಿಸಿದ ಬಗ್ಗೆ ವರ್ಣಿಸಿದ್ದಾರೆ. ಸ್ವಾತಂತ್ರ್ಯದ ದಿನದಂದು ತಾನು ಮತ್ತು ಇತರ ಸ್ವಾತಂತ್ರ್ಯ ಹೋರಾಟಗಾರರು ಇನ್ನೂ ಜೈಲಿನಲ್ಲಿರುವ ಸಂಗತಿ ಅವರಿಗೆ ಸರಿಕಾಣದಿದ್ದರೂ, ಅವರು ಒಂದು ತ್ರಿವರ್ಣ ಬಾವುಟವನ್ನು ಹೇಗೋ ಪಡೆದು ಅಲ್ಲಿ ತನ್ನೊಂದಿಗಿದ್ದ ಸ್ವಾತಂತ್ರ್ಯ ಹೋರಾಟಗಾರರನ್ನು ಸೇರಿಸಿಕೊಂಡು ಒಂದು ಮೆರವಣಿಗೆ ನಡೆಸಿದರು, ಜೈಲಿನಲ್ಲಿದ್ದ ಇತರರೂ ಅದರಲ್ಲಿ ಸೇರಿಕೊಂಡರು.

ಈ ಕ್ರಿಯೆಯ ಮೂಲಕ ಅವರು ಈ ಬೆಳವಣಿಗೆಯ ಬಗ್ಗೆ ತನ್ನ ನಿಲುವನ್ನು ಪ್ರದರ್ಶಿಸಿದ್ದರು. ಅವರ ಮಟ್ಟಿಗೆ ಇದು ನಿಸ್ಸಂದೇಹವಾಗಿಯೂ ಒಂದು ಆಚರಿಸಬೇಕಾದ ಬೆಳವಣಿಗೆಯಾಗಿತ್ತು, ಅಧಿಕಾರಕ್ಕೆ ಬಂದಿದ್ದ ಕಾಂಗ್ರೆಸ್ ಸರಕಾರ ಕಮ್ಯುನಿಸ್ಟರನ್ನು ಜೈಲಿನಲ್ಲಿಟ್ಟಿದ್ದರೂ ಕೂಡಾ. ದೇಶ ಸ್ವಾತಂತ್ರ್ಯ ಪಡೆಯಿತು ಎಂಬುದು ಅವರಿಗೆ ಮಹತ್ವದ್ದಾಗಿತ್ತು. ದೇಶ ನಿಜವಾಗಿಯೂ ಕ್ರಾಂತಿಕಾರಿಗಳ ಕೈಗೆ ಹೋಗುವುದನ್ನು ತಪ್ಪಿಸಲು ಅಧಿಕಾರದ 'ಹಸ್ತಾಂತರ' ಮಾಡಿದರು ಎಂದು ಸಾಮಾನ್ಯವಾಗಿ ಕಮ್ಯುನಿಸ್ಟರು ಪರಿಗಣಿಸಿದರು.



ಪಿ. ಸಿ. ಜೋಷಿ ಮತ್ತು ಬಿ.ಟಿ. ರಣದಿವೆ

ಹಿನ್ನೆಲೆ

ಇದು ಸಂಭವಿಸಿದ್ದು 1946ರ ರಾಯಲ್ ಇಂಡಿಯನ್ ನೇವಿ ಅಥವಾ ರಿನ್ ಬಂಡಾಯ ಮತ್ತು ತೆಲಂಗಾಣ ಸಶಸ್ತ್ರ ಹೋರಾಟ, ಪುನ್ನಪ್ರ–ವಾಯಲಾರ್, ತೇಭಾಗ ಮುಂತಾದ ಹೋರಾಟಗಳ ಹಿನ್ನೆಲೆಯಲ್ಲಿ. ವಾಸ್ತವ ಸಂಗತಿಯೆಂದರೆ ಎರಡನೆ ಜಾಗತಿಕ ಯುದ್ಧದಲ್ಲಿ ಗೆದ್ದವರು ಮಿತ್ರಕೂಟದವರು, ಬ್ರಿಟಿಶರು ಅದರ ಭಾಗವಾಗಿದ್ದರು. ಆದರೂ ಆನಂತರ ಬ್ರಿಟಿಶ್ ಸಾಮ್ರಾಜ್ಯ ಬಹಳ ದಿನ ಉಳಿಯಲಿಲ್ಲ.

ಭಾರತ ಅದರಿಂದ ತನ್ನನ್ನು ಬೇರ್ಪಡಿಸಿಕೊಂಡ ಮೊದಲ ವಸಾಹತು. ಆರಂಭದಲ್ಲಿ ಅದು 'ಸ್ವಾತಂತ್ರ್ಯ' ಗಳಿಸಿದ್ದು ಡೊಮಿನಿಯನ್ ಅಂದರೆ ಅಧೀನ ಸ್ಥಾನಮಾನದೊಂದಿಗೆ. ಅದು ಕಾಮನ್ವೆಲ್ತ್ ಸದಸ್ಯನಾಗಿ ಉಳಿಯಿತು. ಈ ಡೊಮಿನಿಯನ್ ಸ್ಥಾನಮಾನ ಬಹಳ ಕಾಲದಿಂದಲೂ ಕಾಂಗ್ರೆಸ್ಸಿಗೆ ಸ್ವೀಕಾರಾರ್ಹವಾಗಿರಲಿಲ್ಲ. 1930ರಲ್ಲಿ ಪೂರ್ಣ ಸ್ವರಾಜ್ಯದ ನಿರ್ಣಯವನ್ನು ಅಂಗೀಕರಿಸಿದಂದಿನಿಂದಲೂ ಜನವರಿ 26 ನ್ನು ಸ್ವಾತಂತ್ರ್ಯ ದಿನವಾಗಿ ಆಚರಿಸಲಾಗುತ್ತಿತ್ತು. ಅಂದಿನಿಂದ ಪೂರ್ಣ ಸ್ವರಾಜ್ಯ ಕಾಂಗ್ರೆಸ್ಸಿನ ಅಧಿಕೃತ ಧೋರಣೆಯೂ ಆಯಿತು.

ಅದೇ 1930ರ ಸಮಯದಲ್ಲೇ ಫ್ಯಾಸಿಸಂನ ಉದಯವಾಗುತ್ತಿತ್ತು. ಸೋವಿಯೆತ್ ಒಕ್ಕೂಟದ ನೇತೃತ್ವದಲ್ಲಿ ಆಮ್‌ಸ್ಟರ್‌ಡ್ಯಾಂನಲ್ಲಿ ಒಂದು ಜಾಗತಿಕ ಫ್ಯಾಸಿಸ್ಟ್–ವಿರೋಧಿ ಸಮ್ಮೇಳನ ನಡೆಯಿತು. ಅದರಲ್ಲಿ ಜವಹರಲಾಲ್ ನೆಹರೂ ಭಾಗವಹಿಸಿದರು. ಅಂದಿನಿಂದ ಅವರು ಫ್ಯಾಸಿಸಂ ವಿರುದ್ಧ ಬಹಿರಂಗವಾಗಿಯೇ ಪ್ರಚಾರದಲ್ಲಿ ತೊಡಗಿದರು. ಆ ಕಾಲದ ಅವರ ಬರವಣಿಗೆಗಳಲ್ಲಿ ಫ್ಯಾಸಿಸಂಗೆ ವಿರೋಧ, ಸಮಾಜವಾದ–ಪರ ನಿಲುವುಗಳು ಸ್ಪಷ್ಟವಾಗಿ ಕಾಣುತ್ತದೆ.

1939ರಲ್ಲಿ ಎರಡನೇ ಮಹಾಯುದ್ಧ ಆರಂಭವಾಗುತ್ತಿದ್ದಂತೆ ಕಾಂಗ್ರೆಸ್, ಕಮ್ಯುನಿಸ್ಟ್ ಪಕ್ಷ ಮತ್ತು ಮುಸ್ಲಿಂಲೀಗ್ ಒಂದಾಗಿ ಯುದ್ಧವನ್ನು ವಿರೋಧಿಸಿದವು. ಅವರೆಲ್ಲಾ ಸ್ವಾತಂತ್ರ್ಯ ಬೇಕು, ಯುದ್ಧ ಬೇಡ ಎಂಬ ನಿಲುವು ತಳೆದರು. ಕಮ್ಯುನಿಸ್ಟರು ತಮ್ಮ ಲೆನಿನ್‌ವಾದಿ ತಿಳುವಳಿಕೆಯನ್ನು ಆಧರಿಸಿ 'ಅದು ಸಾಮ್ರಾಜ್ಯಶಾಹಿ ಯುದ್ಧ, ಸಾಮ್ರಾಜ್ಯಶಾಹಿಯೊಳಗಿನ ವೈರುಧ್ಯಗಳಿಂದಾಗಿ ಅದು ಆರಂಭವಾಗಿದ್ದು ಅದನ್ನು ವಿರೋಧಿಸುವುದು ಕಮ್ಯುನಿಸ್ಟರ ಕರ್ತವ್ಯ' ಎಂದರು.

1941ರ ವೇಳೆಗೆ ಹಿಟ್ಲರ್ ಸೋವಿಯೆತ್ ಒಕ್ಕೂಟದ ಮೇಲೆ ಧಾಳಿ ನಡೆಸಿದ. ಆಗ ಭಾರತದ ಕಮ್ಯುನಿಸ್ಟರು ಆ ಯುದ್ಧವೀಗ ಫ್ಯಾಸಿಸಂ ವಿರುದ್ಧ ಜನತೆಯ ದೇಶಪ್ರೇಮಿ ಯುದ್ಧವಾಗಿ ಪರಿವರ್ತಿತವಾಗಿದೆ ಎಂಬ ನಿಲುವು ತಳೆದರು, ಆದರೆ ಕಾಂಗ್ರೆಸ್ ಪಕ್ಷ ಇಂತಹ ನಿಲುವು ತಳೆಯಲಿಲ್ಲ. ಆಗ ಜೈಲಿನಲ್ಲಿದ್ದ ಕಮ್ಯುನಿಸ್ಟ್ ಮುಖಂಡತ್ವ ತಕ್ಷಣವೇ ಭಾರತ ಸ್ವತಂತ್ರವಾಗಬೇಕು, ಸ್ವತಂತ್ರ ಭಾರತ ಫ್ಯಾಸಿಸಂ ವಿರುದ್ಧ ಯುದ್ಧದಲ್ಲಿ ಭಾಗವಹಿಸಬೇಕು ಎಂದು ಕರೆಯಿತ್ತರು. ಬಿಟಿ ರಣದಿವೆಯವರ ದೇವಲಿ ಪ್ರಬಂಧ ಇದನ್ನು ಪ್ರತಿಪಾದಿಸಿತು. ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಂ.ಪಿ.ಸಿ.ಜೋಷಿಯವರು ವೈಸರಾಯಿಯವರನ್ನು ಭೇಟಿಯಾಗಿ ಕಮ್ಯುನಿಸ್ಟರು ಯುದ್ಧ ಪ್ರಯತ್ನಗಳಲ್ಲಿ ಬ್ರಿಟಿಶರೊಂದಿಗೆ ಸಹಕರಿಸುವರು ಎಂದು ಸಾರಿದರು. ಜಾಗತಿಕ ಮಟ್ಟದಲ್ಲಿ ಸೋವಿಯೆತ್ ಒಕ್ಕೂಟ, ಬ್ರಿಟನ್ ಫ್ರಾನ್ಸ್ ಮತ್ತು ಅಮೆರಿಕ ಸೇರಿಕೊಂಡು ಮಿತ್ರಕೂಟವನ್ನು ರಚಿಸಿಕೊಂಡು ಎರಡನೇ ಮಹಾಯುದ್ಧದಲ್ಲಿ ಒಟ್ಟಾಗಿ ಹೋರಾಡಿದವು.



ಅದೇ ವೇಳೆಗೆ ಕಾಂಗ್ರೆಸ್ ಪಕ್ಷ ಬ್ರಿಟಿಶರು ತಕ್ಷಣವೇ ದೇಶ ಬಿಟ್ಟು ಹೋಗಬೇಕು ಎಂದು 1942ರಲ್ಲಿ "ಕ್ವಿಟ್ ಇಂಡಿಯಾ" ಆಂದೋಲನ ಆರಂಭಿಸಿತು. ಅಂತಿಮವಾಗಿ ಕೆಂಪುಸೇನೆ 1945ರ ಮೇದಿನದಂದು ಬರ್ಲಿನನ್ನು ವಶಪಡಿಸಿಕೊಳ್ಳುವುದರೊಂದಿಗೆ ಮಿತ್ರಕೂಟ ಯುದ್ಧವನ್ನು ಗೆದ್ದಿತು. ಅಮೆರಿಕವು ಅಗಸ್ಟ್ 6ರಂದು ಹಿರೋಶಿಮ ಮತ್ತು 9ರಂದು ನಾಗಸಾಕಿಯ ಮೇಲೆ ಬಾಂಬ್ ಹಾಕಿದಾಗ ಜಪಾನ್ ಶರಣಾಯಿತು.

ಅದಾದ ಒಂದು ವರ್ಷದೊಳಗೆ ರಿನ್ ಬಂಡಾಯ ಭುಗಿಲೆದ್ದಿತು. ಪುನ್ನಪ್ರ-ವಾಯಲಾರ್ ಹೋರಾಟ ಮತ್ತು ಬಂಡಾಯವನ್ನು ದಮನ ಮಾಡಲಾಯಿತು. ತೆಲಂಗಾಣ ಹೋರಾಟ ಮುಂದುವರೆಯುತ್ತಿದ್ದು ಮೇಲಕ್ಕೇರುತ್ತಿತ್ತು.

'ಯಾರಿಗೆ ಬಂತು......'

ಇಂತಹ ಸನ್ನಿವೇಶದಲ್ಲಿ ಬ್ರಿಟಿಶರ ಕ್ಯಾಬಿನೆಟ್ ಪ್ಲಾನ್ ಪ್ರಕಾರ ಭಾರತದ ಸ್ವಾತಂತ್ರ್ಯದ ಚೌಕಾಸಿ ನಡೆಯಿತು. ಆದ್ದರಿಂದ ಕಮ್ಯುನಿಸ್ಟರು ಇದನ್ನು ಕಾಮನ್‌ವೆಲ್ತ್(ಬ್ರಿಟನ್ ಮತ್ತು ಬ್ರಿಟನ್‌ನ ವಸಾಹತುಗಳಾಗಿದ್ದ ದೇಶಗಳ ಒಕ್ಕೂಟ)ನ ಅಡಿಯಲ್ಲಿ ಡೊಮಿನಿಯನ್ ಸ್ಥಾನಮಾನ ಮತ್ತು ಜವಹರಲಾಲ್ ನೆಹರೂ ಪ್ರಧಾನ ಮಂತ್ರಿತ್ವವನ್ನು ವಹಿಸಿಕೊಂಡದ್ದು ಅಧಿಕಾರದ ಹಸ್ತಾಂತರ ಎಂದು ಪರಿಗಣಿಸಿದರು.

'ಯಾರಿಗೆ ಬಂತು ನಲ್ವತ್ತೇಳರ ಸ್ವಾತಂತ್ರ್ಯ' ಎಂಬ ಜನಪ್ರಿಯ ಹಾಡು ಈ ಧ್ವನಿಯನ್ನು ಬಿಂಬಿಸುತ್ತದೆ. ಮುಂದುವರೆದ ಜೈಲುವಾಸ, ತೆಲಂಗಾಣ ಸಶಸ್ತ್ರ ಹೋರಾಟದ ವಿರುದ್ಧ ಪೋಲೀಸ್ ಕಾರ್ಯಾಚರಣೆ ಮತ್ತು ಇದಕ್ಕೆ ಮೊದಲು ಪುನ್ನಪ್ರ-ವಯಲಾರಿನಲ್ಲಿ ರಕ್ತದೋಕುಳಿ, ಅದಕ್ಕೆ ಕಾಂಗ್ರೆಸಿನ ಬೆಂಬಲ ಇವನ್ನೆಲ್ಲ ಅನುಭವಿಸಿದ ಕಮ್ಯುನಿಸ್ಟರು ಅಗಸ್ಟ್ 15ರಂದು ಅಧಿಕಾರ ಬಿಳಿದೊಗಲಿನವರಿಂದ ಬಿಳಿ ಟೋಪಿಯವರಿಗೆ ಹಸ್ತಾಂತರಗೊಂಡಿತು ಎಂಬ ನಿಲುವು ತಳೆದರು.

ಸ್ವಾತಂತ್ರ್ಯದ ಒಂದು ವರ್ಷದ ನಂತರ, 1948ರಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷದ 2ನೇ ಮಹಾಧಿವೇಶನ ಕೊಲ್ಕತಾದಲ್ಲಿ ನಡೆಯಿತು. ಅಲ್ಲಿ ಮುಂದೆ 'ಕಲ್ಕತ್ತಾ ಥೀಸಿಸ್' ಎಂದು ಹೆಸರಾದ ನಿಲುವನ್ನು ಅಂಗೀಕರಿಸಲಾಯಿತು. ಸಹಜವಾಗಿಯೇ ಇದು 'ದೇವಲಿ ಪ್ರಬಂಧ'ದ ವಿಸ್ತರಣೆಯಾಗಿತ್ತು. 2ನೇ ಮಹಾಧಿವೇಶನದಲ್ಲಿ ಪಿ.ಸಿಜೋಷಿಯವರನ್ನು ತೆಗೆದು ಹಾಕಲಾಯಿತು. ಬಿ.ಟಿ.ರಣದಿವೆ ಪ್ರಧಾನ ಕಾರ್ಯದರ್ಶಿಗಳಾಗಿ ಚುನಾಯಿತರಾದರು. 2ನೇ ಮಹಾಧಿವೇಶನ ಮುಂದೆ 'ಪಂಥವಾದಿ' ಎಂದು ಘೋಷಿಸಲ್ಪಟ್ಟ ಈ ಥೀಸಿಸ್ ಅಲ್ಲದೆ ಒಂದು ದೇಶವ್ಯಾಪಿ ಹೋರಾಟವನ್ನು ಹರಿಯಬಿಟ್ಟಿತು. ಅದರ ಫಲಿತಾಂಶವಾಗಿಯೆ 1949ರ ರೈಲ್ವೇ ಮುಷ್ಕರ ನಡೆಯಿತು. ಅದು ವಿಫಲವಾಯಿತು. ಮುಂದೆ ಅದು ತೀವ್ರಗಾಮಿ ಕ್ರಮ ಎಂದು ವಿಮರ್ಶೆ ಮಾಡಲಾಯಿತು. ಅದಕ್ಕಾಗಿ ಬಿಟಿಆರ್ ರವರನ್ನು ಶಿಕ್ಷಿಸಲಾಯಿತು. ಪಕ್ಷ ತನ್ನ ತಪ್ಪನ್ನು

ಸರಿಪಡಿಸಿಕೊಂಡಿತು. ಈ ನಡುವೆ ಪಕ್ಷದ ಮೇಲೆ ನಿಷೇಧವನ್ನು ಹೇರಲಾಯಿತು. ಇದು ಮೂರು ವರ್ಷ ಮುಂದುವರೆಯಿತು.

ಈ ಸಂಗತಿಗಳನ್ನೆಲ್ಲಾ ಭಾರತೀಯ ಸ್ವಾತಂತ್ರ್ಯದ ಸ್ವರೂಪದ ಬಗ್ಗೆ ಕಮ್ಯುನಿಸ್ಟ್ ಆಂದೋಲನದಲ್ಲಿ ಇದ್ದ ವಾಸ್ತವವಾದಿ, ಶಾಮೀಲುವಾದಿ ಮತ್ತು ಪಂಥವಾದಿ ಕಣ್ಣೋಟಗಳ ಹಿನ್ನೆಲೆಯನ್ನು ಗಮನಿಸಲು ಹೇಳಲಾಗಿದೆ.

ಮೂರು ನಿಲುವುಗಳು

ಸಿಪಿಐ(ಎಂ), ಸಿಪಿಐನಲ್ಲಿನ ಡಾಂಗೆವಾದಿಗಳು ಮತ್ತು ಸಿಪಿಐ(ಎಂಎಲ್) ಎಂಬ ಹೆಸರಿನ ವಿವಿಧ ಪಕ್ಷಗಳಲ್ಲಿ ಹಂಚಿಹೋಗಿರುವ ನಕ್ಸಲ್‌ವಾದಿಗಳು ಪ್ರತಿನಿಧಿಸುವ 'ವಾಸ್ತವವಾದಿ', 'ಶಾಮೀಲುವಾದಿ' ಮತ್ತು 'ಪಂಥವಾದಿ' ಕಣ್ಣೋಟಗಳನ್ನು ಸ್ವಾತಂತ್ರ್ಯದಿನದ ಅಂದರೆ ಅಗಸ್ಟ್ 15, 1947ರ ಮೊದಲು, ಸ್ವಾತಂತ್ರ್ಯದ ವೇಳೆಯಲ್ಲಿ ಮತ್ತು ನಂತರದ ತಕ್ಷಣದ ಅವಧಿಯಲ್ಲಿ ಇದ್ದ ಇಂತಹ ಪ್ರವೃತ್ತಿಗಳನ್ನು ಗಮನಿಸದೆ ಅರ್ಥಮಾಡಿಕೊಳ್ಳುವುದು ಸಾಧ್ಯವಾಗದು. ನಂತರದ ಬೆಳವಣಿಗೆಗಳನ್ನು ಗಮನಿಸುವುದು ಕೂಡಾ ಸರಿಯಾಗಿ ಅರ್ಥಮಾಡಿಕೊಳ್ಳಲು ಅಗತ್ಯ.

ಸಂವಿಧಾನ ಸಭೆ ತನ್ನ ಕೆಲಸವನ್ನು ಎರಡು ವರ್ಷಗಳಲ್ಲಿ ಮುಗಿಸಿತು. 1950ರಲ್ಲಿ ಈ ಸಂವಿಧಾನವನ್ನು ಅಂಗೀಕರಿಸಿ ಭಾರತ ಒಂದು ಗಣತಂತ್ರವಾಯಿತು. ಭಾರತ ಒಂದು ಗಣತಂತ್ರವಾದಂದು, ಅಂದರೆ ಜನವರಿ 26, 1950ರಂದು ಕೂಡಾ ಭಾರತ ಕಮ್ಯುನಿಸ್ಟ್ ಪಕ್ಷ (ಸಿಪಿಐ) ದ ಮೇಲೆ ನಿಷೇಧ ಇತ್ತು, ಅದು ಆ ದಿನವನ್ನು ಕರಾಳ ದಿನವೆಂದು ಆಚರಿಸಲು ಕರೆ ನೀಡಿತ್ತು ಎಂಬುದನ್ನು ಗಮನಿಸಬೇಕು. ಕೇರಳದಲ್ಲಿ ಅಂದು ಸರ್ದಾರ್ ಗೋಪಾಲಕೃಷ್ಣನ್ ಪೋಲೀಸರ ಏಟು ತಿಂದು ಹುತಾತ್ಮರಾದರು. ಇದು ಸ್ವಾತಂತ್ರ್ಯದ ಬಗ್ಗೆ ಸಿಪಿಐನ ನಿಲುವು ಮುಂದುವರೆದುದನ್ನು ಎತ್ತಿ ತೋರಿಸುತ್ತದೆ.

ಭಾರತ ಗಣತಂತ್ರವಾದ ಕೂಡಲೇ ಮೊದಲ ಸಾರ್ವತ್ರಿಕ ಚುನಾವಣೆ 1952ರಲ್ಲಿ ನಡೆಯಿತು. ಈ ವೇಳೆಗೆ ಕಮ್ಯುನಿಸ್ಟ್ ಪಕ್ಷವನ್ನು ಕಾನೂನು ಬದ್ಧಗೊಳಿಸಲಾಗಿತ್ತು. ತೆಲಂಗಾಣಾ ಹೋರಾಟ ಮತ್ತು ಆಂಧ್ರ ಮಹಾಸಭಾ ಚಳುವಳಿಯ ಬೆನ್ನಲ್ಲೇ ನಡೆದ ಈ ಚುನಾವಣೆಯಲ್ಲಿ ಆಂಧ್ರ ಪ್ರಾಂತ್ಯ ಸಮಿತಿಗೆ ಹಲವು ಸದಸ್ಯರನ್ನು ಸಂಸತ್ತಿಗೆ ಕಳಿಸಲು ಸಾಧ್ಯವಾಯಿತು. ಕೇರಳ ಮತ್ತು ಪಶ್ಚಿಮ ಬಂಗಾಳ ಕೂಡಾ ತಮ್ಮ ಪಾಲು ನೀಡಿದವು. ಕಮ್ಯುನಿಸ್ಟ್ ಪಕ್ಷ ಸಂಸತ್ತಿನಲ್ಲಿ ಮಾನ್ಯತೆ ಪಡೆದ ಪ್ರತಿಪಕ್ಷವಾಯಿತು.

ಮೊದಲ ಸಾರ್ವತ್ರಿಕ ಚುನಾವಣೆಯ ಮತ್ತು ಸಿಪಿಐ ಪ್ರಮುಖ ವಿರೋಧ ಪಕ್ಷವಾದ ಸಂದರ್ಭದಲ್ಲಿ ಸೋವಿಯೆತ್ ಒಕ್ಕೂಟದಲ್ಲಿ ಸ್ಟಾಲಿನ್ ನಿಧನರಾದ ನಂತರ ಬದಲಾವಣೆ ಬಂದಿತ್ತು. ಅಧಿಕಾರಕ್ಕೆ ಬಂದಿದ್ದ ಕ್ರುಶ್ಚೆವ್, ಸೋವಿಯೆತ್ ಅಧ್ಯಕ್ಷ ಬುಲ್ಗಾನಿನ್‌ರೊಂದಿಗೆ ಭಾರತದ ಪ್ರವಾಸಕ್ಕೆ ಬಂದರು. ಆ ವೇಳೆಗಾಗಲೇ 'ಆವಡಿ ಸಮಾಜವಾದ' ಎಂದು ಹೆಸರಾದ 'ಸಮಾಜವಾದಿ ಮಾದರಿ'ಯನ್ನು ಅಂಗೀಕರಿಸಿದ್ದ ಕಾಂಗ್ರೆಸ್ ಮತ್ತು ಜವಹರಲಾಲ್ ನೆಹರೂರವರು ಈ ಭೇಟಿಯ ಮತ್ತು ಪ್ರಾವ್ಡಾದಲ್ಲಿ ನೆಹರೂರವರ ಹೊಗಳಿಕೆಯ ಸಂಪೂರ್ಣ ಲಾಭ ಪಡೆದರು.

ಸೋವಿಯೆತ್ ಒಕ್ಕೂಟ ಕಮ್ಯುನಿಸ್ಟ್ ಪಕ್ಷದ 20ನೇ ಮಹಾಧಿವೇಶನ, ಅಕ್ಟೋಬರ್ ಕ್ರಾಂತಿಯ 40ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಅಂಗೀಕರಿಸಿದ ವಿಶ್ವದ ಕಮ್ಯುನಿಸ್ಟ್ ಪಕ್ಷಗಳ 1957ರ ಘೋಷಣೆಯ ಬೆನ್ನಲ್ಲೇ ಪರಿಷ್ಕರಣವಾದದ ಬೀಜಗಳನ್ನು ಬಿತ್ತಲಾಯಿತು. ಇದು 'ಶಾಮೀಲುವಾದಿ' ಯೋಚನಾ ಮಾರ್ಗವನ್ನು ಬಲಪಡಿಸಿತು. ಡಾಂಗೇವಾದಿಗಳು ಈ 'ಶಾಮೀಲುವಾದಿ' ಕಣ್ಣೋಟಗಳನ್ನು ರೂಪೀಕರಿಸಿದರು.

1954ರಿಂದ 1964 ವರೆಗೆ

ಎರಡನೇ ಸಾರ್ವತ್ರಿಕ ಚುನಾವಣೆಗಳು 1957ರಲ್ಲಿ ನಡೆದವು. ಸಿಪಿಐ ಕೇರಳದಲ್ಲಿ ಯಶಸ್ವಿಯಾಗಿ ಇಎಂಎಸ್. ನಂಬೂದರಿಪಾಡ್‌ರವರ ನೇತ್ರತ್ವದ ಮಂತ್ರಿಮಂಡಲವನ್ನು ರಚಿಸಿತು. ಈ ಕಮ್ಯುನಿಸ್ಟ್ ಮಂತ್ರಿಮಂಡಳದ ವಿರುದ್ಧ ಕಾಂಗ್ರೆಸ್‌ನ ಹೋರಾಟದ ದಾಖಲೆಗಳು ಬಹಳಷ್ಟಿವೆ. ಪಂಡಿತ್ ಜವಹರಲಾಲ್ ನೆಹರೂರವರ ನೇತೃತ್ವದ ಕೇಂದ್ರ ಸರಕಾರ ಇಎಂಎಸ್ ಮಂತ್ರಿಮಂಡಳವನ್ನು ವಜಾ ಮಾಡಿದ್ದು ದೇಶದ ಪ್ರಜಾಪ್ರಭುತ್ವವಾದಿಗಳಿಗೆ ಆಘಾತ ತಂದ ಘಟನೆಯಾಗಿತ್ತು. ಪಕ್ಕಾ ಕಮ್ಯುನಿಸ್ಟ್ ವಿರೋಧಿ ಮತ್ತು ಬಲಪಂಥೀಯರಾಗಿದ್ದ ಸಿ. ರಾಜಗೋಪಲಾಚಾರಿ ಕೂಡಾ ಈ ಬಗ್ಗೆ ಆಘಾತ ವ್ಯಕ್ತಪಡಿಸಿದರು.

ಅದಾದ ಕೂಡಲೇ 1962ರಲ್ಲಿ ಭಾರತ-ಚೀನಾ ಯುದ್ಧ ಭಾರತದ ಆಳುವ ವರ್ಗಗಳಿಗೆ ಅವಿಭಜಿತ ಕಮ್ಯುನಿಸ್ಟ್ ಪಕ್ಷದೊಳಗಿನ 'ಎಡಪಂಥೀಯ'ರನ್ನು ಚೀನೀ ಏಜೆಂಟರೆಂದು ದೂಷಿಸಲು ಒಂದು ವಿಶಿಷ್ಟ ಅವಕಾಶವನ್ನು ಕೊಟ್ಟಿತು. ನಿಜವಾಗಿ ಡಾಂಗೇವಾದಿಗಳೂ 'ಎಡಪಂಥೀಯ'ರ ಮೇಲೆ ದಾಳಿಗೆ ಮದ್ದುಗುಂಡುಗಳನ್ನು ಒದಗಿಸಿದರು.

ಅವಿಭಜಿತ ಕಮ್ಯುನಿಸ್ಟ್ ಪಕ್ಷದೊಳಗಿನ ಎಡಗುಂಪು 1954ರಲ್ಲಿ ಪಾಲ್ಘಾಟ್ (4ನೇ) ಮಹಾಧಿವೇಶನದಲ್ಲಿ ತಮ್ಮ ನಿಲುವುಗಳನ್ನು ಮೊದಲು ಮುಂದಿಟ್ಟಿತು. ಇಲ್ಲಿಯೆ ಡಾಂಗೆಯವರ ಎರಡು ಸ್ತಂಭಗಳ ಸಿದ್ಧಾಂತ ಅನಾವರಣಗೊಂಡಿತು. ಅಮೃತಸರ(5ನೇ) ಮಹಾಧಿವೇಶನದ ವೇಳೆಗೆ ಕೇರಳದಲ್ಲಿ ಕಮ್ಯುನಿಸ್ಟ್ ಮಂತ್ರಿಮಂಡಳ ರಚನೆಯ ಭಾವಾವೇಶದ ಭರದಲ್ಲಿ 4ನೇ ಮಹಾಧಿವೇಶನದ ಚರ್ಚೆಯನ್ನು ಉಪೇಕ್ಷಿಸಲಾಯಿತು. ವಿಜಯವಾಡದಲ್ಲಿ 6ನೇ ಮಹಾಧಿವೇಶನಕ್ಕೆ ಸಿದ್ಧತೆಯಾಗಿ ನಡೆದ ರಾಷ್ಟ್ರೀಯ ಮಂಡಳಿ ಸಭೆಯಲ್ಲಿ 32 ಸದಸ್ಯರು (ಮುಂದೆ ಸಿಪಿಐಎಂ ಮುಖಂಡರಾದವರು) ಒಂದು ಭಿನ್ನ ನಿಲುವು ತಳೆದರು.



ಜನ ಚಳುವಳಿಯೊಂದಿಗೆ ಸಿಪಿಐ(ಎಂ)

ವಿಜಯವಾಡ ಮಹಾಧಿವೇಶನದಲ್ಲಿ ಮೂರು ಮೂಲ ದಸ್ತಾವೇಜುಗಳು ಇದ್ದವು. 1. ಎಸ್.ಎ. ಡಾಂಗೆ ಮತ್ತು ಜಿ. ಅಧಿಕಾರಿ ಪ್ರಸ್ತುತ ಪಡಿಸಿದ ರಾಷ್ಟ್ರೀಯ ಪ್ರಜಾಪ್ರಭುತ್ವದ ಮಾರ್ಗ, 2. ಪಿ. ರಾಮಮೂರ್ತಿ ಮತ್ತು ಭೂಪೇಶ್ ಗುಪ್ತ ಮಂಡಿಸಿದ ಜನತಾ ಪ್ರಜಾಪ್ರಭುತ್ವ ಮಾರ್ಗ ಮತ್ತು 3. 32 ರಾಷ್ಟ್ರೀಯ ಮಂಡಳಿ ಸದಸ್ಯರಲ್ಲಿ ಬಿ.ಟಿ.ರಣದಿವೆ, ಎಂ.ಬಸವಪುನ್ನಯ್ಯ, ಪಿ.ಸುಂದರಯ್ಯ, ಹರಕಿಶನ್ ಸಿಂಗ್ ಸುರ್ಜಿತ್ ಮತ್ತಿತರ ಬಹುಪಾಲು ಸದಸ್ಯರು ಮಂಡಿಸಿದ ಒಂದು ದಸ್ತಾವೇಜು. ಈ ದಸ್ತಾವೇಜಿನ ಶಿರೋನಾಮೆಯಲ್ಲಿ 'ರಾಷ್ಟ್ರೀಯ ಪ್ರಜಾಪ್ರಭುತ್ವ' ಎಂದಿದ್ದರೂ ಅದರ ಹೂರಣ 'ಜನತಾ ಪ್ರಜಾಪ್ರಭುತ್ವ'ವಾಗಿತ್ತು. ಅಂತಿಮವಾಗಿ ವಿಜಯವಾಡದಲ್ಲಿ ಒಂದು ತೇಪೆ ಹಾಕಲಾಯಿತು. ಆದರೆ ಇದು ಬಹಳ ದಿನ ಉಳಿಯಲಿಲ್ಲ.

ಅಜೊಯ್ ಘೋಷ್ ನಿಧನದ ನಂತರ ಡಾಂಗೆ ಅಧ್ಯಕ್ಷರಾದರು ಮತ್ತು ಇಎಂಎಸ್‌ರನ್ನು ಪ್ರಧಾನ ಕಾರ್ಯದರ್ಶಿಯಾಗಿ ಮಾಡಲಾಯಿತು. ಪಕ್ಷದ ಪತ್ರಿಕೆ 'ನ್ಯೂ ಏಜ್'ನ ಸಂಪಾದಕರಾಗಿದ್ದ ಇಎಂಎಸ್ ರನ್ನು ಬಂಧಿಸಿದಾಗ ಸಿಪಿಐ ಪ್ರತಿಭಟಿಸಲಿಲ್ಲ.

ನವಂಬರ್ 7, 1964ರಂದು ಕಲಕತ್ತೆಯಲ್ಲಿ ಸಿಪಿಐ(ಎಂ) ರಚನೆಯಾಗುವ (ಎಂ. – ಅಂದರೆ ಮಾರ್ಕ್ಸ್‌ವಾದಿ ಎಂಬುದು ಸೇರಿದ್ದು 1965ರಲ್ಲಷ್ಟೇ) ವರೆಗಿನ ಬೆಳವಣಿಗೆಗಳನ್ನು ತೋರಿಸಲು ಈ ಸಾಲುಗಳನ್ನು ಬರೆಯಲಾಗಿದೆ.

1964ರ ಪಕ್ಷದ ಕಾರ್ಯಕ್ರಮ ಸಹಜವಾಗಿಯೇ ಭಾರತೀಯ ಪ್ರಭುತ್ವದ 'ವಾಸ್ತವವಾದಿ' ಅಂದಾಜಿಗೆ ಬಂತು.

ಸ್ವಾತಂತ್ರ್ಯದ 'ವಾಸ್ತವವಾದಿ' ಕಣ್ಣೋಟ

ಸಿಪಿಐ(ಎಂ) ನಮ್ಮ ಪ್ರಭುತ್ವದ ಸ್ವರೂಪ ವಿದೇಶಿ ಹಣಕಾಸು ಬಂಡವಾಳದೊಂದಿಗೆ ಹೆಚ್ಚೆಚ್ಚು ಕೈಜೋಡಿಸುತ್ತಿರುವ ದೊಡ್ಡ ಬಂಡವಾಳಶಾಹಿ ನೇತೃತ್ವದ ಬಂಡವಾಳಶಾಹಿ–ಭೂಮಾಲಕ ಮೈತ್ರಿ ಎಂದು ವರ್ಣಿಸಿತು. ಈ ನಿರೂಪಣೆ ಸಹಜವಾಗಿಯೇ ಭಾರತೀಯ ಪ್ರಭುತ್ವ 'ನಿಜವಾಗಿಯೂ' ಸ್ವತಂತ್ರವಾಗಿದೆ, ಆದರೆ ನೇತೃತ್ವದಲ್ಲಿರುವ ಭಾರತದ ದೊಡ್ಡ ಬಂಡವಾಳಶಾಹಿ ವಿದೇಶಿ ಹಣಕಾಸು ಬಂಡವಾಳದೊಂದಿಗೆ ಹೆಚ್ಚೆಚ್ಚಾಗಿ ಶಾಮೀಲಾಗುತ್ತಿದೆ ಎಂದು ಸ್ಪಷ್ಟಪಡಿಸಿತು. ಮೂಲಾಧಾರ ಬಂಡವಾಳಶಾಹಿ–ಭೂಮಾಲಕ ಮೈತ್ರಿ ಎಂಬ ಪ್ರಭುತ್ವದ ಸ್ವರೂಪ ಆ ಮೈತ್ರಿ ಪ್ರತ್ಯೇಕಿಸಲಾಗದ ಮೈತ್ರಿ ಎಂಬುದನ್ನು ತೋರಿಸಿ ಕೊಡುತ್ತದೆ.

ಆದ್ದರಿಂದ ಸಿಪಿಐ(ಎಂ) ಪ್ರಕಾರ ಭಾರತ 1947ರಲ್ಲಿ ನಿಜವಾಗಿಯೂ ಸ್ವತಂತ್ರವಾಯಿತು ಎಂಬ ಕಣ್ಣೋಟ ಕಳೆದ 45 ವರ್ಷಗಳಲ್ಲಿ ಸಮಯದ ಒರೆಗಲ್ಲಿನಲ್ಲಿ ಸಾಬೀತಾಗಿದೆ. ಇದನ್ನು ಆಳುವ ಮೈತ್ರಿಗೆ ಸೂಕ್ತವಾದ ಸ್ವತಂತ್ರ ನಿಲುವುಗಳನ್ನು ತಳೆಯಲು ಬಳಸಿಕೊಳ್ಳಲಾಯಿತು. ಇದನ್ನು ಡಾಂಗೆವಾದಿಗಳು 'ಪ್ರಗತಿಪರ' ಎಂದು ವರ್ಣಿಸಿದರು. ಸಿಪಿಐ(ಎಂ) ಕೂಡಾ ಇದು ನಿಜವಾಗಿಯೂ ಪ್ರಗತಿಪರ ಎಂದು ವರ್ಣಿಸಿತು. ಆದರೆ ಸಿಪಿಐ(ಎಂ)ಗೆ ವಿದೇಶಾಂಗ ನೀತಿಯ ಪ್ರಗತಿಪರ ಸ್ವರೂಪ,



ಸಿಪಿಐ(ಎಂ) ನ ಮೊದಲ ಪೊಲಿಟ್ ಬ್ಯೂರೋ

ಸಾರ್ವಜನಿಕ ವಲಯ ಮುಂತಾದ ವಿಷಯಗಳಲ್ಲಿ ಆಂತರಿಕ ನೀತಿಗಳಲ್ಲಿಯೂ ಪ್ರಗತಿಪರತೆಯ ವರ್ಗ ಸ್ವರೂಪವನ್ನು ವಿವರಿಸುವುದು ಸಾಧ್ಯವಾಯಿತು.

ಸಿಪಿಐ(ಎಂ) ನಿಲುವು ಎಲ್ಲರಿಗೂ ಗೊತ್ತು. ಭಾರತೀಯ ಆಳುವ ಮೈತ್ರಿಕೂಟ ಇಂತಹ ನಿಲುವುಗಳನ್ನು ತಳೆದದ್ದು ಡಾಂಗೆವಾದಿಗಳು ವರ್ಣಿಸ ಬಯಸಿದಂತೆ, 'ಸಮಾಜವಾದಿ ಮಾದರಿ'ಯತ್ತ ಸೈದ್ಧಾಂತಿಕ ಒಲವಿನಿಂದಾಗಿ ಅಲ್ಲ, ಬದಲಾಗಿ ಅವರು ಎರಡೂ ಕಡೆಯಿಂದ ಸಾಧ್ಯವಾದಷ್ಟು ಹೆಚ್ಚು ಲಾಭ ಗಳಿಸಲು ಮುಂದಾದರು ಎಂಬ ಕಾರಣಕ್ಕಾಗಿ ಎಂಬುದನ್ನು ಸಿಪಿಐ(ಎಂ) ಅರ್ಥ ಮಾಡಿಕೊಂಡಿತು. ಸಾಮ್ರಾಜ್ಯಶಾಹಿ ನೇತೃತ್ವದ ಅಭಿವೃದ್ಧಿ ಹೊಂದಿದ ದೇಶಗಳು ಮತ್ತು ಸೋವಿಯೆತ್ ಒಕ್ಕೂಟದ ನೇತೃತ್ವದ ಸಮಾಜವಾದಿ ಶಿಬಿರ ಎರಡರಿಂದಲೂ ಪ್ರಯೋಜನ ಪಡೆಯುವುದು ಮತ್ತು ಹಿಂದೆ ವಸಾಹತುಗಳಾಗಿದ್ದ ದೇಶಗಳು ರಚಿಸಿಕೊಂಡ ಅಲಿಪ್ತ ಆಂದೋಲನವನ್ನು ಬಳಸಿಕೊಂಡು ಅದರಿಂದ ಅನಾವರಣಗೊಳ್ಳುತ್ತಿದ್ದ ಅವಕಾಶಗಳನ್ನು ಬಳಸಿಕೊಳ್ಳುವುದು ಇದರ ಹಿಂದಿದ್ದ ಉದ್ದೇಶ.


ಭಾರತೀಯ ಸ್ವಾತಂತ್ರ್ಯದ ನಿಜಸ್ವರೂಪ ಕುರಿತ ಸಿಪಿಐ(ಎಂ)ನ ವಿಶ್ಲೇಷಣೆ ಸರಿಯೆಂಬುದು ಮುಂದೆ ಇನ್ನಷ್ಟು ಆಮೂಲಾಗ್ರವಾಗಿ ಕಂಡು ಬಂತು. ಸುಯೆಝ್ ಬಿಕ್ಕಟ್ಟಿನ ಸಂದರ್ಭದಲ್ಲಿ ಭಾರತ ಬ್ರಿಟಿಶ್-ಅಮೆರಿಕನ್ ಹಿತಾಸಕ್ತಿಗಳ ವಿರುದ್ಧ ನಿಲುವು ತಳೆದದ್ದು, ವರ್ಣದ್ವೇಷ ನೀತಿ, ಪ್ಯಾಲೆಸ್ಟೈನ್ ಮಂತಾದವುಗಳಿಗೆ ಸಂಬಂಧಪಟ್ಟಂತೆ ಅದು ತಳೆದ ನಿಲುವುಗಳು ಭಾರತದ ಆಳುವ ವರ್ಗಗಳು ಸ್ವತಂತ್ರವಾಗಿ ತಮ್ಮ ಹಿತಾಸಕ್ತಿಗಳಿಗೆ ಅನುಗುಣವಾಗಿ ವರ್ತಿಸಿದ್ದನ್ನು ತೋರಿಸಿದವು.

ಡಾಂಗೆವಾದಿಗಳು ಇವೆಲ್ಲದರಲ್ಲಿ ಕಾಂಗ್ರೆಸ್ ಸರಕಾರದ ಸೋವಿಯೆತ್-ಪರ, ಸಮಾಜವಾದದ ಪರ ಒಲವನ್ನು ಕಂಡರರ ಭಾರತೀಯ ಆಳುವ ವರ್ಗಗಳಿಗೆ ತಮ್ಮ ಸ್ವಂತ ವರ್ಗ ಸ್ವರೂಪದಿಂದಾಗಿಯೆ ಕಾರ್ಮಿಕ ಕ್ರಾಂತಿಯೆಂದರೆ ಭಯ ಎಂಬ ಸಿಪಿಐ(ಎಂ) ವಿಶ್ಲೇಷಣೆಯೂ ಮುಂದೆ ಬಹಳ ಸ್ಪಷ್ಟಗೊಂಡಿತು. ಕೇರಳದಲ್ಲಿ 1957ರಲ್ಲಿ ಅವಿಭಜಿತ ಕಮ್ಯುನಿಸ್ಟ್ ಪಕ್ಷ ಮತ್ತು ನಂತರ 1967ರಲ್ಲಿ ಸಿಪಿಐ(ಎಂ) ಭೂಸುಧಾರಣೆಯ ಪ್ರಶ್ನೆಯನ್ನು ಗಂಭೀರವಾಗಿ ಎತ್ತಿಕೊಂಡಾಗಲೆಲ್ಲಾ ಈ ಆಳುವ ವರ್ಗಗಳು ತಮ್ಮ 'ಪ್ರಗತಿಪರ' ಸ್ವರೂಪಕ್ಕೆ ವಿರುದ್ಧವಾಗಿಯೇ ವರ್ತಿಸಿದವು. ಅವುಗಳಲ್ಲಿ ಪ್ರಗತಿಪರ ಒಲವನ್ನು ಕಂಡ ಡಾಂಗೆವಾದಿಗಳಿಗೂ 1957-59ರ ಅವಧಿಯಲ್ಲಿ ಕಾಂಗ್ರೆಸ್ ಪಕ್ಷ ಕಮ್ಯುನಿಸ್ಟ್ ಮಂತ್ರಿಮಂಡಳದ ವಿರುದ್ಧ ಏಕೆ ದಾಳಿಗಳಲ್ಲಿ ತೊಡಗಿತು, ಏಕೆ ಕೊನೆಗೆ ಅದನ್ನು ವಜಾ ಮಾಡಿಸಿತು ಎಂದು ವಿವರಿಸಲಾಗಲಿಲ್ಲ.

1967-72ರ ಅವಧಿಯಲ್ಲಿ ಕೇರಳದಲ್ಲೂ, ಪಶ್ಚಿಮ ಬಂಗಾಲದಲ್ಲೂ ಸಿಪಿಐ(ಎಂ) ವಿರುದ್ಧ ಮತ್ತು ಭೂಸುಧಾರಣೆಗಳ ವಿರುದ್ಧ ಸಿಪಿಐ ಬಹಿರಂಗ ನಿಲುವು ತಳೆಯಿತು.

1957-59ರಲ್ಲಿ ಕೇರಳದಲ್ಲಿ ಮತ್ತು 1967-72ರ ಅವಧಿಯಲ್ಲಿ ಕೇರಳ ಮತ್ತು ಪಶ್ಚಿಮ ಬಂಗಾಳದಲ್ಲಿ ಎಡ ನೇತೃತ್ವದ ಸರಕಾರಗಳನ್ನು ಉರುಳಿಸುವಲ್ಲಿ ಸಾಮ್ರಾಜ್ಯಶಾಹಿಗಳು ಕಾಂಗ್ರೆಸ್ ಪರ ವಹಿಸಿದ್ದರು ಎಂಬ ಸಂಗತಿಯನ್ನು ಡೇವಿಡ್ ಪ್ಯಾಟ್ರಿಕ್ ಮೊಯ್ನಿಹಾನ್ (ಭಾರತದಲ್ಲಿ ಅಮೆರಿಕಾದ ರಾಯಭಾರಿಯಾಗಿದ್ದವರು) ತಮ್ಮ ಪುಸ್ತಕ "ಎ ಡೇಂಜರಸ್ ಪ್ಲೇಸ್" (ಒಂದು ಅಪಾಯಕಾರಿ ಸ್ಥಳ)ದಲ್ಲಿ ಬಹಿರಂಗವಾಗಿಯೇ ಒಪ್ಪಿಕೊಂಡಿದ್ದಾರೆ.

ಇವೆಲ್ಲಾ ಸಂಗತಿಗಳು ಭಾರತೀಯ ಸ್ವಾತಂತ್ರ್ಯ ನಿಜವಾಗಿತ್ತು, ಅದರೂ ಭಾರತದಲ್ಲಿನ ರಾಜಕೀಯ ಬೆಳವಣಿಗೆಗಳನ್ನು



ಸಾಮ್ರಾಜ್ಯಶಾಹಿ ಮತ್ತು ಸೋವಿಯೆತ್ ಒಕ್ಕೂಟ ಹಾಗೂ ಚೀನಾ ಕೂಡಾ ಸತತವಾಗಿ ಗಮನಿಸುತ್ತಿದ್ದವು ಮತ್ತು ಅವುಗಳಲ್ಲಿ ಹಸ್ತಕ್ಷೇಪ ಮಾಡುತ್ತಿದ್ದವು ಎಂಬುದನ್ನು ಸ್ಪಷ್ಟವಾಗಿ ಹೊರಗೆಡಹುತ್ತವೆ.

ಶಾಮೀಲುವಾದಿ ನಿಲುವು

ಡಾಂಗೆ ನೇತೃತ್ವದಲ್ಲಿ ಸಿಪಿಐ ಶಾಮೀಲುವಾದಿ ಪ್ರವೃತ್ತಿಗಳನ್ನು ತೋರ್ಪಡಿಸುತ್ತಿದ್ದುದರಿಂದ, ಇವನ್ನೆಲ್ಲಾ ವಿವರಿಸಲು ತಮ್ಮ ವ್ಯಕ್ತಿನಿಷ್ಟ ನಿಲುವುಗಳಿಂದ ಅವರು **'ರಾಷ್ಟ್ರೀಯ ಬಂಡವಾಳಶಾಹಿ'** ಎಂಬ ಸಿದ್ಧಾಂತವನ್ನು ಪ್ರತಿಪಾದಿಸಿದರು. 1962–64ರ ಚರ್ಚೆಗಳಲ್ಲಿ ಮತ್ತು ನಂತರ ಅವರು ಮುಂಬೈಯಲ್ಲಿ ತಮ್ಮ 7ನೇ ಮಹಾಧಿವೇಶನದಲ್ಲಿ ಅಂಗೀಕರಿಸಿದ ಅವರ ಕಾರ್ಯಕ್ರಮದಲ್ಲಿ ಭಾರತದ ಪ್ರಭುತ್ವದ್ದು ರಾಷ್ಟ್ರೀಯ ಬಂಡವಾಳಶಾಹಿ ಸ್ವರೂಪ ಎಂದು ವಿಶ್ಲೇಷಿಸಲಾಯಿತು. ಈ ವಿಶ್ಲೇಷಣೆ ಬಂಡವಾಳಶಾಹಿ–ಭೂಮಾಲಕ ಮೈತ್ರಿಯನ್ನು ಉಪೇಕ್ಷಿಸಿತು. ಆದ್ದರಿಂದ ಕಾಂಗ್ರೆಸಿನ ಕಾರ್ಷಿಕ ಸುಧಾರಣಾ–ವಿರೋಧಿ ನಿಲುವನ್ನು ಇದರಿಂದ ವಿವರಿಸಲಾಗಲಿಲ್ಲ, ಸಿಪಿಐ(ಎಂ)ನ ವಾಸ್ತವವಾದಿ ನಿಲುವಿನಿಂದ ಮಾತ್ರ ಇದು ಸಾಧ್ಯವಾಯಿತು.

ಸಾಮ್ರಾಜ್ಯಶಾಹಿ ಹಿತಾಸಕ್ತಿಗಳ ವಿರುದ್ಧ ಭಾರತದ ಪ್ರಭುತ್ವ ಪ್ರದರ್ಶಿಸಿದ ಪ್ರಗತಿಪರ ಸ್ವರೂಪವನ್ನು ವಿವರಿಸಲು ಸಿಪಿಐ 'ರಾಷ್ಟ್ರೀಯ ಬಂಡವಾಳಶಾಹಿ'ಯ ನಿರೂಪಣೆ ಮಾಡಿತು. ಈ ನಿರೂಪಣೆ ಸಾಮ್ರಾಜ್ಯಶಾಹಿ ಶಕ್ತಿಗಳೊಂದಿಗೆ ಭಾರತೀಯ ಸರಕಾರದ ಶಾಮೀಲನ್ನು ವಿವರಿಸಲಾರದು. ಭಾರತೀಯ ಆಳುವ ವರ್ಗಗಳು ಸಾಮ್ರಾಜ್ಯಶಾಹಿ ಮತ್ತು ಸಮಾಜವಾದಿ ಜಗತ್ತುಗಳೆರಡರಿಂದಲೂ ಸಾಧ್ಯವಾದಷ್ಟು ಪ್ರಯೋಜನ ಪಡೆದು ಅಲಿಪ್ತ ಧೋರಣೆಯನ್ನು ಬೆಳೆಸಲು ಪ್ರಗತಿಪರ ವಿಧಾನವನ್ನು ಅಂಗೀಕರಿಸಿದವು ಎಂಬ ಸಿಪಿಐ(ಎಂ) ನಿಲುವಿಗೆ ಪ್ರತಿಯಾಗಿ ಸಿಪಿಐ ಅದು ಪ್ರಗತಿಶೀಲ ರಾಷ್ಟ್ರೀಯ ಬಂಡವಾಳಶಾಹಿಯ ಮೂಲ ನಿಲುವು ಎಂದು ವರ್ಣಿಸಿತು.

ರಾಷ್ಟ್ರೀಯ ಬಂಡವಾಳಶಾಹಿಯು ಸಾಮ್ರಾಜ್ಯಶಾಹಿ ವಿರೋಧಿಯಾಗಿರುತ್ತದೆ, ಏಕೆಂದರೆ ರಾಷ್ಟ್ರೀಯ ಆರ್ಥಿಕವನ್ನು ಬೆಳೆಸಲು ಮುಂದುವರೆದ ಬಂಡವಾಳಶಾಹಿ ದೇಶಗಳ ಬಂಡವಾಳವನ್ನು ವಿರೋಧಿಸಬೇಕಾಗುತ್ತದೆ ಎಂಬ ಸಂಗತಿಯನ್ನು ಗಮನಿಸದಿದ್ದರೆ ಈ ಪದವನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ. ಡಾಂಗೆವಾದಿಗಳು ರಾಷ್ಟ್ರೀಯ ಆರ್ಥಿಕವನ್ನು ಬೆಳೆಸುವುದಕ್ಕಾಗಿ ಎಂಬ ಕಾರಣ ಕೊಟ್ಟು ದುಡಿಯುವ ಜನಗಳ ಹಿತಾಸಕ್ತಿಗಳಲ್ಲಿ ರಾಜಿಮಾಡಿಕೊಳ್ಳುವ ಮಟ್ಟದವರೆಗೂ ಹೋದರು.


ತದ್ವಿರುದ್ಧವಾಗಿ ಅವಿಭಜಿತ ಕಮ್ಯುನಿಸ್ಟ್ ಪಕ್ಷದಲ್ಲಿ 1954ರಿಂದ ವಿಭಜನೆ ಆರಂಭವಾದಾಗಿನಿಂದಲೂ ಸಿಪಿಐ(ಎಂ)ನ ಅಭಿಪ್ರಾಯವೆಂದರೆ ಜನಗಳ ಹಿತಾಸಕ್ತಿಗಳಲ್ಲಿ ರಾಜಿಮಾಡಿಕೊಂಡೇ ಈ ರಾಷ್ಟ್ರೀಯ ಬೆಳವಣಿಗೆ ಎಂಬುದು ನಡೆಯುತ್ತದೆ.

ಈ ರೀತಿ ಡಾಂಗೇವಾದಿಗಳ ಮತ್ತು ಸಿಪಿಐ ಕಾರ್ಯಕ್ರಮದ ಈ ನಿಲುವಿನಲ್ಲಿ ಸ್ವಾತಂತ್ರ್ಯದ ನಿರೂಪಣೆಯ ಶಾಮೀಲುವಾದಿ ಅಂಶ ಸ್ಪಷ್ಟವಾಗಿದೆ. ಅವರು ಇದು ರಾಷ್ಟ್ರೀಯ ಬಂಡವಾಳಶಾಹಿ ಪ್ರಭುತ್ವ ಎಂದು ಹೇಳಿದ್ದಾರಷ್ಟೇ, ಅದರೆ ಪ್ರಭುತ್ವದ ಸ್ವರೂಪದ ವರ್ಗ ಆಧಾರವನ್ನು ಉಪೇಕ್ಷಿಸಿದ್ದಾರೆ. ನಿಜ, ಈಗ ಸ್ವಾತಂತ್ರ್ಯದ ಸ್ವರೂಪದ ಬಗ್ಗೆ ಅವರ ನಿರೂಪಣೆಯನ್ನು ಪರಿಷ್ಕರಿಸಿದ್ದಾರೆ. ಆದರೆ ಅವರ ತಿಳುವಳಿಕೆಯ ಪ್ರಕಾರ ಈ ಸ್ವಾತಂತ್ರ್ಯ ನಿಜವಾದದ್ದು ಮಾತ್ರವೇ ಅಲ್ಲ, ಕಾರ್ಮಿಕ ವರ್ಗವೂ ಸೇರಿದಂತೆ ಭಾರತದಲ್ಲಿನ ಎಲ್ಲಾ ವರ್ಗಗಳೂ ಅದನ್ನು ಬೆಂಬಲಿಸುವಲ್ಲಿ ಒಂದಾಗಬೇಕು.

ಪಂಥವಾದೀ ಕಣ್ಣೋಟ

ಸಿಪಿಐ(ಎಂಎಲ್)ನ ರಚನೆಯಾಗಲು ಸ್ವಾತಂತ್ರ್ಯದ ನಂತರ ಎರಡು ದಶಕಗಳ ಕಾಲ ಕಾಯಬೇಕಾಗಿತ್ತು. 1967ರಲ್ಲಿ ಅದರ ರಚನೆಯಾಯಿತು. ವ್ಯಂಗ್ಯವೆಂದರೆ ಈ ನಕ್ಸಲ್‌ವಾದಿಗಳಿಗೆ ಸಿಪಿಐ(ಎಂ) ಮತ್ತು ಪಶ್ಚಿಮ ಬಂಗಾಳದ 1967–72ರ ಅವಧಿಯ ಸಂಯುಕ್ತ ರಂಗವೇ ಆಜನ್ಮಶತ್ರುವಾಯಿತು. ಇದು ನಂತರವೂ ಮುಂದುವರೆಯಿತು. ಭಾರತದ ಪ್ರಭುತ್ವದ ವರ್ಗ ಸ್ವರೂಪದ ಪಂಥವಾದೀ ನಿರೂಪಣೆಯ ಬಗ್ಗೆ ತಿಳಿದೇ ಇದೆ. ಅವರು ಇದು ಅರೆ ವಸಾಹತು ಮತ್ತು ಅರೆಪಾಳೆಯಗಾರೀ ಪ್ರಭುತ್ವ ಎಂದು ನಿರೂಪಿಸುತ್ತಾರೆ. ಈ ನಿರೂಪಣೆ ಭಾರತದ ಬಂಡವಾಳಶಾಹಿ ದಲ್ಲಾಳಿ ಬಂಡವಾಳಶಾಹಿ ಎಂದು ಗುರುತಿಸುತ್ತದೆ.

ಈ ದಲ್ಲಾಳಿ ಬಂಡವಾಳಶಾಹಿ ಎಂಬುದು ರಾಷ್ಟ್ರೀಯ ಬಂಡವಾಳಶಾಹಿಯ ಹಿಂದಿನ ಘಟ್ಟ. ಅಂದರೆ ಆಗ ಅವರು ವಿದೇಶಿ ಬಂಡವಾಳವಾದ ಏಜೆಂಟರು ಅಥವಾ ದಲ್ಲಾಳಿಗಳಷ್ಟೇ ಆಗಿರುತ್ತಾರೆ. ಭಾರತ ಒಂದು ಅರೆ ವಸಾಹತುವಾಗಿದೆ ಎಂಬ ಅವರ ಚೆಕಾಬಿಟ್ಟಿ ತೀರ್ಮಾನದಿಂದ ಈ ನಿರೂಪಣೆ ಹೊಮ್ಮಿದೆ. ಅರೆ ವಸಾಹತುವೆಂದರೆ ನಮ್ಮ ದೇಶ ಈಗಲೂ ಮುಂದುವರೆದ ಬಂಡವಾಳಶಾಹಿ ದೇಶಗಳ ಬಂಡವಾಳದ ಬೆಳವಣಿಗೆಯನ್ನೇ



ನಕ್ಸಲ್‌ವಾದಿಗಳ ಹಿಂಸಾಚಾರ

ಪ್ರೋತ್ಸಾಹಿಸುತ್ತಿದೆ ಮತ್ತು ವಸಾಹತು ವ್ಯವಸ್ಥೆಯಲ್ಲಿದ್ದಂತೆ ಕಚ್ಚಾ ಸರಕುಗಳನ್ನು ರಫ್ತು ಮಾಡುವ ಮತ್ತು ಉತ್ಪಾದಿತ ಸರಕುಗಳನ್ನು ಆಮದು ಮಾಡಿಕೊಳ್ಳುವ ದಲ್ಲಾಳಿಯಾಗಿಯಷ್ಟೇ ಕೆಲಸ ಮಾಡುತ್ತದೆ.

ಇಂತಹ ಒಂದು ವಾದ 1947ರ ಸ್ವಾತಂತ್ರ್ಯ ಎಂಬುದು ಕಪಟ, ಅಥವಾ ಅರೆ-ಪಾಳೆಯಗಾರಿ ಎಂಬ ನಿಲುವು ಹೇಳುವಂತೆ ಅರ್ಧ ದಾರಿ ಬಂದಿರುವಂತದ್ದು ಎಂದೇ ನಿರೂಪಿಸುತ್ತದೆ. ಇದನ್ನು ಅವರು ರೈತರ ಪಕ್ಷವರ್ತಿ(ಪಾರ್ಟಿಸಾನ್) ಸಮರದಿಂದ ಮಾತ್ರವೇ ಭಾರತೀಯ ರಾಷ್ಟ್ರದ ವಿಮೋಚನೆ ಸಾಧ್ಯ ಎಂಬ ಆಗಿನ ಚೀನೀ ಪಕ್ಷದ ವಿಶ್ಲೇಷಣೆಯನ್ನು ಕುರುಡಾಗಿ ಅನುಸರಿಸಿ ವಾದ ಮಾಡಿದ್ದಾರೆ. ಅವರಿಗೆ ಕಾರ್ಮಿಕ ವರ್ಗದ ಆಂದೋಲನವೆಂದರೆ ತಿರಸ್ಕಾರ. ಕಾರ್ಮಿಕ ವರ್ಗದ ಅಸ್ತಿತ್ವವನ್ನು ನಿರಾಕರಿಸಲು ಈ ಸಿಪಿಐ(ಎಂಎಲ್) ನ ಈ ವಿಶ್ಲೇಷಣೆ ಭಾರತದಲ್ಲಿ ಬಂಡವಾಳದ ಬೆಳವಣಿಗೆಯನ್ನೇ ಉಪೇಕ್ಷಿಸುತ್ತದೆ. ಬಂಡವಾಳಶಾಹಿಯ ಬೆಳವಣಿಗೆಯಿಲ್ಲದೆ ಬಂಡವಾಳಶಾಹಿಯ ಗೋರಿ ತೋಡುವ ಕ್ರಾಂತಿಕಾರಿಯಾಗಬೇಕಾದ ಕಾರ್ಮಿಕ ವರ್ಗ ಇರಲು ಸಾಧ್ಯವಿಲ್ಲವಲ್ಲ.

ಇಷ್ಟೇ ಅಲ್ಲ, ರೈತರ 'ಪಕ್ಷವರ್ತಿ ಸಮರ' ನಡೆಸಬೇಕು ಮತ್ತು ನಗರ ಪ್ರದೇಶಗಳನ್ನು ಸುತ್ತುವರಿಯಬೇಕು ಎಂಬ ಅವರ ಪ್ರತಿಪಾದನೆಯಿಂದಾಗಿ ಅವರು ನಗರಗಳ ಜನಸಂಖ್ಯೆ (ಬಂಡವಾಳ ಮತ್ತು ಶ್ರಮ ಎರಡೂ) ಗ್ರಾಮೀಣ ಜನತೆಯಿಂದ ಕಿತ್ತುಕೊಂಡ ಸಂಪತ್ತಿನಿಂದ ಬದುಕುತ್ತಿದೆ ಎಂಬ ಸಿದ್ಧಾಂತ ಹೇಳುವಂತಾಗಿದೆ.

ಹೀಗೆ ಪಂಥವಾದೀ ಕಣ್ಣೋಟ ಸ್ವಾತಂತ್ರ್ಯ ಎಂಬುದು ಕೇವಲ ಕಪಟ, ಅದು ನಿಜವಲ್ಲ ಎಂಬ ಸಿದ್ಧಾಂತವನ್ನು ಹುಟ್ಟಿಸಿದೆ. ಇದರಿಂದಾಗಿ ಪ್ರಧಾನ ವೈರುಧ್ಯವಿರುವುದು ಇಡೀ ಜನತೆ ಮತ್ತು ಆಳುವ ವರ್ಗಗಳ ನಡುವೆ ಎಂದು ತಪ್ಪಾಗಿ ತಿಳಿಯುತ್ತಾರೆ. ಆದ್ದರಿಂದಲೇ ಅವರು ಒಂದು ಕಿಡಿ ಹುಲ್ಲುಗಾವಲನ್ನೆಲ್ಲಾ ವ್ಯಾಪಿಸುವ ಬೆಂಕಿಯನ್ನು ಹೊತ್ತಿಸುತ್ತದೆ ಎಂಬ ನಿಲುವನ್ನು ರೂಪಿಸಿದ್ದಾರೆ.

ಈ ಮೂರು ವಿಭಿನ್ನ ವಿಶ್ಲೇಷಣೆಗಳಿಂದಾಗಿ ಎಡಪಂಥೀಯರಿಗೆ ಭಾರತದ ಸ್ವಾತಂತ್ರ್ಯದ ಸಾಧನೆಯನ್ನು ಕ್ರೋಡೀಕರಿಸುವುದು ಸಾಧ್ಯವಾಗಿಲ್ಲ.

ವರ್ಗಹೋರಾಟದ ನಿಲುವು


ಈ ನಿಟ್ಟಿನಲ್ಲಿ, ಪ್ರಗತಿಪರ ವಿದೇಶಾಂಗ ನೀತಿಯನ್ನು ಬೆಂಬಲಿಸಬೇಕು, ಅಲಿಪ್ತ ಆಂದೋಲನವನ್ನು ಬೆಂಬಲಿಸಬೇಕು, ಅದೇ ವೇಳೆಗೆ ಆಂತರಿಕ ಧೋರಣೆಗಳಿಗೆ ಸಂಬಂಧಪಟ್ಟಂತೆ ಬಂಡವಾಳಶಾಹಿ-ಭೂಮಾಲಕ ಪ್ರಭುತ್ವದ ವಿರುದ್ಧ ಯಾವುದೇ ರಾಜಿ ಮಾಡಿಕೊಳ್ಳದೆ ಹೋರಾಟ ನಡೆಸಬೇಕು ಎಂಬುದು ಸಿಪಿಐ(ಎಂ) ತಿಳುವಳಿಕೆಯಾಗಿದೆ.

ಹೀಗೆ ವಿದೇಶಾಂಗ ನೀತಿಯ ಪ್ರಶ್ನೆಗಳ ಮೇಲೆ ಸಿಪಿಐ(ಎಂ) ಬಹಿರಂಗವಾಗಿಯೇ ಆಂಗ್ಲ-ಅಮೆರಿಕ ಮತ್ತು ಇತರ ಸಾಮ್ರಾಜ್ಯಶಾಹಿ ಹಿತಾಸಕ್ತಿಗಳನ್ನು ಬಹಿರಂಗವಾಗಿಯೆ ಟೀಕಿಸುತ್ತಾ, ಅದೇ ವೇಳೆಗೆ ಸೋವಿಯೆತ್ ನೆರವನ್ನು, ಭಾರತ-ಸೋವಿಯೆತ್ ಒಕ್ಕೂಟ ಭದ್ರತಾ ಒಪ್ಪಂದವನ್ನು ಬೆಂಬಲಿಸಿದೆ.

ಸಿಪಿಐ ಕುರುಡಾಗಿ ಸೋವಿಯೆತ್ ಒಕ್ಕೂಟದ, ಸಾಮಾನ್ಯವಾಗಿ ಶಾಮೀಲುವಾದಿ ಹೂರಣವನ್ನೇ ಹೊಂದಿದ್ದ ಸಲಹೆಯನ್ನು ಅನುಸರಿಸಿದರೆ, ಸಿಪಿಐ(ಎಂ) ಸೋವಿಯೆತ್ ಪಕ್ಷದ ಅಥವಾ ಚೀನೀ ಪಕ್ಷದ ನಿರ್ದೇಶದಂತೆ ನಡೆಯಲು ನಿರಾಕರಿಸಿತು. ಸಿಪಿಐ(ಎಂಎಲ್) ಮಾರ್ಗಕ್ಕೆ ಮೂಲತಃ ಚೀನೀ ಪಕ್ಷದ ಬೆಂಬಲವಿದ್ದು ಅವರು ಚೀನಾದ ಅಧ್ಯಕ್ಷ (ಮಾವೋತ್ಸೆ ತುಂಗ್) ಭಾರತದ ಅಧ್ಯಕ್ಷ ಎಂದು ಘೋಷಿಸಿದರು.

ಇದೀಗ ಭಾರತೀಯ ಸ್ವಾತಂತ್ರ್ಯ ಭಾರತೀಯ ಜನತೆಯ ನಿಜವಾದ ಸ್ವಾತಂತ್ರ್ಯ ಎಂಬ 'ವಾಸ್ತವವಾದಿ' ಕಣ್ಣೋಟದ ಆಧಾರದ ಸಾರಾಂಶ. ಸಿಪಿಐ(ಎಂ)ನ ನೀತಿಗಳು ಭಾರತೀಯ ಜನತೆಯ ತಕ್ಷಣದ ಮತ್ತು ದೀರ್ಘಾವಧಿಯ ಹಿತಾಸಕ್ತಿಗಳನ್ನು ಆಧರಿಸಿದ್ದವೇ ಹೊರತು ಆಳುವ ವರ್ಗಗಳದ್ದಲ್ಲ. ಭಾರತ ನಿಜವಾಗಿಯೂ ಸ್ವತಂತ್ರವಾಗಿಲ್ಲ ಎಂಬ ಕಣ್ಣೋಟವನ್ನು ಅದು ಒಪ್ಪಲಿಲ್ಲ ಮಾತ್ರವಲ್ಲ, ಭಾರತದ ಸಾರ್ವಭೌಮತ್ವದ ಮೇಲೆ ಯಾವುದೇ ಆಕ್ರಮಣವನ್ನು ಸತತವಾಗಿ ಪ್ರತಿರೋಧಿಸುತ್ತಾ ಬಂದಿದೆ. ಅಲ್ಲದೆ ಭಾರತೀಯ ಜನತೆಯ ಮುಂಚೂಣಿಯಾಗಿ ಪಕ್ಷ ಎಂದೂ ತನ್ನ ಸೈದ್ಧಾಂತಿಕ ಮತ್ತು ಸಂಘಟನಾತ್ಮಕ ನಿಲುವನ್ನು

ಸೋವಿಯೆತ್ ಅಥವಾ ಚೀನೀ ಪಕ್ಷದ 'ಮಾರ್ಗದರ್ಶನ'ಕ್ಕೆ ಒಳಪಡಿಸಲಿಲ್ಲ. ಸೋದರ ಪಕ್ಷಗಳು ತಮ್ಮ 'ರಾಷ್ಟ್ರೀಯ ಹಿತ'ಗಳಿಂದ ಭಾರತೀಯ ಸನ್ನಿವೇಶವನ್ನು ತಪ್ಪಾಗಿ ಅಂದಾಜು ಮಾಡಿ ಕೊಡುವ ನಿರ್ದೇಶನಗಳನ್ನು ಅರ್ಥಮಾಡಿಕೊಂಡ ಸಿಪಿಐ(ಎಂ) ಅವುಗಳಿಂದ ತನ್ನನ್ನು ದೂರವಿರಿಸಿಕೊಂಡಿತು.



ವಿ.ಐ.ಲೆನಿನ್

ಹೀಗೆ ಸಿಪಿಐ(ಎಂ) ಮಾತ್ರವೇ ಸ್ವಾತಂತ್ರ್ಯದ ಸ್ವರೂಪವನ್ನು ಸರಿಯಾಗಿ ನಿರೂಪಿಸಿದೆ ಮತ್ತು ಇಂದಿನ ವರೆಗೂ ಸತತವಾಗಿ ತನ್ನ ನಿಲುವನ್ನು ಕಾಯ್ದುಕೊಂಡು ಬಂದಿದೆ. ಶಾಮೀಲುವಾದಿ ನಿಲುವು ಮತ್ತು ಪಂಥವಾದಿ ನಿಲುವು ಇವೆರಡೂ ವಿದೇಶಿ ಹಿತಾಸಕ್ತಿಗಳನ್ನು ಈಡೇರಿಸಿವೆ, ಅದು ಪಾಶ್ಚಿಮಾತ್ಯ ದೇಶಗಳಾಗಿರಬಹುದು ಅಥವಾ ಸೋವಿಯೆತ್ ಒಕ್ಕೂಟ ಅಥವ ಚೀನಾ ಆಗಿರಬಹುದು.

ಶಾಮೀಲುಕಾರಕ ಡಾಂಗೆವಾದಿ ನಿಲುವು ಮತ್ತು ಪಂಥವಾದಿ ನಕ್ಸಲ್‌ವಾದಿ ನಿಲುವಿಗೆ ವಿರುದ್ಧವಾಗಿರುವ ಸಿಪಿಐ(ಎಂ)ನ ನಿಲುವಿನ ಬಗ್ಗೆ ಹೇಳುವುದಾದರೆ, ಅದು ಭಾರತದಲ್ಲಿ ಮತ್ತು ಜಗತ್ತಿನ ಇತರೆಡೆ ವರ್ಗ ಹೋರಾಟದ ಸಿದ್ಧಾಂತ ಮತ್ತು ಆಚರಣೆಯನ್ನು ಆಧರಿಸಿದ ಏಕೈಕ ನಿಲುವು ಎಂಬುದನ್ನು ಅರ್ಥಮಾಡಿಕೊಳ್ಳಬೇಕು.

ಇಲ್ಲಿ ಒಂದು ಎಚ್ಚರಿಕೆಯ ಮಾತು ಅಗತ್ಯ. ಶ್ರಮಜೀವಿಗಳ ಅಂತರ್ರಾಷ್ಟ್ರೀಯತೆಗೆ ಬದ್ಧವಾದ ಒಂದು ಕಾರ್ಮಿಕ ವರ್ಗದ ಪಕ್ಷ ರಾಷ್ಟ್ರೀಯ ಹಿತಾಸಕ್ತಿಗಳ ಮೇಲೆ ವಿಪರೀತ ಒತ್ತು ನೀಡುವುದೆಂದರೆ ಅದನ್ನು ಬಂಡವಾಳಶಾಹಿ ವರ್ಗದ ಬಾಲಂಗೋಚಿಯಾಗಿ ಮಾಡಿದಂತೆಯೇ. ಅತ್ತ ಪಂಥವಾದಿ ಕಣ್ನೋಟ ವಾಸ್ತವತೆಯನ್ನು ಉಪೇಕ್ಷಿಸಿ ಕಾರ್ಮಿಕ ವರ್ಗದ ನೇತೃತ್ವದ ಜನತಾ ವಿಮೋಚನಾ ಆಂದೋಲನವನ್ನು ಬೆಳೆಸುವಲ್ಲಿ ವಿಫಲವಾಗುತ್ತದೆ.

ಶ್ರಮಜೀವಿ ಅಂತರ್ರಾಷ್ಟ್ರೀಯತೆ ಎಂದರೆ ಏನೆಂಬ ಬಗ್ಗೆ ಲೆನಿನ್‌ವಾದಿ ನಿರೂಪಣೆ ಈಗಲೂ ಕೂಡಾ ಮಾನ್ಯ. ಲೆನಿನ್ನರ ಪ್ರಕಾರ ಪ್ರತಿಯೊಂದು ದೇಶದಲ್ಲಿ ಕಾರ್ಮಿಕ ವರ್ಗ ತನ್ನದೇ ದೇಶದ ಶೋಷಕರ ವಿರುದ್ಧ ಹೋರಾಡಬೇಕು ಹಾಗೂ ಬೇರೆ ಯಾವುದೇ ದೇಶದಲ್ಲಿ ಇಂತಹ ಹೋರಾಟಕ್ಕೆ ಬೆಂಬಲ ಕೊಡಬೇಕು.

ಇದನ್ನು ಮಾಡಿರುವುದು ಸಿಪಿಐ(ಎಂ) ಮಾತ್ರ. ವಾಸ್ತವವಾದೀ ನಿಲುವು ಈ ಹೋರಾಟದಲ್ಲಿ ಬಹಳ ಪ್ರಯೋಜನಕಾರಿಯಾಯಿತು. ○



ಸ್ವಾತಂತ್ರ್ಯ : ನಿರಂತರವೇ? ನಿರಾತಂಕವೇ?

ಜಿ.ಎನ್. ನಾಗರಾಜ್

'ಸ್ವಾತಂತ್ರ್ಯ ನಮ್ಮ ಸ್ವಾತಂತ್ರ್ಯ ನಿನಗೆ ಅರವತ್ತೆರಡು ತುಂಬಿದೆಯಮ್ಮ ಸ್ವಾತಂತ್ರ್ಯ' ಇದು ನಮ್ಮ ಚಳುವಳಿಕಾರರಿಗೆ ಚೆನ್ನಾಗಿ ಗೊತ್ತಿರುವ ಹಾಡು. ಆಗಸ್ಟ್ 15 ರಂದು ಇಡೀ ದೇಶವೇ ಸ್ವಾತಂತ್ರ್ಯ ದಿನಾಚರಣೆಯಂದು ಮತ್ತೆ ಮತ್ತೆ ನೆನಪಿಸಿಕೊಳ್ಳುತ್ತದೆ. ನಾವು ಸ್ವಾತಂತ್ರ್ಯ ವನ್ನು 1947ರ ಆಗಸ್ಟ್ 15 ರಂದು ಗಳಿಸಿದ್ದೇವೆ. ಆ ಸ್ವಾತಂತ್ರ್ಯ ನಿರಂತರ, ಶಾಶ್ವತ ಎಂಬ ಕಲ್ಪನೆಯಲ್ಲಿ ದೇಶವೆಲ್ಲಾ ತೇಲಾಡುತ್ತದೆ. ಸ್ವಾತಂತ್ರ್ಯವೆಂಬುದನ್ನು ಕೇವಲ ನಮ್ಮ ದೇಶಕ್ಕೆ ಮಾತ್ರ ಸಂಬಂಧಿಸಿದ್ದು, ನಮಗೆ ಮಾತ್ರ ಸೀಮಿತವಾದದ್ದು ಎಂದಷ್ಟೇ ನೋಡಿದರೆ ಹಾಗೆಯೇ ಕಾಣುತ್ತದೆ. ಸ್ವಾತಂತ್ರ್ಯವೆಂಬುದು ಕೇವಲ ನಮ್ಮನ್ನು ನಾವೇ ಆಳಿಕೊಳ್ಳುವುದು ಎಂದು ಮಾತ್ರ ಅರ್ಥವಲ್ಲ ಅದರೊಂದಿಗೆ ಅನೇಕ ಆಶಯಗಳು ಬೆಸೆದುಕೊಂಡಿವೆ.



1947ರ ಸ್ವಾತಂತ್ರ್ಯ ಸಂಭ್ರಮದ ದಿನಾಚರಣೆ ದೆಹಲಿ

ಸ್ವಾತಂತ್ರ್ಯವೆಂದರೆ ವಸಾಹತುಶಾಹಿಯಿಂದ ಬಿಡುಗಡೆ




ಸ್ವಾತಂತ್ರ್ಯವೆಂದ ಕೂಡಲೇ ಅದು ಭಾರತ ದೇಶದ ಜನತೆ ಬ್ರಿಟಿಷರ ಆಳ್ವಿಕೆಯಿಂದ ಬಿಡುಗಡೆ ಪಡೆದಿದ್ದು ಎಂದು ಎಲ್ಲರಿಗೂ ಗೊತ್ತಿರುವ ಸಂಗತಿ. ಬ್ರಿಟಿಷರು ಭಾರತವನ್ನು ಮಾತ್ರ ಆಳುತ್ತಿರಲಿಲ್ಲ. 'ಸೂರ್ಯ ಮುಳುಗಿದ ಸಾಮ್ರಾಜ್ಯ' ವೆಂದು ಹೆಸರು ಪಡೆದ ಬ್ರಿಟಿಷರ ಆಳ್ವಿಕೆಗೆ ಏಷ್ಯಾ ಆಫ್ರಿಕಾ ಮತ್ತು ಅಮೇರಿಕಾ ಖಂಡದ ಅನೇಕ ದೇಶಗಳು, ಪ್ರದೇಶಗಳು ಸೇರಿದ್ದವು. ಭಾರತವನ್ನು ಕೇವಲ ಬ್ರಿಟಿಷರು ಮಾತ್ರ ಆಳುತ್ತಿರಲಿಲ್ಲ, ಫ್ರೆಂಚರು, ಪೋರ್ಚುಗೀಸರು ಭಾರತವನ್ನು ವಿಶ್ವದ ಅನೇಕ ದೇಶಗಳನ್ನು ಆಳುತ್ತಿದ್ದರು. ಹೀಗೆ ಬ್ರಿಟಿಷರು ಫ್ರೆಂಚರು, ಬ್ರಿಟಿಷರು, ಡಚ್ಚರು, ಇಟಲಿ, ಜರ್ಮನಿ, ಜಪಾನ್, ಅಮೇರಿಕಾಗಳು ಜಗತ್ತಿನ ಶೇ.95-96 ಭಾಗವನ್ನು ವಶಪಡಿಸಿಕೊಂಡು ಆಳುತ್ತಿದ್ದರು. ಈ ರೀತಿ ಬಂಡವಾಳಶಾಹಿಗಳು ಜಗತ್ತನ್ನೆಲ್ಲಾ ಆಕ್ರಮಿಸಿಕೊಂಡು ಶೋಷಿಸುತ್ತಿದ್ದ ವಸಾಹತು ಶಾಹಿ ಶೋಷಣೆಯಿಂದ ಈ ಎಲ್ಲಾ ದೇಶಗಳ ಜನತೆ ನಲುಗಿ ಹೋಗಿದ್ದಾರೆ. ನಮ್ಮ ದೇಶಗಳಿಂದ ಕಚ್ಚಾವಸ್ತುಗಳನ್ನು- ಖನಿಜ ಸಂಪತ್ತು, ಅರಣ್ಯ ಸಂಪತ್ತು, ಕೃಷಿ ಫಸಲು ಹಾಗೂ ಕೈಗಾರಿಕಾ ಉತ್ಪನ್ನಗಳನ್ನು ಅಗ್ಗವಾಗಿ ಬಲವಂತದಿಂದ ಕೊಂಡೊಯ್ಯುವ ಮೂಲಕ ಜನತೆಯನ್ನು ಬಡತನ, ಹಸಿವೆ, ನಿರುದ್ಯೋಗಗಳ ದವಡೆಗೆ ನೂಕಿದ್ದರು. ಈ ಶೋಷಣೆಯ ವಿರುದ್ಧ ತಿರುಗಿಬಿದ್ದು ವಸಾಹತುಶಾಹಿಗಳಿಂದ ಬಿಡುಗಡೆ ಪಡೆಯುವ ಸ್ವಾತಂತ್ರ್ಯ ಎಂಬ ಪ್ರಕ್ರಿಯೆ ಭಾರತದಲ್ಲಿ ಮಾತ್ರವೇ ಅಲ್ಲದೇ ವಿಶ್ವದ ಉದ್ದಗಲಕ್ಕೂ ನಡೆಯಿತು. ದಕ್ಷಿಣ ಅಮೇರಿಕಾದಲ್ಲಿ ಈ ಕ್ರಿಯೆ ಸ್ವಲ್ಪ ಮೊದಲಾಗಿ ಆರಂಭವಾದರೂ ಜಗತ್ತಿನ ಬಹುಭಾಗದಲ್ಲಿ 1945ರಿಂದ ಆರಂಭವಾಗಿ 1965 ರವರೆಗೂ ಎರಡು ದಶಕಗಳ ಕಾಲ ಮುಂದುವರೆಯಿತು. ಈ ಎಲ್ಲಾ ದೇಶಗಳ ಸ್ವಾತಂತ್ರ್ಯದ ಭಾಗವಾಗಿಯೇ ಭಾರತಕ್ಕೆ ಸ್ವಾತಂತ್ರ್ಯ ದೊರೆಯಿತು. ಹೀಗೆ ಸ್ವಾತಂತ್ರ್ಯವೆಂಬುದು ಜಾಗತಿಕ ಪ್ರಕ್ರಿಯೆ. ಜಗತ್ತಿನ ಇತಿಹಾಸದ ಚಲನೆಯ ಭಾಗವಾಗಿ ದೊರೆತ ಸಂಭ್ರಮ.


ವಿವಿಧ ದೇಶಗಳ ಸ್ವಾತಂತ್ರ್ಯಕ್ಕೆ ಏನಾಗಿದೆ?

ಹೀಗೆ ವಿಶ್ವದ ಅನೇಕ ದೇಶಗಳ ಜನತೆಯ ವಿವಿಧವಾದ, ವಿಧ ವಿಧವಾದ ಹೋರಾಟದ ಫಲವಾಗಿ ಆಯಾ ದೇಶಗಳು ಪಡೆದ ಸ್ವಾತಂತ್ರ್ಯ ಇಂದು ಏನಾಗಿದೆ, ಯಾವ ಸ್ಥಿತಿಯಲ್ಲಿದೆ ಎಂಬುದನ್ನು ಭಾರತದ ಜನತೆ ತಿಳಿದುಕೊಳ್ಳಬೇಕಾಗಿದೆ. ನಮ್ಮ ಜೊತೆ ಜೊತೆಗೆ ಸ್ವಾತಂತ್ರ್ಯ ಪಡೆದ ನಮ್ಮ ನೆರೆಹೊರೆಯ ದೇಶಗಳಾದ ಪಾಕಿಸ್ತಾನ, ಬಾಂಗ್ಲಾದೇಶ, ಶ್ರೀಲಂಕಾ, ಇಂಡೋನೇಷ್ಯಾ ಇತ್ಯಾದಿ ಏಷ್ಯಾದ ದೇಶಗಳು ಆಫ್ರಿಕಾ, ದಕ್ಷಿಣ ಅಮೇರಿಕಾದ ದೇಶಗಳ ಜನತೆಯ ಬಗ್ಗೆ ಯೋಚಿಸಬೇಕಾಗಿದೆ.

ಹೊಸದಾಗಿ ಸ್ವಾತಂತ್ರ್ಯ ಪಡೆದ ಅನೇಕ ದೇಶಗಳಲ್ಲಿ ಪ್ರಜಾಪ್ರಭುತ್ವ ನಾಶವಾಗಿ ಸರ್ವಾಧಿಕಾರಗಳು ನೆಲೆಗೊಂಡಿವೆ ಅಥವಾ ದೀರ್ಘಕಾಲ ಸರ್ವಾಧಿಕಾರಿಗಳ ಹಿಡಿತದಲ್ಲಿ ನರಳಿವೆ. ಈ ಸರ್ವಾಧಿಕಾರಿಗಳ ಹಿಂದೆ ಆಯಾ ರಾಷ್ಟ್ರದ ಚುನಾಯಿತ ಸರ್ಕಾರಗಳನ್ನು ಮಿಲಿಟರಿ ದಂಗೆಗಳ ಮೂಲಕ ಕಿತ್ತು ಹಾಕಲಾಗಿದೆ. (ಇತ್ತೀಚೆಗೆ ತಾನೇ ಹಾಂಡುರಾಸ್ ದೇಶದ ಚುನಾಯಿತ ಅಧ್ಯಕ್ಷನನ್ನು ಮಿಲಿಟರಿ ದಂಗೆಯ ಮೂಲಕ ಕಿತ್ತು ಹಾಕಲಾಗಿದೆ.) ಅಧ್ಯಕ್ಷ ಅಥವಾ ಪ್ರಧಾನಿಗಳನ್ನು ಕೊಲ್ಲಿಸಿ ಮಿಲಿಟರಿ ಆಡಳಿತಗಳನ್ನು ಹೇರಲಾಗಿದೆ. ಕೆಲವು ದೇಶಗಳನ್ನು ಯುಗ್ಲೋಸಾವಿಯಾದ ರೀತಿ ಚಿದ್ರ-ವಿಚ್ಛಿದ್ರಗೊಳಿಸಿ ನಾಲ್ಕಾರು ತುಂಡುಗಳನ್ನಾಗಿ ಮಾಡಲಾಗಿದೆ. ಇಂತಹ ಸರ್ವಾಧಿಕಾರಿಗಳ, ಮಿಲಿಟರಿ ದಂಗೆಗಳ ಹಿಂದೆ ಹಿಂದಿನ ವಸಾಹತುಶಾಹಿ ದೇಶಗಳ ಜಾಗವನ್ನು ಆಕ್ರಮಿಸಿರುವ ಅಮೇರಿಕಾ ನೇತೃತ್ವದ ಸಾಮ್ರಾಜ್ಯಶಾಹಿ ದೇಶಗಳ ಕೂಟದ ಕೈ ಇದೆ. ಅಮೇರಿಕಾ ಮೊದಲಾದ ಸಾಮ್ರಾಜ್ಯಶಾಹಿ ದೇಶಗಳು ಅಭಿವೃದ್ಧಿ ಶೀಲ ದೇಶಗಳಿಗೆ ನೆರವುಗಳನ್ನು ನೀಡುವುದು. ಆಯಾ ದೇಶಗಳ ಒಳಗೆ ವಿಚ್ಛಿದ್ರಕಾರಿ ಚಳುವಳಿಗಳನ್ನು ಬೆಳೆಸುವುದು. ಮಿಲಿಟರಿ ನೆರವು ನೀಡುವುದು, ಅಮೆರಿಕಾ ಮತ್ತು ಅಭಿವೃದ್ಧಿಶೀಲ ದೇಶಗಳ ಮಿಲಿಟರಿ ದಂಡನಾಯಕರು, ಬೇಹುಗಾರ ಸಂಸ್ಥೆಗಳು, ಅಧಿಕಾರಿಗಳು ವಿಶ್ವವಿದ್ಯಾಲಯಗಳು, ಸಂಶೋಧನಾ ಸಂಸ್ಥೆಗಳು, ಪತ್ರಿಕೆ -ಮಾಧ್ಯಮಗಳು



ವಿಯಟ್ನಾಂ ದೇಶದ ಮೇಲೆ ನೇರನಗ್ನ ಆಕ್ರಮಣ ನಡೆಸಿದ ಅಮೇರಿಕಾ ಸೈನ್ಯ



ಸ್ವಾತಂತ್ರ್ಯ ಕಸಿಯ ಬಯಸುವ ಸಾಮ್ರಾಜ್ಯಶಾಹಿಗಳ ದೈತ್ಯ ಬಲ

ಇವುಗಳ ನಡುವೆ ಹೆಚ್ಚು ಹೆಚ್ಚು ಸಂಪರ್ಕ, ಹತ್ತಿರದ ಸಂಬಂಧಗಳನ್ನು ಏರ್ಪಡಿಸುವುದು ಇಂತಹ ಕ್ರಮಗಳಿಂದ ಈ ಮಿಲಿಟರಿ ದಂಗೆಗಳಿಗೆ ಸರ್ವಾಧಿಕಾರಿಗಳಿಗೆ ರಂಗವನ್ನು ಸಜ್ಜುಗೊಳಿಸುವುದು ಇದು ಪ್ರಮುಖ ವಿಧಾನ. 1950ರ ದಶಕ ಇರಾನ್‌ನಿಂದ ಆರಂಭಿಸಿ ಇತ್ತೀಚಿನ ಹಾಂಡುರಾಸ್‌ವರೆಗೆ 80ಕ್ಕೂ ಹೆಚ್ಚು ದೇಶಗಳಲ್ಲಿ ಇಂತಹ ಕ್ರೌರ್ಯ, ಕೊಲೆ, ದಮನಗಳ ರಕ್ತ ಪಿಪಾಸು ಮಾರ್ಗವನ್ನು ಬಳಸಿ ಪ್ರಜಾ ಪ್ರಭುತ್ವವನ್ನು ಪಲ್ಲಟಗೊಳಿಸಲಾಗಿದೆ. ಸರ್ವಾಧಿಕಾರಿ ಆಡಳಿತಗಳ ಮೂಲಕ ಸ್ವಾತಂತ್ರ್ಯವನ್ನು ವಿವಿಧ ಪ್ರಮಾಣದಲ್ಲಿ ಪಲ್ಲಟಗೊಳಿಸಲಾಗಿದೆ.

ಜೊತೆಗೆ ಅಮೇರಿಕಾ ತಾನೇ ಅಥವಾ ಇತರ ದೇಶಗಳ ನೆರವಿನೊಂದಿಗೆ 1950ರ ದಶಕದಲ್ಲಿಯೇ ಕೊರಿಯಾ, ವಿಯೆಟ್ನಾಂ, ಪ್ಯಾಲೆಸ್ತೈನ್‌ಗಳಿಂದ ಆರಂಭಿಸಿ ಇತ್ತೀಚೆಗೆ ಇರಾಕ್, ಆಫ್ಘಾನಿಸ್ತಾನ್‌ಗಳವರೆಗೆ ನೇರವಾಗಿ ಆಕ್ರಮಣಕ್ಕೊಳಪಡಿಸಿ ಅಲ್ಲಿಯ ಸಂಪನ್ಮೂಲಗಳನ್ನು ಜನತೆಯನ್ನು ಶೋಷಣೆಗೆ ಒಳಪಡಿಸಿದೆ. ಅಮೇರಿಕಾದ ಮೊದಲ ಕಪ್ಪು ಅಧ್ಯಕ್ಷ ಬರಾಕ್ ಒಬಾಮಾರ ಆಳ್ವಿಕೆಯಲ್ಲಿಯೂ ಈ ಆಕ್ರಮಣಗಳು ಮುಂದುವರೆದಿದೆ.

ಜಾಗತಿಕ ಅನುಭವದ ಬೆಳಕಿನಲ್ಲಿ ಸ್ವಾತಂತ್ರ್ಯಾ ನಂತರದ ಭಾರತದ ಅನುಭವವನ್ನು ಮತ್ತು ಇಂದು ಭಾರತದಲ್ಲಿ ನಡೆಯುತ್ತಿರುವುದನ್ನು ವಿಶ್ಲೇಷಣೆಗೆ ಒಳಪಡಿಸಬೇಕು.

ಸ್ವಾತಂತ್ರ್ಯದ ಕೆಲವೇ ದಿನಗಳಲ್ಲಿ ಆರಂಭವಾದ ಕಾಶ್ಮೀರದ ಪ್ರಶ್ನೆ, ಇಂದಿಗೂ ಮುಂದುವರೆದಿರುವ ಭಯೋತ್ಪಾದನೆಯನ್ನು ಬೆಳೆಸುವುದಕ್ಕೆ ಅಮೇರಿಕಾ ಕಾರಣವಾಗಿದೆ. ಅಸ್ಸಾಂ, ಮಣಿಪುರ, ಮಿಜೋರಾಂ, ನಾಗಾಲ್ಯಾಂಡ್‌ಗಳಲ್ಲಿ, 2 ದಶಕಗಳ ಕಾಲದ ಖಾಲಿಸ್ತಾನದ ಹೆಸರಿನಲ್ಲಿ ಭಯೋತ್ಪಾದನೆಗೆ ಪಾಕಿಸ್ತಾನ ಹಾಗೂ ಬಾಂಗ್ಲಾದೇಶ ನೆಲವನ್ನು ಅಲ್ಲಿಯ ಮಿಲಿಟರಿಯನ್ನು ಹಾಗೂ ಸರ್ವಾಧಿಕಾರಿ ಮತ್ತು ಚುನಾಯಿತ ಸರ್ಕಾರಗಳನ್ನು ಬಳಸಿ ಭಯೋತ್ಪಾದಕರಿಗೆ ಹಣ, ತರಬೇತಿ, ಶಸ್ತ್ರಾಸ್ತ್ರಗಳನ್ನು ಒದಗಿಸಿದ್ದು ಅಮೇರಿಕಾ, ಬ್ರಿಟನ್ ಮತ್ತಿತರ ಸಾಮ್ರಾಜ್ಯಶಾಹಿ ದೇಶಗಳು, ಪಾಕಿಸ್ತಾನ ಹಾಗೂ ಬಾಂಗ್ಲಾದೇಶಗಳ ಮಿಲಿಟರಿಯೊಂದಿಗೆ ಅಮೇರಿಕಾದ ಮಿಲಿಟರಿಗೆ ಇರುವ ಸಂಬಂಧವೂ ಜಗತ್ತಿಗೆ ಗೊತ್ತಿರುವಂತದ್ದು.

ಬಾಂಗ್ಲಾದೇಶ ವಿಮೋಚನೆಯ ಸಂದರ್ಭದಲ್ಲಿ ಹಿಂದೂ ಮಹಾಸಾಗರದಲ್ಲಿ ನಾವಿಕ ಹಾಗೂ ವಾಯುಪಡೆಗಳನ್ನು ತಂದು ನಿಲ್ಲಿಸಿದ ಘಟನೆಯನ್ನು ನೆನಪಿನಲ್ಲಿಟ್ಟು ಕೊಳ್ಳಬೇಕಾಗಿದೆ. ○

ಅಮೇರಿಕಾ-ಭಾರತ ನಡುವಣ ಮಿಲಿಟರಿ ಮೈತ್ರಿ

ಇಂದಿನ ಸಂದರ್ಭದಲ್ಲಿ 2005 ಆಗಸ್ಟ್‌ನಲ್ಲಿ ಮನಮೋಹನ್‌ಸಿಂಗ್ ಮತ್ತು ಭಾರತದ ನಡುವಣ ಮಿಲಿಟರಿ ಮೈತ್ರಿಯ ಒಪ್ಪಂದವನ್ನು ಈ ಜಾಗತಿಕ ಹಾಗೂ ಭಾರತದ ಘಟನೆಗಳ ಹಿನ್ನೆಲೆಯಲ್ಲಿ ನೋಡಿದರೆ ನಮ್ಮ ದೇಶದ ಸ್ವಾತಂತ್ರ್ಯಕ್ಕೆ ಒದಗಿರುವ ಅಪಾಯ ಪ್ರಮಾಣದ ಅರಿವಾಗುತ್ತದೆ.

ಭಾರತಕ್ಕೆ ಮೊದಲಬಾರಿಗೆ ಬೃಹತ್ ಪ್ರಮಾಣದಲ್ಲಿ ಉನ್ನತ ಮಿಲಿಟರಿ ತಂತ್ರಜ್ಞಾನದ ಉಪಕರಣ ಹಾಗೂ ಶಸ್ತ್ರಾಸ್ತ್ರಗಳು ಅವುಗಳ ನೆಪದಲ್ಲಿ ಭಾರತದ ಮಿಲಿಟರಿ ನೆಲೆಗಳು, ಸ್ಥಾವರಗಳಿಗೆ ನೇರವಾಗಿ ಪ್ರವೇಶಿಸಿ ತನಿಖೆ ಮಾಡುವ ಆ ಮೂಲಕ ಭಾರತದ ಮಿಲಿಟರಿ ರಹಸ್ಯಗಳನ್ನು ಪಡೆಯುವ ಹುನ್ನಾರ, (ಇಲ್ಲಿಯವರೆಗೆ ಭಾರತಕ್ಕೆ ಮಿಲಿಟರಿ ಶಸ್ತ್ರಾ ಸ್ತ್ರ ಹಾಗೂ ತಂತ್ರಜ್ಞಾನವನ್ನು ದೊಡ್ಡ ಪ್ರಮಾಣದಲ್ಲಿ ನೀಡಿದ ಸೋವಿಯತ್ ಒಕ್ಕೂಟ ರಷ್ಯಾ, ಫ್ರಾನ್ಸ್, ಇಂಗ್ಲೆಂಡ್‌ಗಳು ಕೂಡ ಎಂದಿಗೂ ಭಾರತದ ಸಾರ್ವಭೌಮತೆಯ ಇಂತಹ ಉಲ್ಲಂಘನೆ ಮಾಡಬಯಸಿರಲಿಲ್ಲ.

ಈ ಶಸ್ತ್ರಾಸ್ತ್ರಗಳ ಬಳಕೆ ಬಗ್ಗೆ ತರಬೇತಿ ನೀಡುವ ಭಾರತ- ಅಮೇರಿಕಾ ಜಂಟಿ ಸಮಾರಾಭ್ಯಾಸಗಳ ವಿದೇಶಗಳಲ್ಲಿ ಎರಡೂ ಸೈನ್ಯಗಳೂ ಜಂಟಿ ಕಾರ್ಯಾಚರಣೆ ನಡೆಸುವ ಸಂದರ್ಭಗಳಲ್ಲಿ ವಿವಿಧ ಹಂತದ ಭಾರತದ ಮಿಲಿಟರಿ ಅಧಿಕಾರಿಗಳೊಂದಿಗೆ ಅತ್ಯಂತ ಹತ್ತಿರದ ಸಂಬಂಧ ಬೆಳೆಸುವ ಅವಕಾಶಗಳ ಬಗ್ಗೆ ಭಾರತದ ಜನತೆ ಎಚ್ಚರ ವಹಿಸಬೇಕು. ಹಿಂದೆ ಬ್ರಿಟಿಷ್, ಫ್ರೆಂಚ್, ಪೋರ್ಚುಗೀಸರು ಭಾರತವನ್ನು ಆಕ್ರಮಿಸುವ ಸಂದರ್ಭದಲ್ಲಿ ಪ್ರದೇಶ ಪ್ರದೇಶವಾಗಿ ಆಕ್ರಮಿಸಿದ್ದನ್ನು ಭಾರತದ ವಿವಿಧ ರಾಜ, ನವಾಬರುಗಳು, ಅವರ ಅಧಿಕಾರಿಗಳನ್ನು ಬಳಸಿಕೊಂಡು ತಮ್ಮ ಕೆಲಸ ಸುಲಭ ಮಾಡಿಕೊಂಡಿದ್ದನ್ನು ಮರೆಯಬಾರದು.

ಶುಭಾಶಯಗಳೊಂದಿಗೆ

ಗ್ರಾಮ ಪಂಚಾಯಿತಿ ಕಾರ್ಯಾಲಯ

114 ಡಣಾಪುರ - 583222

ತಾಲೂಕು : ಹೊಸಪೇಟೆ, ಜಿಲ್ಲೆ : ಬಳ್ಳಾರಿ

ಶ್ರೀಮತಿ ಸುಮಂಗಳ ಬಸಪ್ಪ	ಶ್ರೀ ಕೆ. ದೇವಪ್ಪ.	ಶ್ರೀ ಎಂ. ಜಂಬಯ್ಯ ನಾಯಕ
ಅಧ್ಯಕ್ಷರು	**ಉಪಾಧ್ಯಕ್ಷರು**	**ಕಾರ್ಯದರ್ಶಿ**

ಸದಸ್ಯರು

ಶ್ರೀ ಈ. ಪರಮೇಶ್ವರ.
ಶ್ರೀಮತಿ ಹನುಮವ್ವ.
ಶ್ರೀ ಕೆ. ಬಸವರಾಜ.
ಶ್ರೀಮತಿ ಸುಶೀಲಮ್ಮ.
ಶ್ರೀಮತಿ ಹನುಮಕ್ಕ.
ಶ್ರೀ ಭೀಮಪ್ಪ.
ಶ್ರೀ ಎಲ್. ಗಾಳೆಪ್ಪ.
ಶ್ರೀ ಕೆ. ಜಂಬಯ್ಯ.
ಶ್ರೀ ಸಿ. ಎನ್. ಮೈಲಾರಪ್ಪ.
ಶ್ರೀಮತಿ ನಿಂಗಮ್ಮ ಅರ್ಜುನಪ್ಪ.
ಶ್ರೀ ಸುಂದರೇಶ್.
ಶ್ರೀ ಕೆ. ಅಂಜಿನೆಪ್ಪ.
ಶ್ರೀ ಬಿ. ಷಣ್ಮುಖಪ್ಪ.
ಶ್ರೀ ಜಾಂಬಮುನಿ

ಶ್ರೀಮತಿ ಪಾರ್ವತಮ್ಮ.
ಶ್ರೀಮತಿ ಜುಬೇದ ಬೇಗಮ್.
ಶ್ರೀ ಸಿ. ದುರುಗಪ್ಪ.
ಶ್ರೀ ಎನ್. ಬಾಲಪ್ಪ
ಶ್ರೀಮತಿ ಚೌಡಮ್ಮ.
ಶ್ರೀಮತಿ ಸುನಂದಮ್ಮ.
ಶ್ರೀಮತಿ ಹಂಪಮ್ಮ
ಶ್ರೀ ವೆಂಕಟೇಶ್.

ಗ್ರಾಮ ಪಂಚಾಯಿತಿ ಸಿಬ್ಬಂದಿ

ಶ್ರೀ ವೀರಪ್ಪ, ಶ್ರೀ ಮಲ್ಲಿಕಾರ್ಜುನ,
ಶ್ರೀ ನಾಗಪ್ಪ, ಶ್ರೀ ಕಣಿಮೆಪ್ಪ,
ಶ್ರೀ ಸೋಮಪ್ಪ, ಕು. ನಾಗರತ್ನ,
ಶ್ರೀ ಗಂಗಾಧರ.

ಶುಭಾಶಯಗಳೊಂದಿಗೆ

ಗ್ರಾಮ ಪಂಚಾಯಿತಿ ಕಾರ್ಯಾಲಯ

ಮರಿಯಮ್ಮನಹಳ್ಳಿ

ತಾಲೂಕು : ಹೊಸಪೇಟೆ ಜಿಲ್ಲೆ : ಬಳ್ಳಾರಿ

ಶ್ರೀ ಕಲಾಲ್ ಮಂಜುನಾಥ.	ಶ್ರೀಮತಿ ಹೆಚ್. ಭಾರತಿ.	ಶ್ರೀ ಜಿ.ಆಂಜನೇಯಲು.
ಅಧ್ಯಕ್ಷರು	**ಉಪಾಧ್ಯಕ್ಷರು**	**ಕಾರ್ಯದರ್ಶಿ**

ಸದಸ್ಯರು

ಶ್ರೀ ಮತಿ ನಾಗಮ್ಮ.
ಶ್ರೀ ಸಿ.ಯು.ಎಂ. ದ್ವಾರಕನಾಥ.
ಶ್ರೀ ಎ. ಖಾಸಿಂಸಾಬ್
ಶ್ರೀ ನಾಲಬಂದಿ ಶೇಖಸಾಬ್.
ಶ್ರೀಮತಿ ಹೆಚ್. ಮಮತಾಜ್ ಬೇಗಂ.
ಶ್ರೀ ಇಮಾಂಭಾಷಾ ಬೇಲ್ದಾರ್
ಶ್ರೀ. ಪಿ. ಪೀರಸಾಬ್.
ಶ್ರೀ ಕೆ. ಅಂಬಣ್ಣ.
ಶ್ರೀ ಜಿ. ಚಂದ್ರಶೇಖರ್.
ಶ್ರೀ ನೀರಳ್ಳಿ ಹನುಮಂತಪ್ಪ.
ಶ್ರಿಮತಿ ಮರಡಿ ಗಂಗಮ್ಮ.
ಶ್ರೀಮತಿ ಬಿ. ಚಂದ್ರಮ್ಮ.
ಕುಮಾರಿ ನಿರ್ಮಲ ಹುರುಕುಳ್ಳಿ.
ಶ್ರೀ ಪೂಜಾರಿ ನಾಗರಾಜ್.
ಶ್ರೀ ರಾಘವೇಂದ್ರ ಶೆಟ್ಟಿ.
ಶ್ರೀ ವಿಜಯ್ ಕುಮಾರ.
ಶ್ರೀಮತಿ ಜಯಂತಿ ಬಾಯಿ.
ಶ್ರೀ ಪತ್ತಾರ್ ಹೊನ್ನುರಾಲಿ ಸಾಬ್.
ಶ್ರೀಮತಿ ಕೆ. ರೂಪಶ್ರೀ
ಶ್ರೀಮತಿ ಶಾರದ.
ಶ್ರೀಮತಿ ಉಪ್ಪಾರ್ ಸುನೀತಾ.
ಶ್ರೀ ಗೌಳಿ ವಿರುಪಾಕ್ಷಪ್ಪ.
ಶ್ರೀ ಬಿ. ತಾಯಪ್ಪ.
ಶ್ರೀ ಶಹಾಪುರ ಹ್ಯಾಟಿ ಹುಲುಗಪ್ಪ.
ಶ್ರೀಮತಿ ಅಲಗಿ ಹನುಮಂತಮ್ಮ.
ಶ್ರೀ ಕಪ್ಪಗಲ್ ಸುಬ್ರಮಣ್ಯಂ.
ಶ್ರೀ ಕೂಲಳ್ಳಿ ರಾಮಪ್ಪ.
ಶ್ರೀ ಭೂದಳ್ಳಿ ವೆಂಕಟೇಶ್.
ಶ್ರೀ ಲಕ್ಕಿಮರದ ವೆಂಕಟೇಶ್.
ಶ್ರೀಮತಿ ಜಿ.ಪಿ. ನೀಲಾಬಾಯಿ.
ಶ್ರೀ ಎಲ್. ರಾಮಾಜಿನಾಯ್ಕ.
ಶ್ರೀ ಎನ್. ರಾಮನಾಯ್ಕ.
ಶ್ರೀ ಎಂ. ಲಕ್ಷ್ಮಣ ನಾಯ್ಕ.
ಶ್ರೀಮತಿ ಲಕ್ಷ್ಮಮ್ಮ.

ಗ್ರಾಮ ಪಂಚಾಯಿತಿ ಸಿಬ್ಬಂದಿ ವರ್ಗ

ಶ್ರೀ ಎಂ. ಜಿವಾನ್ ಸಾಬ್,
ಶ್ರೀ ಎನ್. ಮಂಜುನಾಥ,
ಶ್ರೀ ಕೆ. ಕನಕಪ್ಪ,
ಶ್ರೀ ಎ. ಬಾಜಾಹುಸೇನ್,
ಶ್ರೀ ಜಿ. ಹನುಮಂತ,
ಶ್ರೀ ಕನ್ನಪ್ಪ.

ಶುಭಾಶಯಗಳೊಂದಿಗೆ

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸರ್ಕಾರಿ ನೌಕರರ ಸಂಘ (ರಿ)

ಬಳ್ಳಾರಿ ಜಿಲ್ಲಾ ಘಟಕ. ಬಳ್ಳಾರಿ

ಶ್ರೀ ಎಂ. ಜಂಬಯ್ಯ ನಾಯಕ.	ಶ್ರೀ ಈ. ಕೃಷ್ಣಮೂರ್ತಿ.	ಜೆ. ಗೋವಿಂದಾಚಾರ್	ಶ್ರೀ ಆರ್.ಬಿ.ಬಸವನಗೌಡ
ಅಧ್ಯಕ್ಷರು	ಗೌರವಾಧ್ಯಕ್ಷರು	ಕಾರ್ಯದರ್ಶಿ	ಖಜಾಂಚಿ
9449054547	9448516222	9986225638	9449634147

ಉಪಾಧ್ಯಕ್ಷರು

ಶ್ರೀ ನಾಗಪ್ಪ. ಬಳ್ಳಾರಿ
ಶ್ರೀ ಪತ್ರೆಪ್ಪ. ಹಡಗಲಿ
ಶ್ರೀ ಬಸವರಾಜ್ ಕಮ್ಮಾರ್. ಹೆಚ್.ಬಿ.ಹಳ್ಳಿ
ಶ್ರೀ ರುದ್ರಪ್ಪ. ಸಂಡೂರು
ಶ್ರೀ ಸುಹಾಸ್ ಜಾದವ್. ಹೊಸಪೇಟೆ

ಸಹ ಕಾರ್ಯದರ್ಶಿಗಳು


ಶ್ರೀ ಮಹ್ಮದ್ ಅಲಿ. ಹೊಸಪೇಟೆ
ಶ್ರೀ ಕೆ. ಆನಂದ. ಸಿರುಗುಪ್ಪ
ಶ್ರೀ ಸುಭಾಸ್ ಮೇಟಿ. ಹಡಗಲಿ

ಸಂಘಟನಾ ಕಾರ್ಯದರ್ಶಿಗಳು

ಶ್ರೀ ಜಿ.ಎಸ್. ಜಂಬಣ್ಣ. ಬಳ್ಳಾರಿ
ಶ್ರೀ ರಾಮಕೃಷ್ಣ. ಕೂಡ್ಲಿಗಿ
ಶ್ರೀ ಮಲ್ಲಿಕಾರ್ಜುನ. ಹೊಸಪೇಟೆ

ಕಾರ್ಯಕಾರಿ ಸಮಿತಿ

ಶ್ರೀ ವಿ.ಬಸಪ್ಪ. ಸಂಡೂರು
ಶ್ರೀ ದೇವೇಂದ್ರಪ್ಪ. ಹ.ಬೊ.ಹಳ್ಳಿ
ಶ್ರೀ ಸೈಯದ್ ಹಜರತ್‌ಷಾ. ಕೂಡ್ಲಿಗಿ
ಶ್ರೀ ಮಾನಪ್ಪ. ಸಿರುಗುಪ್ಪ
ಶ್ರೀ ಪ್ರಭಾಕರ. ಬಳ್ಳಾರಿ
ಶ್ರೀ ಹೇಮಣ್ಣ. ಹಡಗಲಿ
ಶ್ರೀ. ಕೆ.ಎಂ.ಸ್ವಾಮಿ. ಹ.ಬೊ.ಹಳ್ಳಿ
ಶ್ರೀ ಅಶೋಕ. ಕೂಡ್ಲಿಗಿ
ಶ್ರೀ ಈರಣ್ಣ. ಸಂಡೂರು
ಶ್ರೀ ಶಾಂತನಗೌಡ. ಹೊಸಪೇಟೆ
ಶ್ರಿ ಬಿ.ಚಂದ್ರಮೌಳಿ. ಕೂಡ್ಲಿಗಿ
ಶ್ರೀ ಬಸವನಗೌಡ. ಸಿರುಗುಪ್ಪ
ಶ್ರೀ ಶೇಷಾವಲಿ. ಬಳ್ಳಾರಿ
ಶ್ರೀ ನಿಜಲಿಂಗಪ್ಪ. ಸಂಡೂರು



ಶುಭಾಶಯಗಳೊಂದಿಗೆ

ಅಂಬಿಕಾ ನರ್ಸಿಂಗ್ ಹೋಂ.


ಡಾ. ಸುಭಾಷಿಣಿ

ಡಾ. ದುರ್ಗಾ ಪ್ರಸಾದ್


ವಿರಾಜಪೇಟೆ ಕೊಡಗು ಜಿಲ್ಲೆ – 571218

ಶುಭಾಶಯಗಳೊಂದಿಗೆ

ಮದುವೆಯ ಸವಿನೆನಪಿಗೆ 21.05.2009



ಶ್ರೀ ಮುದುರಂಗಪ್ಪ ಜೊತೆ ಶ್ರೀಮತಿ ಮಂಜುಳಾ



ಶ್ರೀ ಅಮರೇಶ ಜೊತೆ ಶ್ರೀಮತಿ ಅಂಬಿಕಾ

ಸಿ.ಪಿ.ಐ(ಎಂ) ಮುಖಂಡರಾದ ಮುದುರಂಗಪ್ಪ ಗುಡಿಸಲಿ.

ಸಾ. ಜಾಲಹಳ್ಳಿ, ತಾಲೂಕು ದೇವದುರ್ಗ,

ರಾಯಚೂರು ಜಿಲ್ಲೆ.



ಶುಭಾಶಯಗಳೊಂದಿಗೆ

ಶ್ರೀ ಸಣ್ಣ ಮಾರೆಪ್ಪ.

ತಾಲೂಕ ಅಧ್ಯಕ್ಷರು ಮೊ : 9448667163

ಬುಡ್ಗ ಜಂಗಮ ಕ್ಷೇಮಾಭಿವೃದ್ಧಿ ಸಂಘ (ರಿ)

ಹೊಸಪೇಟೆ ತಾಲೂಕು.

ತುಂಗಭದ್ರ ಅಲೆಮಾರಿ ಜನಾಂಗದ ವಿವಿದೋದ್ದೇಶ ಸಹಕಾರಿ ಸಂಘ,

ಯುವಶಕ್ತಿ ಸಂಘ, ಹೋಸಪೇಟೆ

ಮ.ನಂ. 36, ವಾರ್ಡ್ ನಂ. 9,
ಅರವಿಂದನಗರ ಪಕ್ಕದಲ್ಲಿ ಬುಡ್ಗ ಜಂಗಮ ಕಾಲೋನಿ,
ಬಸ್ ಡಿಪೋ ಹಿಂದೆ, ಹೊಸಪೇಟೆ – 583201,
ಬಳ್ಳಾರಿ ಜಿಲ್ಲೆ

with best compliments from

Tel : 08254 - 264266, 264398, 264288

GREENLAND TILES LTD.

Benaju, P.O. GULVADI - 576283,
Kundapur Tq, Udupi Dist., Karnataka State.

N.T. POOOJARI
(chairman / Mg. Director)

with best compliments from

Mr. R. UMA

LIC Malleshwaram
BANGALORE

Protect Public Sector Insurance Industry

ಶುಭಾಶಯಗಳೊಂದಿಗೆ

ವ್ಯವಸಾಯ ಸೇವಾ ಸಹಕಾರ ಬ್ಯಾಂಕ್ ನಿ.,

ಹಂಪಾಪಟ್ಟಣ

ಹಗರಿಬೊಮ್ಮನ ಹಳ್ಳಿ ತಾಲೂಕು, ಬಳ್ಳಾರಿ ಜಿಲ್ಲೆ

ವೈ.ನಂ.ಡಿ.ಆರ್.ವೈ./ಎಸ್./5283/76–77

(ಹಣಪೂರೈಕೆಯ ಸಂಸ್ಥೆ : ಬಿ.ಡಿ.ಸಿ.ಸಿ. ಬ್ಯಾಂಕ್ ನಿ.,ಹೊಸಪೇಟೆ)

ಶ್ರೀಮತಿ ವಿ. ಮಾಯವ್ವ. ಅಧ್ಯಕ್ಷರು
ಶ್ರೀ ಎಂ. ಈಶಪ್ಪ. ಉಪಾಧ್ಯಕ್ಷರು
ಶ್ರೀ ಮಲ್ಲಿಕಾರ್ಜುನ. ವ್ಯವಸ್ಥಾಪಕರು

ಶ್ರೀ ಎಸ್.ಕಲ್ಲಪ್ಪ.	ನಿರ್ದೇಶಕರು
ಶ್ರೀ ಕೆ.ಎಂ. ಉಡುಚಪ್ಪ.	ನಿರ್ದೇಶಕರು
ಶ್ರೀ ಎ.ಜಿ.ಚನ್ನಬಸವನಗೌಡ.	ನಿರ್ದೇಶಕರು
ಶ್ರೀ ಎಸ್. ಮಲ್ಲಿಕಾರ್ಜುನ.	ನಿರ್ದೇಶಕರು
ಶ್ರೀ ಪಿ. ಶಿವಾನಂದಗೌಡ.	ನಿರ್ದೇಶಕರು
ಶ್ರೀ ಹೆಚ್. ಹನುಮಂತಪ್ಪ.	ನಿರ್ದೇಶಕರು

ವೃತ್ತ ಮೇಲ್ವಿಚಾರಕರು ಬಿ.ಡಿ.ಸಿ.ಸಿ. ಬ್ಯಾಂಕ್.(ಲಿ)
ಹ.ಬೊ.ಹಳ್ಳಿ ವೃತ್ತ ಹಾಗೂ ಸಿಬ್ಬಂದಿ ವರ್ಗ

ಶುಭಾಶಯಗಳೊಂದಿಗೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)

ಬೆಂಗಳೂರು ಉತ್ತರ ವಲಯ.

1ನೇ ಮೈನ್, ಯಶವಂತಪುರಂ,

ಬೆಂಗಳೂರು – 560022

CPIM

ಶುಭಾಶಯಗಳೊಂದಿಗೆ

ಎಸ್‌ಟಿಡಿ : 08254 ಫೋನ್ : 232301

ಹಂಚಿನ ಕಾರ್ಖಾನೆ ಕಾರ್ಮಿಕರ ಸಹಕಾರ ಸಂಘ

ನಿಯಮಿತ. ಕುಂದಾಪುರ

ನೋಂದಣಿ ನಂ. 15751/87–88

ಅಧ್ಯಕ್ಷರು : ಶ್ರೀ ಎಚ್. ನರಸಿಂಹ.

ಉಪಾಧ್ಯಕ್ಷರು : ಶ್ರೀ ಮುತ್ತಯ್ಯ ಕನ್ಯಾಣ.

ಕಾರ್ಯದರ್ಶಿ : ಶ್ರೀ ರಮಾನಾಥ ಭಂಡಾರಿ.

ಆಡಳಿತ ಮಂಡಳಿ ಸದಸ್ಯರು :

ಶ್ರೀ ವಿ. ನರಸಿಂಹ.

ಶ್ರೀ ಆನಂದ ಶೆಟ್ಟಿ

ಶ್ರೀ ಎಲ್. ಶ್ರೀನಿವಾಸ್

ಶ್ರೀ ದೋಣಿ ಮನೆ ಲಕ್ಷ್ಮಣ.

ಶ್ರೀ ಶಂಕರ ದೇವಾಡಿಗ.

ಶ್ರೀಮತಿ ಗಿರಿಜ.

ಶ್ರೀ ಡಿ. ಅಣ್ಣಪ್ಪ.

ಸಿಬ್ಬಂದಿ ವರ್ಗ :

ಶ್ರೀ ಉತ್ಕಲ.ಕೆ. ಶ್ರೀ ಶಂಕರ ಆನಗಳ್ಳಿ.

ಶುಭಾಶಯಗಳೊಂದಿಗೆ

ಅಧ್ಯಕ್ಷರು / ಕಾರ್ಯದರ್ಶಿ


ಗ್ರಾಮ ಪಂಚಾಯತ ಮಿರಿಯಾಣ.

ಮಿರಿಯಾಣ ಅಂಚೆ,

ಚಿಂಚೋಳಿ ತಾ, ಗುಲಬರ್ಗಾ ಜಿಲ್ಲೆ



ಶ್ರೀ ಬಂಡೆಪ್ಪ. ಕಾರ್ಯದರ್ಶಿ



ಶುಭಾಶಯಗಳೊಂದಿಗೆ

ಭಾರತ ವಿದ್ಯಾರ್ಥಿ ಫೆಡರೇಷನ್

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ

ಕರ್ನಾಟಕ ರಾಜ್ಯ ಸಮಿತಿಗಳು

ಬೆಂಗಳೂರು



ಶುಭಾಶಯಗಳೊಂದಿಗೆ

ಅಧ್ಯಕ್ಷರು / ಕಾರ್ಯದರ್ಶಿ


ಗ್ರಾಮ ಪಂಚಾಯತ

ಪಸ್ತಪುರ

ಪಸ್ತಪುರ ಅಂಚೆ,

ಚಿಂಚೋಳಿ ತಾ, ಗುಲಬರ್ಗಾ ಜಿಲ್ಲೆ





ಶ್ರೀ ಭವಾನ ಸಿಂಗ್ ರಾಠೋಡ್ ಶ್ರೀ ಜೆ.ಪಿ. ಗುರುಲಿಂಗಯ್ಯ

ಅಧ್ಯಕ್ಷರು ಕಾರ್ಯದರ್ಶಿ

ಶುಭಾಶಯಗಳೊಂದಿಗೆ

ಅಧ್ಯಕ್ಷರು / ಕಾರ್ಯದರ್ಶಿ

ಗ್ರಾಮ ಪಂಚಾಯತ

ಪೋಲಕಪಳ್ಳಿ

ಪೋಲಕಪಳ್ಳಿ ಅಂಚೆ,

ಚಿಂಚೋಳಿ ತಾ, ಗುಲಬರ್ಗಾ ಜಿಲ್ಲೆ





ಶ್ರೀ ಸೀನು ಹೊಸಮನಿ ಶ್ರೀ ವೆಂಕಟೇಶ.ಎಸ್. ದುಗ್ಗನ್

ಅಧ್ಯಕ್ಷರು ಕಾರ್ಯದರ್ಶಿ

ಶುಭಾಶಯಗಳೊಂದಿಗೆ

ದಿ ಗುಲ್ಬರ್ಗ ಜಿಲ್ಲಾ ಕೋ- ಆಪರೇಟಿವ್ ಸೆಂಟ್ರಲ್ ಬ್ಯಾಂಕ್. ಲಿ.

ಚಿಂಚೋಳಿ ಶಾಖೆ,

ಚಿಂಚೋಳಿ, ಗುಲಬರ್ಗಾ ಜಿಲ್ಲೆ



ಶುಭಾಶಯಗಳೊಂದಿಗೆ

ಕವಿರಾಜ್ ಪಾಟೀಲ್.

ಕೊರವಿ. ಗುಲಬರ್ಗಾ ಜಿಲ್ಲೆ



ಭಾರತದ ರಾಜಕಾರಣದಲ್ಲಿ 'ಜನಶಕ್ತಿ'ಯ ಅಗಾಧ ಸಾಮರ್ಥ್ಯವನ್ನು ಸಾಬೀತುಪಡಿಸುವಲ್ಲಿ
ದೃಢವಾದ ಹೆಜ್ಜೆಗಳನ್ನಿಟ್ಟು ದಾರಿ ತೋರಿದ

ಕಾಮ್ರೇಡ್ ಜ್ಯೋತಿ ಬಸು

ಲಾಲ್ ಸಲಾಂ

RELIANCE Life Insurance

Anil Dhirubhai Ambani Group

cda elite

A Reliance Capital Company

Balakrishna Gouda

Channel Development Associate


Reliance Life Insurance Co. Ltd.

Future Care Services, Balaji Building, Opposite ICICI Bank

Yellapur Road, Sirsi, Karnataka - 581 401

Phone : 08384-234433 Mobile : 9902720400 / 9343585444

futurecare.sirsi@rediffmail.com



ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ, ಬೆಳಗಾವಿ

ಸಂಪೂರ್ಣ ಸ್ವಚ್ಛತಾ ಆಂದೋಲನ

ಜಿಲ್ಲಾ ನೆರವು ಘಟಕ

"ಸ್ವಾಭಿಮಾನಕ್ಕಾಗಿ ಸ್ವಚ್ಛತೆ"

'ಅಂತರಂಗ ಹಾಗೂ ಬಹಿರಂಗದ ಶುದ್ಧತೆ
ದೈವತ್ವಕ್ಕೆ ಕೊಂಡೊಯ್ಯುತ್ತದೆ' – ಮಹಾತ್ಮ ಗಾಂಧೀಜಿ

ಸ್ವಾತಂತ್ರ್ಯ ದಿನೋತ್ಸವದ ಹಾರ್ದಿಕ ಶುಭಾಶಯಗಳು

"ನಿರ್ಮಲ ಗ್ರಾಮ ಪುರಸ್ಕಾರ, ಸರ್ಕಾರದ ಹೊಸ ಅವಿಷ್ಕಾರ"

"ನಿರ್ಮಲ ಗ್ರಾಮ, ಆರೋಗ್ಯ ಧಾಮ"

ಶುಭ ಕೋರುವವರು

ಜಿಲ್ಲಾ ನೀರು ಮತ್ತು ನೈರ್ಮಲ್ಯ ಸಮಿತಿ,
ಜಿಲ್ಲಾ ಪಂಚಾಯತ, ಬೆಳಗಾವಿ